ಉಪಾಧ್ಯಕ್ಷರು :- ಈ ವಿಷಯದ ಮೇಲಿನ ಚರ್ಚೆ ಇಲ್ಲಿಗೆ ಮುಗಿಯಿತು. ಸರ್ಕಾರ ಈಗಾಗಲೇ ಉತ್ತರಿಸಿದ್ದಾರೆ. ಇನ್ನು ಆಯವ್ಯಯದ ಮೇಲಿನ ಚರ್ಚೆ ಮುಂದುವರೆಯುವುದು.

SRI QAMARUL ISLAM (Gulbarga) :- Mr. Deputy Speaker, the Hon'ble Finance Minister has presented the budget for 1995-96 on 23-3-1995. In his speech, he has said that the main feature of the budget is to help the poor people of the State. But, actually it is not so. I have gone through the speech. In my opinion, this budget is anti-poor, this budget is not progressive, this budget has not covered any new area for the upliftment of the poor. I will now go into detail. This budget, in my opinion, has not done any justice to the backward regions of Karnataka; Hyderabad-Karnataka area, Malnad area and also the border district areas. This budget discriminates between the urban poor and the rural poor. This budget also discriminates the people of the urban area living in and around Bangalore and also the people of the urban areas of other parts of the State. This budget has not declared any new policy for the overall uplift of the minorities. This budget has imposed a tax of Rs.244 crores, which is a record. Sir, when I say this budget as anti-poor, we all know that we are rice-eaters or wheat-eaters. Once this Government has reduced the rate of rice to Rs.3.20 a kg. to the green card holders, at the same time, the people who are wheat- eaters, should also be given the same concession. Wheat cannot be consumed directly. It has to be converted to Atta, soji and then it has to be consumed. Here, 4% tax has been imposed on the wheat products like Atta, Maida as well as soji. They are food of the common man. If you go to a

hotel, you can see Shira, Upma, Poori. All these are wheat products, even bread and biscuits. In the morning people, take bread and in the hospital also people are given bread and tax has been imposed on it. I remember in the year 1993, 3% tax was imposed on the same wheat products, Atta, Maida, soji, and then the Leader of the Opposition, now a Minister for Industries, said that these are the products which are consumed by the common man. Veerappa Moily Government, when it imposed the tax, there had been objections terming it as anti-poor and the same people who were sitting in the Opposition benches, who very strongly opposed, who have given threat to the then ruling party that this is common men's good, have not imposed 4% tax on these products. Sir, if you go through the election manifesto of the Janata Dal and during election speeches, they have said if they come to power the Janata Dal will not impose tax on foodgrains. I have said already that wheat cannot be consumed directly. Wheat has to be converted and then only consumed. That means, this Budget which has been presented in this House by the Janata Dal government, does not justify its own manifesto. The promises were made before the people during the elections by the Janata Dal that they will not impose tax on foodgrains. Now, this Government has imposed 4% tax. We all know that the States of Maharashtra and Goa, which are neighbouring States, have not imposed tax on the wheat products. Kholapura, which is very near to Sholapur, near Lattur. All these products will come to Karnataka from those States and also if you take the atta, maida, it is Rs.600 per quintal. What is the tax? It is 4%, Rs.24/-. Turnover tax, automatically 2.5%, Rs.15/-

and on last point of Rs.11/-. That means, the additional burden to the consumer will be Rs.50 per bag, i.e., the quintal. The poor man, who eats bread, the poor man who eats Idli, Shira or Upma - on all these persons tax has been imposed. Through you I request the Hon'ble Finance Minister, please keep to your promise which you have made during the elections to the people of Karnataka and if you have to keep that promise, you have to immediately withdraw these taxes on Atta, Maida and all.

We are coming from Hyderabad-Karnataka areas, where in north Karnataka, tax on oil seeds has been reduced from 3 to 2%. Actually there is no tax in the border districts. My suggestion is, that tax on oil seeds has also to be withdrawn. Because, all these seeds, sun flower, or groundnut and other seeds, are all going to Maharashtra, because there is no tax there. Here the farmers are producing the seeds in Gulbarga and marketing there in the neighbouring districts in Maharashtra. If you have a secret survey in Akkalkot taluk in Maharashtra, you will find that 56 oil seed industries are there, whereas in Gulbarga city only 22. If you have a secret survey, out of 56, 90% of the seeds we are getting from your own district because your State has imposed the tax whereas the Maharashtra has not imposed. So, I wanted that tax on the oil seed should also to be withdrawn.

Here in the speech in page 47 & 48, Urban Development, I have said the main feature is not to help the poor. It has discriminiated the urban poor people in and

around Bangalore with other urban people of the State. Sir, there are 66 MLAs, who are representing urban areas out of 224 seats. That means, more than 25-30% of the population is represented by 66 MLAs. Here, a Comprehensive Development Programme for the Megacity of Bangalore has come up and in that programme aid will be taken from Asian Development Bank for the development of Mysore and then Tumkur and Channapatna and Ramanagaram, the constituency of the Hon'ble Chief Minister was also added in it. With these areas, the comprehensive programme has been delcared. Sir, there are five other corporations, Hubli-Dharwar, Mangalore, Belgaum, Gulbarga and also the City Municipalities, whether it is Bidar, Raichur or Bellary. In all these city Municipalities and the urban corporations, there is no funds to release the salary for the employees of the Corporations or the city Municipalities. This is the position. There are no drinking water facilities. The extension areas of these corporations and city municipalities are worse than the areas of the rural Hoblis. There is no drainage systems, there is no road, even the formation of roads are not existing in these areas.

MR. SPEAKER:- So, you admit that the rural position is very bad.

SRI QAMARUL ISLAM :- Yes both the situation. Now I am very much emphasising the Government should see that this kind of discrimination is not there. I am just pointing out the discrimination. This Programme has come. I want to give suggestion also. I just want to say

that these corporations and the City Municipalities and the Urban areas, that is a population of one crore, re - presented by 66 MLAs., here a scheme has come for areas in and around Bangalore. Whereas nothing has been given for urban areas of other parts of the State.

MR. SPEAKER :- You want some developmental activities in these areas. You are also suggesting that taxes levied should be withdrawn. Money is required for developmental activities. Why don't you suggest other fertile areas where fresh taxes could be levied so that Government can take suggestions?

SRI QAMARUL ISLAM :- That suggestion I will give, what is to be withdrawn, what is to be done. I was speaking about the discrimination. I just say that the position of the urban areas, which are coming under the City Municipalities, Corporations, is also worse. There is no drinking water system, no drainage system, no formation of roads. As per the 74th Constitutional Amendment, the Government is bound to de-limit the constituencies and the areas, and suggestions have already come from the Deputy Commissioner that the Corporation will be increased. Just a few days back, there was a reply in this House that in Bangalore Corporation, 82 areas will be taken up. That means, extension areas and so many villages will come to the Corporation limits and the City Municipality limits. Government knows that these are the villages which has to be included by this Constitutional Amendment. What are the steps the Government is going to take to see that the money is given to all the new areas which have been included to urban areas and also

developed. At least, those areas should come on par with other part of the cities. Is there any proposal? For Bangalore, you have given. You are attracting multi-nationals O.K. Alright. But why did you practice discrimination for others ? Why not some schcmes are given to see that other areas should also be developed. Even there is going to come Notification to increase these areas.

Sir, in Koramangala, an Indoor Stadium is coming up. It is coming up with Central, State and other funds. The Government has taken a decision to construct apartments for the 7000 and odd atheletes, who will come for 15 days or a month by spending Rs.240 crores. If they are made to stay in 5 Star Hotels, I do not think, it would have cost as more than Rs.7 or 10 crores, instead of spending Rs.240 crores.on this. If you give this amount to the Corporations of Gulbarga, Mangalore, Bangalore, Hubli-Dharwar and all the city municipalities, it would be possible to create infrastructure, to provide proper drainage system, water facilities and other civic amenities; I want to give a suggestion Sir, still time is there. Kindly think over it and see that some money is given for civic amenities and drinking water infrastructure to urban areas and City Municipalities and Corporations.

Sir, you have said you have reduced the price of rice at 3.20 per kg. to the poor. That means, to the tri-colour card, i.e., green card. It is only for the poor people of the rural areas. This green cards are not there for the poor people who are living in the urban areas. It is not there even for slum areas in the City of Gulbarga. I want to

know why this discrimination is being made between the poor of rural & urban areas. Whether poor people can live in rural areas only? Poor people are not there in the urban areas ? Whatever criteria you have issued for rural poor, the same should be applied for the urban poor people also and such discrimination in providing facilities should not be made by the Government. There should be justice and there should not be any injustice in distribution of facilities which the Government is giving to the poor. Tri colour cards should also be given for the poor people living in cities like Gulbarga.

Sir, through out the budget, atleast there is one mention, for that I must thank the Hon'ble Minister for Finance; In page No.45, there is some increase marginally of Rs.1.00 crore in the budget allotment and also Rs.3.00 lakhs have been increased as far as Minorities Development Corporation is concerned and everybody knows that these minorities have fully supported the Janata Dal to bring them to power. The minorities are having high expectations. I was very eager when the Hon'ble Minister for Finance was reading his speech, that some new schemes will be launched for our people. They were so enthusiastic and they were so emotional in voting out the Moily Government and bring the Janata Dal into power. Sorry Sir, I was very much upset; nothing has come out. I was just searching in the speech.

SRI M.MALLIKARJUNA KHARGE :- Already they have given you 4% bonus on Maida & Soji and in urban areas, people mostly take double roti and tea in the morning.

SRI QAMARUL ISLAM :- They were also very much eager that the minorities should be helped. So, what I thought was they may not be having data and all. But, Sir, in the previous Government of Mr. Veerappa Moily, Mr. Kharge was a Minister, a meeting was called of all the Muslim Legislators as to what to do for their development. If at all you want to do something for the minorities, there should be a scheme based on concrete foundation. Minorities Commission is already there. A suggestion was given that a Socio-Economic Survey of Minorities has to be conducted through out the Karnataka State through this Minorities Commission and you know Sir, Rs.30-35 lakhs have been spent by the previous Government for conducting the Minorities Socio-Economic Survey, which has been completed and a report was also submitted. That report has already been before the Government. Even though there is a concrete data available with the Government and survey conducted by the Minorities' Commission, no new scheme has come for the overall development of the minorities. Still the minorities are very much hopeful that this government will realise and do some justice. I request through the Hon'ble Speaker in this House to government and the Hon'ble Minister that some new schemes be announced for the overall development of the minorities, since minorities have given full support to you in the last Assembly elections.

Now, I will come to my area i.e., Hyderabad-Karnataka Development Board. Number of members have made speeches on Hyderabad-Karnataka which is a most backward region. People from that area have

again voted for you. Sir, in the previous year Hyderabad-Karnataka Development Board was given Rs.72 crores, Malnad Development Board was given Rs.35 crores and for Border Area Development Rs.15 crores was given. All put together, it comes to Rs.122 crores. Hyderabad-Karnataka Development Board covers four districts comprising of 33 constituencies; Malnad Area comprises more than 50 constituencies and Border Area comprises more than 20 constituencies. So, around 100 constituencies are involved. But, this year all put together only Rs.100 crores have been provided in the budget for this region. Sir, I want to put a question through you - Is it possible to do justice to the backward regions of the State with this meagre allocation? Whatever has been given by the previous government, this government has reduced it, and they have not shown the allotment for each area as to how much they get. They have simply put it in the budget as Rs.100 crores. Mr. Bangarappa has rightly pointed out that, only to play politics Rs.100 crores is there, because whenever the Hon'ble Ministers go to Malnad area they will say Rs.100 crores is provided; whenever they go to Hyderabad-Karnataka region, they will say Rs.100 crore is provided and similarly in border areas also. If the Government is really sincere about the development of backward regions of Hyderabad-Karnataka areas, Malnad area and border areas, to be on par with other areas, then those areas have to be given more funds. But, here justice has not been done as far as the backward regions of the State are concerned. So, I want that there should be increased allotment in the budget for these backward areas.

As far as ""Ashraya" is concerned, the target fixed was one Lakh houses. For persons who are not having houses, this government also wants to give houses. I want to know why this target has been reduced. Compared to last year, it is less. Of course, we will come to know at the end actually how many houses you would have given under Ashraya. When you are imposing a record tax of Rs.244 crores, why this target has been reduced ? By not giving power to the Legislators and by making Assistant Commissioners as the Chairman, you want to complete this allotment of houses under Ashraya. Let us see your achievement after 4 or 5 months, when you come to here give your accounts. This is where your actions are termed as anti-poor. I don't want to go much into details now. When subject committees come, I will highlight these things.

In the budget, lot of criticism is there for the earlier regime. That has given an opportunity to Mr. Veerappa Moily to defend his regime. Right from 1989 onwards, Mr. Bangarappa has defended his regime. Though Mr. Veerendra Patil is not a member of this House now, Mr. Yediyurappa has 50% defended his regime and he has also criticised. Now, you have criticised in your budget the whole regime from 1989 onwards. This could have been avoided. Instead, you could have highlighted your programmes and policies. Regimes will come and go. But, here, practically what you are giving to the people of Karnataka is very important. We are here to discuss the budget of 1995-96 and the people should feel happy about your budget, but not to hear the regimes and the whole history. The history has already been established.

But don't create the same history of criticism. You must be honest in whatever you say, and wherever I have pointed out the injustice, the same must be rectified. In my opinion, this budget is not a progressive budget. This budget is anti-poor. The 4% tax on Atta and 2% on other food items should be withdrawn. Make provision to create infrastructure and to increase the budget allotment for KHDB, Malnad Board and Border areas to bring these backward regions on par with other regions. You should also bring a scheme for the overall development of minorities. With these words, I thank the Chair and conclude my speech. Thank you very much.

ಶ್ರೀ ಎಂ.ವೈ.ಘೋರ್ಪಡೆ (ಸಂಡೂರು):- ಸನ್ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಹಣಕಾಸು ಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ತಮ್ಮ ಮೊದಲನೆಯ ಬಜೆಟ್ ಅನ್ನು ಮಂಡಿಸಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಹಾರ್ದಿಕ ಶುಭಾಶಯಗಳು. ಅವರು ಮಂಡಿಸಿರತಕ್ಕಂಥ ಬಜೆಟ್‌ನಲ್ಲಿ ಬಡವರ ಪರವಾಗಿರತಕ್ಕ ಎಲ್ಲಾ ಕಾರ್ಯಕ್ರಮಗಳಿಗೆ ನನ್ನ ಹೃತ್ಪೂರ್ವಕವಾದ ಸ್ವಾಗತ. ಈ ಮಾತು ಬರೀ ಅವರ ಪಕ್ಷಕ್ಕಷ್ಟೇ ಅಲ್ಲ, ಯಾವುದೇ ಪಕ್ಷದ ಬಜೆಟ್ ಆಗಲಿ ಅದಕ್ಕೆ ಅನ್ವಯಿಸುತ್ತದೆ. ಆದರೆ, ಈ ಸಂದರ್ಭದಲ್ಲಿ ಬಜೆಟ್‌ನಲ್ಲಿರತಕ್ಕ ಗಂಭೀರವಾದ ನ್ಯೂನತೆಗಳು, ದುರ್ಬಲತೆಗಳು ಮತ್ತು ಲೋಪ-ದೋಷಗಳೇನಿವೆ, ಅದರ ಬಗ್ಗೆ ಶಾಸ್ತ್ರೀಯವಾಗಿ, ತರ್ಕಬದ್ಧವಾಗಿ ಈ ಸದನದಲ್ಲಿ ಪ್ರಸ್ತಾಪಿಸುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ. ಈ ಸಾಲಿನ ಬಜೆಟ್‌ನಲ್ಲಿರತಕ್ಕ ಮಹಾ ದೊಡ್ಡ ದೋಷವೆಂದರೆ, ಬಜೆಟ್‌ನಲ್ಲಿ ತಾವು 214 ಕೋಟಿ ರೂಪಾಯಿಗಳಷ್ಟು ರೆವಿನ್ಯೂ ಡೆಫಿಸಿಟ್ ತೋರಿಸಿದ್ದೀರಿ. ಇದು ಕರ್ನಾಟಕ ಆರ್ಥಿಕ ಇತಿಹಾಸದಲ್ಲಿ ಅತಿ ದೊಡ್ಡ ಪ್ರಮಾಣದ ರೆವಿನ್ಯೂ ಡೆಫಿಸಿಟ್. ಓವರ್‌ಹಾಲ್ ಡೆಫಿಸಿಟ್‌ಗಿಂತ ರೆವಿನ್ಯೂ ಅಪಾಯಕಾರಿಯೆಂದು ತಮಗೆ ಗೊತ್ತಿದೆ. ಕಳೆದ ಇಪ್ಪತ್ತು ವರ್ಷಗಳ ಬಜೆಟ್ ಅನ್ನು ನೀವು ನೋಡಿದರೆ ಸಾಮಾನ್ಯವಾಗಿ ಕರ್ನಾಟಕದಲ್ಲಿ ಯಾವುದೇ ಪಕ್ಷ ರಾಜ್ಯವನ್ನಾಳಲಿಕ್ಕೆ ಸರ್‌ಪ್ಲಸ್ ಬಜೆಟ್ ಅನ್ನು ತೋರಿಸುವುದಕ್ಕೆ ಸಾಧ್ಯವಾಗಿಲ್ಲ. ನನಗೆ ತಿಳಿದ ಮಟ್ಟಿಗೆ 1980 81ರಲ್ಲಿ ಅಲ್ಪಸ್ವಲ್ಪ ರೆವಿನ್ಯೂ ಡೆಫಿಸಿಟ್ ಅನ್ನು ನಾವು ನೋಡಬಹುದು. ಆದರೆ, ಸರ್ವತೋಮುಖವಾಗಿ 20 ವರ್ಷಗಳ ಇತಿಹಾಸ ನೋಡಿದರೆ ಸರ್‌ಪ್ಲಸ್ ಬಜೆಟ್ ತೋರಿಸಿಸುವಂಥ ಒಂದು ಆರ್ಥಿಕ ಸ್ಥಿತಿ, ಸಾಮರ್ಥ್ಯ ಈ ರಾಜ್ಯಕ್ಕಿದೆ. ಆದರೆ, ಏಕಾಏಕಿ ತಾವು ಏನು 214 ಕೋಟಿ ರೂಪಾಯಿಗಳ ರೆವಿನ್ಯೂ ಡೆಫಿಸಿಟ್ ತೋರಿಸಿದ್ದೀರಿ, ಅದರಲ್ಲಿ

ನನಗಂತೂ ಸ್ವಲ್ಪ ಭಯವಾಗುತ್ತದೆ. ಭಯವಾಗುವುದಕ್ಕೆ ಇನ್ನೊಂದು ಕಾರಣವೂ ಇದೆ. ಈ ವರ್ಷ ಹತ್ತನೇ ಹಣಕಾಸು ಆಯೋಗ ತನ್ನ ವರದಿ ಕೊಟ್ಟಿರುವ ವರ್ಷವಾಗಿದೆ. ಆದುದರಿಂದ, ಈ ವರ್ಷದಲ್ಲಿ ನಾನ್-ಪ್ಲಾನ್ ಅಸಿಸ್ಟೆನ್ಸ್ ಎಂದರೆ ಹಣಕಾಸು ಆಯೋಗದಿಂದ ಈ ರಾಜ್ಯಕ್ಕೆ ಏನು ಹಣ ಬರುತ್ತದೆ, ಅದು 304 ಕೋಟಿ ರೂಪಾಯಿಗಳಷ್ಟಾಗಿದ್ದು, ಈ ವರ್ಷ ಜಾಸ್ತಿಯಾಗಿದೆ. ನಾನು ಹೇಳುವ ಉದ್ದೇಶವೇನೆಂದರೆ, ಈ 304 ಕೋಟಿ ರೂಪಾಯಿಗಳು ಹಣಕಾಸು ಆಯೋಗದಿಂದ ಬರುವ ಹಣ ಜಾಸ್ತಿಯಾಗಿದ್ದರೂ ಸಹ 214 ಕೋಟಿ ಏನು ರೆವಿನ್ಯೂ ಡೆಫಿಸಿಟ್ ಬಂದಿದೆ, ಹಣಕಾಸು ಆಯೋಗದಿಂದ 304 ಕೋಟಿ ರೂಪಾಯಿಗಳಷ್ಟು ಜಾಸ್ತಿ ಹಣ ಬಾರದೆ ಹೋಗಿದ್ದರೆ ರೆವಿನ್ಯೂ ಡೆಫಿಸಿಟ್ 500 ಕೋಟಿ ರೂಪಾಯಿಗಳಾಗುತ್ತಿತ್ತು. ಹತ್ತನೇ ಹಣಕಾಸಿನ ಕಮೀಷನ್‌ನಲ್ಲಿ ಈ ವರ್ಷ 1440 ಕೋಟಿ ರೂಪಾಯಿ ಬಂದಿದೆ. ಹಿಂದಿನ ವರ್ಷ ಅದು 1136 ಕೋಟಿ ರೂಪಾಯಿ ಮಾತ್ರ ಬಂದಿತ್ತು. ಆದುದರಿಂದ ಈ ವರ್ಷ 304 ಕೋಟಿ ರೂಪಾಯಿಗಳು ಜಾಸ್ತಿ ಬಂದಿದೆ. ಇಡೀ ದೇಶದ ಸರಾಸರಿಯನ್ನು ತೆಗೆದುಕೊಂಡರೆ, ಇಡೀ ರಾಷ್ಟ್ರದ ಎಲ್ಲಾ ರಾಜ್ಯಗಳಿಗೆ ಹಣಕಾಸಿನ ಕಮೀಷನ್ ಮೂಲಕ ಈ ವರ್ಷ 22 ಪರ್‌ಸೆಂಟ್ ಹಣವು ಜಾಸ್ತಿಯಾಗಿದೆ. ಆದರೆ ಸುದೈವದಿಂದ ನಮಗೆ 27 ಪರ್‌ಸೆಂಟ್ ಹಣವು ಜಾಸ್ತಿಯಾಗಿದೆ. ಇವತ್ತು ಒಟ್ಟಾರೆ ಹಣವನ್ನೇನು ಹಂಚಿಕೆ ಮಾಡಿದ್ದಾರೆ ಅದರಲ್ಲಿ ನಮ್ಮ ರಾಜ್ಯಕ್ಕೆ 5.3 ಪರ್‌ಸೆಂಟ್ ಬಂದಿದೆ. 9ನೇ ಹಣಕಾಸಿನ ಕಮೀಷನ್‌ನಲ್ಲಿ 5 ಪರ್‌ಸೆಂಟ್‌ಗಿಂತ ಕಡಿಮೆ ಇತ್ತು. ಈ ಸಲ ಅದು 5.3 ಪರ್‌ಸೆಂಟ್ ಆಗಿದೆ. ನಮ್ಮ ಜನಸಂಖ್ಯೆಯು 5.3 ಪರ್‌ಸೆಂಟ್ ಇದೆ, ಅಂದರೆ ನಮ್ಮ ಜನಸಂಖ್ಯೆಯ ಪರ್‌ಸೆಂಟ್ ಎಷ್ಟು ಇದೆ ಅಷ್ಟು ಈ ಸಲ ಬಂದಿದೆ. ಹಿಂದಿನ ಹಣಕಾಸಿನ ಕಮೀಷನ್‌ನಿಂದ ನಮಗೇನು ಅನ್ಯಾಯವಾಗಿತ್ತೋ ಅದನ್ನು ಹತ್ತನೆಯ ಹಣಕಾಸಿನ ಕಮೀಷನ್‌ನವರು ಸರಿಪಡಿಸಲು ಪ್ರಯತ್ನ ಪಟ್ಟಿದ್ದಾರೆ. ಅದರ ಪರಿಣಾಮವಾಗಿ ನಮಗೆ ಈ ವರ್ಷ 304 ಕೋಟಿ ರೂಪಾಯಿ ಹೆಚ್ಚು ಹಣ ಬಂದಿದೆ. ಆ ರೀತಿ ಹೆಚ್ಚು ಬಂದಿದ್ದರೂ ಸಹ ಬಜೆಟ್‌ನಲ್ಲಿ ತಾವು 214 ಕೋಟಿ ರೂಪಾಯಿ ರೆವಿನ್ಯೂ ಡೆಫಿಸಿಟ್ ತೋರಿಸಿದ್ದೀರಿ. ಇದರಿಂದ ನನಗೆ ಸ್ವಲ್ಪ ಭಯವಾಗುತ್ತದೆ. ಈ 214 ಕೋಟಿ ರೂಪಾಯಿಗಳ ಕೊರತೆಯನ್ನು ಸರಿಪಡಿಸುವುದಕ್ಕೆ ನೀವು 245 ಕೋಟಿ ರೂಪಾಯಿಗಳ ಹೆಚ್ಚುವರಿ ಸಂಪನ್ಮೂಲಗಳನ್ನು ಸಂಗ್ರಹ ಮಾಡುತ್ತೇವೆಂದು ತಮ್ಮ ಬಜೆಟ್ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದೀರಿ. ಅಂದರೆ 214 ಕೋಟಿ ರೂಪಾಯಿಗಳ ರೆವಿನ್ಯೂ ಡೆಫಿಸಿಟ್ ಹೆಸರಿನಲ್ಲಿ 245 ಕೋಟಿ ರೂಪಾಯಿಗಳ ತೆರಿಗೆಯನ್ನು ಜಾಸ್ತಿ ಮಾಡುವುದಕ್ಕೆ ಹೊರಟಿದ್ದೀರಿ. ಸೇಲ್ಸ್ ಟ್ಯಾಕ್ಸ್‌ನಿಂದ 40 ಕೋಟಿ, ಮೋಟಾರ್ ವಾಹನಗಳ ಮೇಲಿನ ತೆರಿಗೆಯಿಂದ 90 ಕೋಟಿ, stamps and registration Rs.45 crore, Bangalore Mass Transport system Rs.50 crores ಕೇಂದ್ರೀಯ ಮತ್ತು ರಾಜ್ಯದ ಎಕ್ಸೈಜ್‌ನಿಂದ 22 ಕೋಟಿ ಮಾಡುವುದಾಗಿ ಹೇಳಿದ್ದೀರಿ. ನನ್ನ ನೈತಿಕವಾದ ಪ್ರಶ್ನೆ ಏನೆಂದರೆ, ತಾವು ತೆರಿಗೆಯನ್ನು

ಜಾಸ್ತಿ ಮಾಡಬಾರದೆಂದು ನಾನು ಹೇಳುತ್ತಿಲ್ಲ, ಆದಾಯದ ಮೂಲವನ್ನು ಜಾಸ್ತಿ ಮಾಡುತ್ತಾ ಹೋಗಬೇಕಾಗುತ್ತದೆ. ಅದು ಅನಿವಾರ್ಯ. ಆದರೆ ಈ ಹಿಂದೆ ಹಾಕಿರತಕ್ಕ ತೆರಿಗೆಗಳೇನಿದೆ ಆದರಿಂದ ಎಷ್ಟು ಹಣ ಬರಬೇಕಾಗಿದೆ, ಅದನ್ನು ವಸೂಲಿ ಮಾಡಲಾಗಿದೆಯೇ ಮತ್ತು ಹಿಂದೆ ನಾವು ಎಷ್ಟು ಹಣವನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೆವು ಅದನ್ನು ಖರ್ಚು ಮಾಡಿದೆಯೇ ಎಂಬುದನ್ನು ನೋಡಬೇಕು. ನಾವು ಹೊಸದಾಗಿ ತೆರಿಗೆಯನ್ನು ಹಾಕಲು ಹೊರಟರೆ ಜನತೆ ಪ್ರಶ್ನೆ ಕೇಳಲು ಅಧಿಕಾರವಿದೆ. ತಮಗೆ ಹೊಸದಾಗಿ ತೆರಿಗೆಯನ್ನು ಹಾಕಲು ನೈತಿಕವಾದ ಅಧಿಕಾರ ಎಲ್ಲಿಂದ ಬಂತು? ತಮಗೆ ಗೊತ್ತಿದೆ, 1994-95ರಲ್ಲಿ ನಾವು 200 ಕೋಟಿ ರೂಪಾಯಿಗಳನ್ನು ಸರ್‌ಪ್ಲಸ್ ತೋರಿಸಿದ್ದೆವು. ವೀರಪ್ಪ ಮೊಯಿಲಿಯವರ ಸರ್ಕಾರದ ಸಮಯದಲ್ಲಿ 200 ಕೋಟಿ ರೂಪಾಯಿಗಳ ರೆವಿನ್ಯೂ ಸರ್‌ಪ್ಲಸನ್ನು ತೋರಿಸಿದ್ದೆವು. ಆದರೆ ನೀವು ನಿಮ್ಮ ಬಜೆಟ್‌ನಲ್ಲಿ ಈಗಿನ ರಿವೈಸ್ಡ್ ಎಸ್ಟಿಮೇಟ್‌ನಲ್ಲಿ 187 ಕೋಟಿ ರೂಪಾಯಿಗಳ ಡೆಫಿಸಿಟ್ ತೋರಿಸಿದ್ದೀರಿ. ಈ ಎರಡು ಅಂಕಿಗಳನ್ನು ತೆಗೆದುಕೊಂಡರೆ the total deterioration during 1994-95 407ರಲ್ಲಿ ಕೋಟಿ ರೂಪಾಯಿಗಳಾಗುತ್ತದೆ. ಅಷ್ಟು ವ್ಯತ್ಯಾಸ ಬರುತ್ತದೆ. ನಾನು 1994-95ರ ಚಾಲ್ತಿ ವರ್ಷದ ಬಗ್ಗೆ ಮಾತನಾಡುತ್ತಿದ್ದೇನೆ. ಸಾಮಾನ್ಯವಾಗಿ ಇಷ್ಟೊಂದು ವ್ಯತ್ಯಾಸವಾಗಲು ಕಾರಣವೇನು ಎಂಬುದನ್ನು ನೋಡಿದಾಗ ತೆರಿಗೆಯ ವಸೂಲಾತಿಯಲ್ಲಿ 1994-95ರಲ್ಲಿ 480 ಕೋಟಿ ಶಾರ್ಟ್‌ಫಾಲ್ ಇದೆ. ಅದರಲ್ಲಿ 243 ಕೋಟಿ ಸೇಲ್ಸ್ ಟ್ಯಾಕ್ಸ್, 107 ಕೋಟಿ ಮೋಟಾರ್ ವಾಹನದ ತೆರಿಗೆ, ಎಕ್ಸೈಸ್ 97 ಕೋಟಿ ಒಟ್ಟು 480 ಕೋಟಿ ಕೊರತೆ ಇದೆ. .243.00 crores in sales tax; 107 crores in motor vehicles tax and Rs.97 crores in excise - total 480 crores. ಸ್ವಾಭಾವಿಕವಾಗಿ ಅದರ ಪರಿಣಾಮವಾಗಿ ಈ ಯೋಜನೆ ಏನಿದೆ ಅದು 588 ಕೋಟಿ ರೂಪಾಯಿಗಳಷ್ಟು ಕಡಿಮೆಯಾಗಿದೆ. 3200 ಕೋಟಿ ರೂಪಾಯಿಗಳ ಯೋಜನೆ ಏನಿತ್ತು ಅದು 2800 ಕೋಟಿ ರೂಪಾಯಿಗಳಾಗಿದೆ. ತೆರಿಗೆಯನ್ನು ವಸೂಲಿ ಮಾಡುವಲ್ಲಿ 480 ಕೋಟಿ ಕಡಿಮೆಯಾಗಿದ್ದರಿಂದ 450 ಕೋಟಿ ರೂಪಾಯಿಗಳ ಅಭಿವೃದ್ಧಿ ಕೆಲಸ ಕಡಿಮೆಯಾಗಿದೆ. ಈ ರೀತಿಯಾದರೆ ಯಾವ ಬಜೆಟ್‌ಗೂ ವಿಶ್ವಾಸಾರ್ಹತೆ ಇರುವುದಿಲ್ಲ. ನಾವೇನು ಬಜೆಟ್‌ನಲ್ಲಿ ತೋರಿಸುತ್ತೇವೆ ಅದರಲ್ಲಿ ಅಜಗಜಾಂತರ ವ್ಯತ್ಯಾಸ ಬರುವುದಾದರೆ ಯಾವ ಬಜೆಟನ್ನು ನಂಬುವುದಕ್ಕೆ ಸಾಧ್ಯವಾಗುವುದಿಲ್ಲ. ಆ ರೀತಿಯಾದರೆ ಬಜೆಟ್‌ಗೆ ಇರತಕ್ಕ ಶಿಸ್ತು, ಬೆಲೆ ಸಂಪೂರ್ಣವಾಗಿ ಹೊರಟು ಹೋಗುತ್ತದೆ. ಆಗ ಜನ ಸಾಮಾನ್ಯರೂ ಸಹ ಬಜೆಟನ್ನು ಓದುವುದಕ್ಕೆ ಪ್ರಯತ್ನ ಸಹ ಮಾಡುವುದಿಲ್ಲ. There is crisis of budget credibility. ಸರ್ಕಾರ ಇಂದು ಬರಬಹುದು, ನಾಳೆ ಬೇರೆ ಸರ್ಕಾರ ಬರಬಹುದು, ಆದರೆ ಕರ್ನಾಟಕದಲ್ಲಿ ಆಡಳಿತ ವ್ಯವಸ್ಥೆ ಇದೆ. ಸರ್ಕಾರ ಬದಲಾವಣೆಯಾದರೂ ಸಹ ಆಡಳಿತ ವ್ಯವಸ್ಥೆ ಬದಲಾವಣೆಯಾಗುವುದಿಲ್ಲ. ಈ ರೀತಿಯಾಗಿ ನೀವಾಗಲಿ ನಾವಾಗಲಿ ಈ ಆಡಳಿತ

ವ್ಯವಸ್ಥೆಯಲ್ಲಿ ತೆರಿಗೆಯನ್ನು ವಸೂಲಿ ಮಾಡಬಾರದೆಂದು ಯಾರೂ ಸಹ ಹೇಳುವುದಿಲ್ಲ. ಅಭಿವೃದ್ಧಿ ಕೆಲಸಗಳನ್ನು ಮಾಡಬಾರದೆಂದು ಹೇಳುವುದಿಲ್ಲ. ನನಗೆ ತಿಳಿದ ಮಟ್ಟಿಗೆ 3200 ಕೋಟಿ ಎಂದು ಯೋಜನೆಯನ್ನು ನಿಗದಿ ಮಾಡಿದಾಗ, ಕರ್ನಾಟಕ ರಾಜ್ಯದ ವತಿಯಿಂದ ಯೋಜನಾ ಆಯೋಗಕ್ಕೆ ಹೋಗಿ ಅವರಿಂದ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. ಯೋಜನಾ ಆಯೋಗಕ್ಕೆ ಇಷ್ಟೊಂದು ಸಂಪನ್ಮೂಲಗಳಿವೆ ಎಂದು ಮನವರಿಕೆ ಮಾಡಿಕೊಟ್ಟ ಮೇಲೆಯೇ ಆ ಯೋಜನೆ ತಯಾರಾಗಿದೆ. ಬರೇ ಐ ವಾಷ್ ಮಾಡುವುದಕ್ಕೋಸ್ಕರ ಈ ಯೋಜನೆ ಮಾಡಿರುವುದಿಲ್ಲ ಎನ್ನುವ ಭಾವನೆ ಬರುತ್ತದೆ. both in taxes and plan expenditure ಆಗುವುದಾದರೆ ಇದು ಬಹಳ ಗಂಭೀರವಾದಂಥ ಪ್ರಶ್ನೆಯಾಗಿದೆ.

ನಾವು ಒಬ್ಬರ ಮೇಲೆ ಇನ್ನೊಬ್ಬರು ಟೀಕೆ ಮಾಡುವಂತಹ ಪ್ರಶ್ನೆ ಅಲ್ಲ. ಇದು ಕ್ರೆಡಿಬಿಲಿಟಿ ಆಫ್ ಹೋಲ್ ಫೈನಾನ್ಷಿಯಲ್ ಸಿಸ್ಟಮ್. ಇವತ್ತು ನಮ್ಮ ಮುಂದೆ ಇದೆ, ಇದರ ಬಗ್ಗೆ ತಾವು ಸ್ಪೀಕರ್ ಆಗಿ ಯಾವುದೇ ಒಂದು ಪರಿಹಾರ ಹುಡುಕಬೇಕಾಗುತ್ತದೆ. ಇದಕ್ಕೆ ಯಾರು ಜವಾಬ್ದಾರರು ಇದ್ದಾರೆ ಎನ್ನುವುದು ಈ ಸದನಕ್ಕೆ ಗೊತ್ತಾಗಬೇಕು. ಇಲ್ಲದೆ ಹೋದರೆ ಬಜೆಟ್‌ನಲ್ಲಿ ನಾವು ಏನಾದರೂ ಬರೆದುಕೊಂಡು ಹೋಗಬಹುದು. ಕೊನೆಗೆ ಅದು ಏನಾಗದರೂ ಆಗಬಹುದು. ಇಂತಹ ಪರಿಸ್ಥಿತಿ ಇರುವುದರಿಂದ.....

MR. SPEAKER :- I am sorry to intervene. Is it confined to Karnataka only or has it been a regular feature in other States also?

SRI M.Y.GHORPADE :- If you ask me about the credibility I would say, since 1970, when I was the Minister for Finance in 1970s, if there was slightest deviation between the budgetary figures and realisation figures, we were answerable there. Members used to ask us.

ಬಜೆಟ್‌ನಲ್ಲಿ ಈ ರೀತಿ ಬರೆದಿದ್ದೀರಿ, ಈ ರೀತಿ ಆಗಿದೆ. ಇದು ಇಷ್ಟು ಏತಕ್ಕೆ ಜಾಸ್ತಿಯಾಯಿತು ಎಂದು ಕೇಳುತ್ತಿದ್ದರು. ಈವತ್ತು ಆ ಪ್ರಯತ್ನ ಕೂಡ ಮಾಡುತ್ತಿಲ್ಲ ಎಂದು ನನಗನ್ನಿಸುತ್ತದೆ. ಏಕೆಂದರೆ ಬಜೆಟ್ ಏನಿದೆ ಅದು ಸತ್ಯಾಂಶವನ್ನು ತೋರಿಸುವಂತಹ ವಸ್ತು ಅಲ್ಲ, ಎಂಬ ಒಂದು ವಿಚಾರಕ್ಕೆ ನಾವು ಬರಬೇಕಾದರೆ ಅದರಲ್ಲಿ ಬಜೆಟ್

ಡಿಸ್‌ಕಷನ್‌ಗೆ ಏನೂ ಅರ್ಥ ಇರುವುದಿಲ್ಲ. ನಾನು ಬಹಳ ಕಳಕಳಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ, ಅವರನ್ನು ಟೀಕೆ ಮಾಡುವ ದೃಷ್ಟಿಯಿಂದ ಅಲ್ಲ. ಈವತ್ತು ನಾವೆಲ್ಲರೂ ಜವಾಬ್ದಾರರಿದ್ದೇವೆ, credibility of the State Budget ಎಲ್ಲಾ ಕಡೆ ವರಮಾನ ಕಡಿಮೆಯಾಗುತ್ತಿದೆ. ವೈಟ್ ಪೇಪರನ್ನು ನೀವು ನಮ್ಮ ಮುಂದೆ ಇಟ್ಟು ನಮ್ಮ ಮೇಲೆ ಒಂದು ಗೂಬೆಯನ್ನು ಕೂಡಿಸುವ ಪ್ರಯತ್ನ ಮಾಡಿದಿರಿ. ನಮಗೆ ಎಷ್ಟು ಸಾಲ ಇತ್ತು ಅದಕ್ಕೆ ನಾವು ಏನೂ ಮಾಡಲಿಕ್ಕೆ ಆಗಲಿಲ್ಲ ಎಂದು ಹೇಳಿದ್ದೀರಿ. ಈ ವೈಟ್ ಪೇಪರ್‌ನಲ್ಲಿ ನೀವು ಏನು ಹೇಳಿದಿರಿ ಅಂದರೆ 23 ಕೋಟಿ ಓವರ್ ಡ್ರಾಫ್ಟ್ ಇತ್ತು. 76 ಕೋಟಿ ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಇತ್ತು. 220 ಕೋಟಿ ಪೆಂಡಿಂಗ್ ಬಿಲ್ಸ್ ಇರಿಗೇಷನ್, ಪಿ.ಡಬ್ಲ್ಯು.ಡಿ.ದು ಇತ್ತು. ನಾನು ತಮಗೆ ಹೇಳುತ್ತಿದ್ದೇನೆ ಇದು ಗಾಬರಿ ಆಗುವಂತಹ ಅಂಕಿ ಸಂಖ್ಯೆಗಳು ಅಲ್ಲ. ಇವತ್ತು ಕರ್ನಾಟಕ ರಾಜ್ಯಕ್ಕೆ 23 ಕೋಟಿ ಓವರ್ ಡ್ರಾಫ್ಟ್ ಇದ್ದರೆ ಅಥವಾ 66 ಕೋಟಿ ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಇದ್ದರೆ ಇದು ಆಶ್ಚರ್ಯ ಪಡಬೇಕಾಗಿಲ್ಲ. ಏಕೆಂದರೆ ನಾನು ಹಣಕಾಸಿನ ಮಂತ್ರಿ ಇದ್ದಾಗ ಎನ್ನುವ ಪದ ಉಪಯೋಗಿಸಬಾರದು ಎಂದು ತೀರ್ಮಾನ ಮಾಡಿದ್ದೆ, ಆದರೆ ಈ ಸಂದರ್ಭದಲ್ಲಿ ಇದನ್ನು ನಾನು ಉಪಯೋಗ ಮಾಡುತ್ತಿದ್ದೇನೆ, ಏಕೆಂದರೆ ಉದಾಹರಣೆ ಕೊಡಬೇಕಾಗುತ್ತದೆ. ನಾನು ಹಣಕಾಸಿನ ಮಂತ್ರಿಯಾಗಿದ್ದಾಗ ಏಪ್ರಿಲ್ 72 ರಲ್ಲಿ ಕರ್ನಾಟಕದ ಓವರ್ ಡ್ರಾಫ್ಟ್ 71 ಕೋಟಿ ಇತ್ತು. ಆಗ ನಮ್ಮ ಬಡ್ಜೆಟ್ 500 ಕೋಟಿ ಮಾತ್ರ ಇತ್ತು. ಕರ್ನಾಟಕದ 500 ಕೋಟಿ ಬಡ್ಜೆಟ್ ಇದ್ದಾಗ 71 ಕೋಟಿ ಓವರ್ ಡ್ರಾಫ್ಟ್‌ನ ಭಾರ ಹೊತ್ತುಕೊಂಡು ನಾವು ರಾಜ್ಯದ ಆಡಳಿತ ಪ್ರಾರಂಭ ಮಾಡಿದೆವು. ಆ ಕಾಲಕ್ಕೆ, ಈಗ ಬಡ್ಜೆಟ್ ಎಷ್ಟು ಇದೆ, ನಿಮ್ಮ ಬಡ್ಜೆಟ್ 10,000 ಕೋಟಿ ಇದೆ, ನನ್ನ ಬಡ್ಜೆಟ್ 500 ಕೋಟಿ ಇತ್ತು. ಅಂದರೆ ಆ ಬಡ್ಜೆಟ್‌ನ ವ್ಯಾಪ್ತಿ ಇವತ್ತು 20 ಪಟ್ಟು ಜಾಸ್ತಿಯಾಗಿದೆ. ಆದರೆ ನಮ್ಮ ಕಾಲದಲ್ಲಿ 71 ಕೋಟಿ ಓವರ್ ಡ್ರಾಫ್ಟ್ ಇತ್ತಲ್ಲಾ, ಅದನ್ನು 20 ರಿಂದ ಮಲ್ಟಿಪ್ಲೈ ಮಾಡಿದರೆ ಮಾಡಿದರೆ ಎಷ್ಟಾಗುತ್ತದೆ 1,400 ಕೋಟಿಯಾಗುತ್ತದೆ. ಆದರೆ ನನ್ನ ಕಾಲಕ್ಕೆ ನನ್ನ ಬಡ್ಜೆಟ್ 72ರಲ್ಲಿ 500 ಕೋಟಿ ಇದ್ದಾಗ 71 ಕೋಟಿ ಏನಿತ್ತು ಅದು ಇವತ್ತಿನ ಲೆಕ್ಕದ ಪ್ರಕಾರ 1,400 ಕೋಟ ಆಗಬೇಕು. ಅಂದರೆ 1400 ಕೋಟಿ ಓವರ್ ಡ್ರಾಫ್ಟ್ ಆಗಿದ್ದರೆ ಆಗ ಇದರ ಭಾರ ಜಾಸ್ತಿ ಇದೆ ಎಂದು ಹಣಕಾಸಿನ ದೃಷ್ಟಿಯಿಂದ ಹೇಳಲಿಕ್ಕೆ ಅರ್ಥಪೂರ್ಣವಾಗಿತ್ತು. ಆದರೆ ನಿಮ್ಮ ಓವರ್ ಡ್ರಾಫ್ಟ್ ಎಷ್ಟಿದೆ? 76 ಕೋಟಿಗಳು. ಇವತ್ತು ವೇಸ್ ಅಂಡ್ ಮೀನ್ಸ್ ರಿಸರ್ವ್ ಬ್ಯಾಂಕ್‌ನವರು ಕೊಟ್ಟೇ ಕೊಡುತ್ತಾರೆ. ಅದನ್ನು ಉಪಯೋಗಿಸಿಕೊಳ್ಳಲೇ ಬೇಕಾಗುತ್ತದೆ. ಏಕೆಂದರೆ ಬೇಸ್ ಅಂಡ್ ಮೀನ್ಸ್ ಅಂದರೆ ಇದು ಶಾಶ್ವತವಾದ ಸಾಲ ಅಲ್ಲ, ತಾತ್ಕಾಲಿಕವಾದ ಒಂದು ವ್ಯವಸ್ಥೆ. ಇದರ ಬಗ್ಗೆ ಪ್ರಚಾರ ಮಾಡಿ ಏನೋ ಒಂದು ಹಣಕಾಸಿನ ಪರಿಸ್ಥಿತಿಯನ್ನು ಹದಗೆಡಿಸಿ ನಾವು ರಾಜ್ಯವನ್ನು ನಮ್ಮ ಕೈಯಲ್ಲಿ ಕೊಟ್ಟಿದ್ದಾರೆ ಎಂದು ಹೇಳುವ ಈ ಮಾತು ಸರಿಯಲ್ಲ, ಅದನ್ನು ದಯವಿಟ್ಟು ನೀವು ಉಪಯೋಗಿಸಲಿಕ್ಕೆ ಇನ್ನು ಮುಂದಾದರೂ ಹೋಗಬೇಡಿ ಎಂದು ಹೇಳಲಿಕ್ಕೆ

ಇಷ್ಟಪಡುತ್ತೇನೆ. ಈಗ ಇರಿಗೇಷನ್, ಪವರ್ ಮತ್ತು ಸೋಷಿಯಲ್ ಸರ್ವೀಸ್ ಇದು ಮುಖ್ಯವಾದಂತಹ ನಮ್ಮ ಗುರಿ. ಈಗ ಇರಿಗೇಷನ್‌ಗೆ ನೀವು ಹೊಸ ಪ್ಲಾನ್‌ನಲ್ಲಿ 882 ಕೋಟಿ ಎಂದು ನೀವು ಇಟ್ಟಿದ್ದೀರಿ. ಅದರಲ್ಲಿ 72 ಕೋಟಿ ಮೈನರ್ ಇರಿಗೇಷನ್ ಎಂದು ತೋರಿಸಿದ್ದೀರಿ, 72 ಕೋಟಿ ಖರ್ಚು ಮಾಡಿ 9,000 ಹೆಕ್ಟೇರ್ ಮೈನರ್ ಇರಿಗೇಷನ್ ಪೊಟೆನ್‌ಷಿಯಲ್ ನೀವು ತಯಾರು ಮಾಡುವವರಿದ್ದೀರಿ. ಇದನ್ನು ನೀವು ಲೆಕ್ಕ ಮಾಡಿ ನೋಡಿದರೆ ಇದು ಒಂದು ಎಕರೆಗೆ 80,000 ರೂಪಾಯಿಗಳಾಗುತ್ತವೆ. ಅಂದರೆ ಒಂದು ಎಕರೆ ಮೈನರ್ ಇರಿಗೇಷನ್ ಪೊಟೆನ್‌ಷಿಯಲ್ ನೀವು ಜಾಸ್ತಿ ಮಾಡುವುದಕ್ಕೆ ಹೋದಾಗ ಸರಾಸರಿ 80,000 ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಅದಕ್ಕೆ ನಾವು ಇನ್‌ಕ್ರಿಮೆಂಟಲ್ ಕಾಸ್ಟ್ ಎಂದು ಇಂಗ್ಲೀಷ್‌ನಲ್ಲಿ ಹೇಳುತ್ತೇವೆ. ಹೊಸ ಇರಿಗೇಷನ್ ಪೊಟೆನ್‌ಷಿಯಲ್ ಮಾಡಲಿಕ್ಕೆ 80 ಸಾವಿರ ಕೋಟಿ ಮೈನರ್ ಇರಿಗೇಷನ್, ನೀವು ಮೀಡಿಯಮ್ ಇರಿಗೇಷನ್ ಮತ್ತು ಮೇಜರ್ ತೆಗೆದುಕೊಂಡರೆ ಒಂದು ಲಕ್ಷಕ್ಕೂ ಜಾಸ್ತಿಯಾಗುತ್ತದೆ. ಒಂದು ಲಕ್ಷ 10,000 ಆಗುತ್ತದೆ. ಈಗ ಕರ್ನಾಟಕದಲ್ಲಿ 55 ಲಕ್ಷ ಹೆಕ್ಟೇರ್ ಪೊಟೆನ್‌ಷಿಯಲ್ ಇದೆ. ಅಷ್ಟೂ ನೀರಾವರಿ ನೀವು ಮಾಡಲಿಕ್ಕೆ ಸಾಧ್ಯ. ನಾವೆಲ್ಲರೂ ಸೇರಿ 32 ಲಕ್ಷ ಹೆಕ್ಟೇರ್ ಮಾತ್ರ ಮಾಡಿದ್ದೇವೆ. ಅಂದರೆ ಇನ್ನೂ 23 ಲಕ್ಷ ಹೆಕ್ಟೇರ್ ಮಾಡಬಹುದಾಗಿದೆ. ಈ 23 ಲಕ್ಷ ಹೆಕ್ಟೇರ್‌ನಿಂದ ಅದನ್ನು ಮಾಡಲಿಕ್ಕೆ ಇವತ್ತಿನ ಬೆಲೆಗಳ ಪ್ರಕಾರ ಎಷ್ಟಾಗುತ್ತದೆ 23 ಸಾವಿರ ಕೋಟಿ ಬೇಕಾಗುತ್ತದೆ. ಮತ್ತು ಅದು ಆಗುವವರೆಗೂ ಇನ್ನೂ ಅದು ಡಬಲ್ ಕೂಡ ಆಗಬಹುದು. ಅದಕ್ಕೆ ನನ್ನ ಸಲಹೆ ಏನೆಂದರೆ ಈ ಮೈನರ್ ಇರಿಗೇಷನ್‌ಗೆ ಸ್ವಲ್ಪ ಜಾಸ್ತಿ ಗಮನವನ್ನು ಕೊಡಿ. ಅದರಲ್ಲಿ ಈ ಚೆಕ್ ಡ್ಯಾಮ್ಸ್ ಮಾಡುವುದಕ್ಕೆ ಕ್ರಮ ಕೈಗೊಳ್ಳಿ. ಈ ಚೆಕ್ ಡ್ಯಾಮ್ಸ್‌ಗೆ ಒಂದು ಲಕ್ಷ ಖರ್ಚಾಗುತ್ತದೆ. ಆ ಒಂದು ಚೆಕ್ ಡ್ಯಾಮ್‌ನಿಂದ ಸುತ್ತಮುತ್ತಲಿನ ಬಾವಿಗಳಲ್ಲಿ 5 ಎಕರೆ ನೀರಾವರಿ ಜಾಸ್ತಿ ಆದರೆ ಆಗ ಇನ್‌ಕ್ರಿಮೆಂಟಲ್ ಕಾಸ್ಟ್ 20 ಸಾವಿರ ಮಾತ್ರ. ಇವತ್ತು ನೀವು ಏನು 80 ಸಾವಿರ ತೋರಿಸಿದ್ದೀರಿ, 5 ಎಕರೆ ಒಂದು ಚೆಕ್ ಡ್ಯಾಮ್‌ಗೆ 5 ಎಕರೆ ಮಾತ್ರ, ಬಾವಿಗಳಲ್ಲಿ ನೀರು ಜಾಸ್ತಿಯಾದರೆ ಅದರ ಇನ್‌ಕ್ರಿಮೆಂಟಲ್ ಕಾಸ್ಟ್ 20,000 ರೂಪಾಯಿಗಳಿಗೆ ಇಳಿಯುತ್ತದೆ. ಅಂದ ಮೇಲೆ ಅದು ಒಂದೇ ಅಲ್ಲ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಿಕ್ಕೆ ಅವರಿಗೆ ಬೇಕೆ ಬೇಕು. ಈ ರಾಜ್ಯದ ರೂರಲ್ ಡೆವಲಪ್‌ಮೆಂಟ್ ಪಂಚಾಯತ್ ರಾಜ್ ಮಿನಿಸ್ಟರ್ ಯಾರೇ ಆಗಲಿ, ಅವರಿಗೆ ಹಣ ಖರ್ಚು ಮಾಡಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಿಕ್ಕೆ ಆಗುವುದಿಲ್ಲ ಎಂದು ಎಲ್ಲರಿಗೂ ಗೊತ್ತು. ಏಕೆಂದರೆ ನೀರೇ ಸಿಗದೆ ಇದ್ದರೆ ವಾಟರ್ ಟೇಬಲ್ ಕೆಳಗೆ ಹೋದರೆ ನೀರು ಕೊಡುವುದು ಹೇಗೆ? ಆದ್ದರಿಂದ ನನ್ನ ಕಳಕಳಿಯ ಮನವಿ ಏನೆಂದರೆ ಈ 78 ಕೋಟಿ ಏನಿದೆ ಸ್ವಲ್ಪ ಜಾಸ್ತಿ ಮಾಡಿ, 50 ಕೋಟಿ ಜಾಸ್ತಿ ಮಾಡಿ. ಆ ಮೇಜರ್, ಮೀಡಿಯಮ್ ಇರಿಗೇಷನ್‌ನಲ್ಲಿ ಒಂದು 50 ಕೋಟಿ ಕಡಿಮೆ ಆದರೂ ಚಿಂತೆ ಇಲ್ಲ. 50 ಕೋಟಿ ಜಾಸ್ತಿ ಮಾಡಿ ಈ ಚೆಕ್ ಡ್ಯಾಮ್ಸ್ ಮಾಡುವುದಕ್ಕೆ ಹೇಳಿ ಎಲ್ಲಾ ಜಿಲ್ಲೆಗಳಲ್ಲಿ, ನನ್ನ ಜಿಲ್ಲೆಯಲ್ಲಿ ಪ್ರಕಾಶ್‌ನವರಿಗೆ

ಗೊತ್ತಿದೆ, ಆರು ಕೋಟಿ ಖರ್ಚು ಮಾಡಿ 600 ಚೆಕ್ ಡ್ಯಾಮ್ಸ್ ನಾವು ಮಾಡಿದ್ದೇವೆ. ಆದುದರಿಂದ ಪ್ರತಿಯೊಂದು ಜಿಲ್ಲೆಗೆ 45 ಕೋಟಿ ಕೊಟ್ಟು ಬಿಟ್ಟರೆ ಈ ವರ್ಷ ಮತ್ತು ಎರಡು ವರ್ಷಗಳಲ್ಲಿ ಕರ್ನಾಟಕದಲ್ಲಿ ಇರತಕ್ಕಂತಹ ಎಲ್ಲಾ ಕಡೆ ಎಲ್ಲೆಲ್ಲಿ ಚೆಕ್ ಡ್ಯಾಮ್ಸ್ ಮಾಡಲಿಕ್ಕೆ ಸಾಧ್ಯ ಅದನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಹೆಚ್ಚು ಹಣ ಬೇಕಾಗುವುದಿಲ್ಲ. ಇದನ್ನು ಮಾಡಿ ಬಿಟ್ಟರೆ ಬರೀ ಇರಿಗೇಷನ್ ಅಷ್ಟೇ ಅಲ್ಲ ಕುಡಿಯುವ ನೀರಿನ ಸಮಸ್ಯೆ ಕೂಡ ನಾವು ಬಗೆಹರಿಸಿದಂತೆ ಆಗುತ್ತದೆ. ಇಂತಹ ಸಜೆಷನ್ಸ್ ಕೊಟ್ಟಾಗ ಈ ಸರ್ಕಾರ ಅದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಇದನ್ನು ನಾನು ಮುಖ್ಯ ಮಂತ್ರಿಗಳಿದ್ದಾಗ ಕೂಡ ಹೇಳಿದೆ. ಎಲ್ಲರಿಗೂ ಗೊತ್ತಿದೆ ಆ ವಿಷಯ ಇದರ ಬಗ್ಗೆ ಇವರು ಇದರಲ್ಲಿ ಸೇರಿಸಬೇಕಾಗಿತ್ತು. Incremental cost in check dams is very small.

ಮೈನರ್ ಇರಿಗೇಷನ್‌ಗೆ ಬಡ್ಜೆಟ್ ಸೌಲಭ್ಯ ಇದೆ. ಇನ್‌ಕ್ರಿಮೆಂಟಲ್ ಕಾಸ್ಟ್ ಒಂದು ಎಕರೆ ನೀರಾವರಿ ಮಾಡುವುದಕ್ಕೋಸ್ಕರ ಮೇಜರ್ ಮೀಡಿಯಮ್ ಇರಿಗೇಷನ್ ಒಂದು ಲಕ್ಷಕ್ಕೂ ಜಾಸ್ತಿ ಇದೆ. ಆ ಟೈಮ್‌ನಲ್ಲಿ ಕುಡಿಯುವುದಕ್ಕೆ ನೀರು ಇಲ್ಲ, ಚೆಕ್ ಡ್ಯಾಮ್ಸ್ ಮಾಡದೇ ಹೋದರೆ ನಿಮಗೆ ನೀರು ಸಿಗುವುದಿಲ್ಲ. ವಾಟರ್ ಟೇಬಲ್ ಹೊರಟು ಹೋಗುತ್ತದೆ ಎಂದರೆ ಅದನ್ನು ನಿರ್ಲಕ್ಷ್ಯ ಮಾಡುವುದು ಅಲ್ಲ. ಅದಕ್ಕೆ ಒಂದು ನಿರ್ದಿಷ್ಟವಾದ ಉತ್ತರ ಈ ಬಡ್ಜೆಟ್‌ನಲ್ಲಿ ಉತ್ತರ ಕೊಡುವಾಗ ಮಾರ್ಪಾಟು ಮಾಡಿ. ಮಾಡಿದರೆ ನಿಮಗೆ ಒಳ್ಳೆಯ ಹೆಸರು ಬರುತ್ತದೆ. ನನ್ನದ್ದು ಏನೂ ಅಭ್ಯಂತರವಿಲ್ಲ. ನನಗೆ ಏನೆಂದರೆ ಕುಡಿಯುವ ನೀರು ಜನತೆಗೆ ಸಿಗಲಿ. ಅಷ್ಟೇ ನನ್ನ ಉದ್ದೇಶ.

ಅಧ್ಯಕ್ಷರು :- ರಿ ಚಾರ್ಜಿಂಗ್ ನಿಂದ ಏನಾದರೂ ಪ್ರಯೋಜನ ಆಗುತ್ತಿದೆಯೋ?

ಶ್ರೀ ಎಮ್.ವೆ.ಘೋರ್ಪಡೆ :- ಡೈರೆಕ್ಟ್ ರೀಚಾರ್ಜಿಂಗ್. ಅದು ಭೂಮಿ ಒಳಗೆ ಹೋಗದೆ ಇದ್ದರೆ ನೀವು ಯಾವ ಬೋರ್‌ವೆಲ್ ಹಾಕಿದರೂ ಕೂಡ ನಿಮಗೆ ನೀರು ಸಿಗುವುದಿಲ್ಲ. 510 ಸಾವಿರ ಮಿನಿ ವಾಟರ್ ಸಪ್ಲೇ ಸ್ಕೀಮ್ಸ್ ನಾವು ನೀವು ಎಲ್ಲಾ ಸೇರಿ ಮಾಡಿದ್ದೇವೆ. ಆದರೆ ಬೇರೆ ಎಷ್ಟೋ ಕಡೆ ಬೋರ್‌ವೆಲ್ ಹಾಕಿದರೂ ಸಹ ನೀರು ಸಿಗುವುದಿಲ್ಲ. ಬೇಸಿಗೆ ಕಾಲಕ್ಕೆ ನೀರಿನ ಮಟ್ಟ ಇನ್ನೂರು ಅಡಿಯಿಂದ ನಾಲ್ಕುನೂರು ಅಡಿಗೆ ಹೋಗುತ್ತದೆ. I want to go on record that if they do not do this to protect the under ground water table, there will not be any drinking water in large number of towns and villages in our State and the country within the forceable future.

MR. SPEAKER :- We will be moving nearer to Ethopia.

SRI R.L.JALAPPA :- I completele agree with the Hon'ble Member. ಈಗ ನಾವು ಏನು ಎಕ್ಸ್‌ಟ್ರಾಕ್ಟ್ ಮಾಡುತ್ತಿದ್ದೇವೆ, ಈ ಗ್ರೌಂಡ್ ವಾಟರನ್ನು, ಅದು ಇನ್ನೊಂದು ಹತ್ತು ವರ್ಷ ಎಕ್ಸ್‌ಟ್ರಾಕ್ಟ್ ಮಾಡಿದರೆ ನಮಗೆ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ. Unless we take some urgent measures, one is contour bunding, the other is afforestation, the another one is deepening of the tank beds.

ಇವನ್ನು ನಾವು ಮಾಡದೇ ಇದ್ದರೆ ರೀ-ಚಾರ್ಜಿಂಗ್ ವ್ಯವಸ್ಥೆ ಮಾಡದೇ ಇದ್ದರೆ, ಇನ್ನು 10 ವರ್ಷಕ್ಕೆ ಕುಡಿಯುವ ನೀರು ಸಿಕ್ಕುವುದಿಲ್ಲ. ಹೋದ ವರ್ಷ, ಆಚೆ ವರ್ಷ ಮಾಡಿದ್ದು ಎಲ್ಲಾ ಈಗ ಡ್ರೈ ಆಗುತ್ತಿದೆ. ನಾಲ್ಕು ನೂರು ಅಡಿಗೆ ಹೋಗುತ್ತಿದ್ದೇವೆ.

MR. SPEAKER :- We have already over exploited it.

ಶ್ರೀ ಎಂ.ವೈ.ಘೋರ್ಪಡೆ :- ನನಗೆ ಕಾರಣ ಗೊತ್ತಿಲ್ಲ, ನಾವು ಸಣ್ಣಪುಟ್ಟ ಕೆಲಸಕ್ಕೆ ಲಕ್ಷ್ಯ ಕೊಡುವುದಿಲ್ಲ. ಹೆಚ್ಚು ದುಡ್ಡು ಖರ್ಚು ಮಾಡಲಿಕ್ಕೆ ಅವಕಾಶ ಇರತಕ್ಕಂಥ ಕೆಲಸಗಳಿಗೆ ನಾವು ಹೆಚ್ಚಿಗೆ ಲಕ್ಷ್ಯ ಕೊಡುತ್ತೇವೆ.

MR. SPEAKER :- China is a standing example.

ಶ್ರೀ ಎಂ.ವೈ.ಘೋರ್ಪಡೆ :- ನಾವು ಏನು ಮಾಡಲಿ ಅದಕ್ಕೆ ಹೋಗಬೇಕಲ್ಲಾ, ಹಳ್ಳಿಗೆ ಹೋಗಬೇಕು, ಚೆಕ್ ಡ್ಯಾಮ್ ಕಟ್ಟಬೇಕು, ಇದನ್ನು ಯಾರೂ ಮಾಡುವುದಕ್ಕೆ ತಯಾರಿಲ್ಲ. ದೊಡ್ಡ ಡ್ಯಾಮ್ ಕಟ್ಟುವುದಕ್ಕೆ ಹೇಳಿದರೆ ಎಲ್ಲರೂ ಹೋಗುತ್ತಾರೆ, ಕಟ್ಟುತ್ತಾರೆ. ಇನ್ನು ಪವರ್ ಬಗ್ಗೆ ಒಂದು ಮಾತು ಹೇಳಬೇಕು. ಇವತ್ತು ಇನ್‌ಸ್ಟಾಲ್ ಕೆಪ್ಯಾಸಿಟಿ 7500 ಮೆಗಾವ್ಯಾಟ್ ಇದೆ ಕರ್ನಾಟಕದಲ್ಲಿ, ಇನ್ನು 9 ಸಾವಿರ ಮೆಗಾವ್ಯಾಟ್ ಬೇಕು ಎಂದು ಎಲ್ಲರೂ ಒಪ್ಪಿಕೊಂಡಿದ್ದೇವೆ. ಎಂದರೆ ಏನು ಮುಂಬರುವ 5 ವರ್ಷದಲ್ಲಿ 5500 ಮೆಗಾವ್ಯಾಟ್ ವಿದ್ಯುತ್ತನ್ನು ನಾವು ತಯಾರು ಮಾಡಬೇಕಾದರೆ ಕರ್ನಾಟಕದಲ್ಲಿ ನಮ್ಮ ಎಲ್ಲರ ಲೆಕ್ಕದ ಪ್ರಕಾರ ಈಗ 5500 ಮಾಡಬೇಕು. ಆದರೆ ನಾವು ಏನು ಮಾಡಿದ್ದೇವೆ, ಅಪ್ರೂವ್ಡ್ ಪ್ರೈವೇಟ್ ಸೆಕ್ಟರ್ 3 ಸಾವಿರ ಮೆಗಾವ್ಯಾಟ್ ಎಂದು ಹೇಳುತ್ತಿದ್ದೇವೆ. ಅಂದರೆ ಅಷ್ಟನ್ನು ಪ್ರೈವೇಟ್ ಸೆಕ್ಟರ್ ಮಾಡುತ್ತಿದ್ದಾರೆ, ನಾವು ಅಪ್ರೂವಲ್ ಕೊಟ್ಟಿದ್ದೇವೆ ಎಂದು

ಅದರ ಅರ್ಥ. ಅವರು ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ನಾವು ಅಪ್ರೂವಲ್ ಕೊಟ್ಟಿದ್ದೇವೆ ಎಂದ ತಕ್ಷಣ ಅದು ಆಗಲಿಕ್ಕಿಲ್ಲ. ಆ ಭಯವೂ ನನಗೆ ಇದೆ. ಇನ್ನು Cogentrix ಏನಿದೆ, ಫಾರಿನ್ ಕಂಪನಿ ಅವರೊಡನೆ 1000 ಮೆಗಾವ್ಯಾಟ್‌ಗೆ ಒಂದು ಅಗ್ರಿಮೆಂಟನ್ನು ನಾವು ಮಾಡಿದ್ದೇವೆ. ತಾವು ಹೇಳುತ್ತಿದ್ದೀರಿ, ಗವರ್ನಮೆಂಟ್ ಆಫ್ ಇಂಡಿಯಾ ಇದಕ್ಕೆ ಅಪ್ರೂವಲ್ ಕೊಟ್ಟಿಲ್ಲ ಎಂದು. ನೋಡಿ ಇದು ಬಹಳ ವೈಟಲ್ ಇಷ್ಯೂ. ಇದರ ಬಗ್ಗೆ ಇಲ್ಲಿ ಸಂಪೂರ್ಣವಾಗಿ ಪ್ರಸ್ತಾಪ ಆಗಬೇಕು. ಗವರ್ನಮೆಂಟ್‌ನಿಂದ ಅಪ್ರೂವಲ್ ಏಕೆ ಕೊಟ್ಟಿಲ್ಲ? ನಾವು ಸುಮ್ಮನೆ 3 ಸಾವಿರ ಕೋಟಿ ಪ್ರೈವೇಟ್ ಸೆಕ್ಟರ್‌ಗೆ ಅಪ್ರೂವಲ್ ಕೊಟ್ಟು ಬಿಟ್ಟಿದ್ದೇವೆ ಎಂದ ತಕ್ಷಣ ತಾವು ನಮ್ಮ ಹೊಣೆಗಾರಿಕೆ ಮತ್ತು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಇದನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು 3 ಸಾವಿರ, 1, ಸಾವಿರ ಮೆಗಾವ್ಯಾಟ್ ಅಲ್ಲದೆ ಬ್ಯಾಲೆನ್ಸ್ ಮತ್ತೆ 1500 ಮೆಗಾವ್ಯಾಟ್ ಇದೆ. ನನ್ನ ಲೆಕ್ಕದ ಪ್ರಕಾರ ನೀವು 9 ಸಾವಿರ ಮೆಗಾವ್ಯಾಟ್‌ಗಿಂತ ಜಾಸ್ತಿ ಇಲ್ಲಿ ವಿದ್ಯುತ್ ಬೇಕಾಗಬಹುದು. ಈ ಸೆಂಟ್ರಲ್ ಎಲೆಕ್ಟ್ರಿಕ್ ಅಥಾರಿಟಿಯವರು ಒಂದು ಆನ್ಯೂಯಲ್ ಪವರ್ ಸರ್ವೆ ಎಂದು ಮಾಡುತ್ತಾರೆ. ಅದರಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ. The second highest power shortage of all the States is Karnataka in the whole country.

ಎಂದರೆ ಎಷ್ಟು ಗಂಭೀರವಾದಂತಹ ಪೊಸೀಷನ್ ಇದೆ, ಪರಿಸ್ಥಿತಿ ಇದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾತ್ತದೆ. ಅದೇ ರೀತಿ ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್, ಕ್ವಾಲಿಟಿ ಆಫ್ ಪವರ್ ಸಪ್ಲೈ ಬಹಳ ಕೆಳಮಟ್ಟಕ್ಕೆ ಹೋಗಿದೆ. ಇದರ ಬಗ್ಗೆ ಕೂಡ ಒಂದು ನಿರ್ದಿಷ್ಟವಾದಂತಹ ಕಾರ್ಯಕ್ರಮ ಹಾಕಿಕೊಳ್ಳದೆ ಹೋದರೆ ನಾವು ಬೇರೆ ಪ್ರಗತಿಯನ್ನು ಈ ರಾಜ್ಯದಲ್ಲಿ ಸಾಧನೆ ಮಾಡುವುದು ಬಹಳ ಕಷ್ಟವಾಗುತ್ತದೆ. ಈಗ ಬೇರೆ ವಿಷಯಗಳು ಇದೆ. ಈ ಹೆಲ್ತ್ ಬಗ್ಗೆ ಎಷ್ಟೋ ವಿಷಯಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಪ್ರೊಹಿಬಿಷನ್ ಬಗ್ಗೆ ಮಾಡಿರತಕ್ಕಂಥ, ಹೇಳಿರತಕ್ಕಂಥ ವಿಚಾರ. ಅದರ ಬಗ್ಗೆ ಒಂದು ಚಕಾರ ಶಬ್ದ ಗವರ್ನರ್ ಅಡ್ರೆಸ್‌ನಲ್ಲಿ ಅಥವಾ ಬಜೆಟ್ ಭಾಷಣದಲ್ಲಿ ಇವರು ಮಾಡಲಿಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಇದ್ದಾರೆ. ಅವರನ್ನು ನಾನು ಏನು ಕಾಗದ ಬರೆದೆ ಅದಕ್ಕೆ ಉತ್ತರ ಕೊಡುವಂಥ ಸೌಜನ್ಯವನ್ನು ಅವರು ತೋರಿಸಿದ್ದಾರೆ. ನನಗೆ ಅನಿಸುತ್ತದೆ ಅವರು ಅದರ ಬಗ್ಗೆ ಏನಾದರೂ ಮಾಡಬಹುದು ಎಂದು. ಎಲ್ಲಿಯವರೆಗೆ ಈ ಅರ್‍ಯಾಕ್ ಇದೆ, ಅಲ್ಲಿಯವರೆಗೆ ನೀವು ಜನರ ಹೆಲ್ತ್ ಕಾಪಾಡುತ್ತೇವೆ ಎಂದು ಹೇಳುವುದರಲ್ಲಿ ಬಹಳಷ್ಟು ಅರ್ಥ ಇಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾನು ಅದಕ್ಕೆ ಹೇಳಿದೆ. ಸೊಂಡೂರು ತಾಲ್ಲೂಕಿನಲ್ಲಿ ನಮ್ಮ 22 ಪಂಚಾಯಿತಿಗಳು ಒಮ್ಮತದ ತೀರ್ಮಾನ ಮಾಡಿ ರೆಸಲ್ಯೂಷನ್ ಮಾಡಿ ನಾವು ಮುಖ್ಯ ಮಂತ್ರಿಗಳಿಗೆ ಕಳುಹಿಸಿದ್ದೇವೆ. ಆ ಒಂದು ಅಭಿಪ್ರಾಯಕ್ಕೆ ನೀವು ಮನ್ನಣೆ ಕೊಡಲೇಬೇಕು. ಏಕೆಂದರೆ

ಇದಕ್ಕೆ ನಮ್ಮ ಹಕ್ಕಿದೆ. ಪಂಚಾಯಿತಿಯ ವ್ಯಾಪ್ತಿಯಲ್ಲಿ ನಮಗೆ ಅರ್ರ್ಯಾಕ್ ಬೇಡ ಎಂದರೆ ಅದನ್ನು ನೀವು ತೆಗೆಯಲೇ ಬೇಕು. ನೀವು ಜೂನ್‌ನಲ್ಲಿ ಆ್ಯಕ್ಷನ್ ಮಾಡುವಾಗ ಆ್ಯಕ್ಷನ್ ಮಾಡಿ. ಕೊಟ್ಟರೆ ಆಗ ಜನರ ಅಸಮಾಧಾನವನ್ನು ನಾವು ಅನುಭವಿಸಬೇಕಾಗುತ್ತದೆ. ನಾವು ಸುಮ್ಮನೆ ಇರುವುದಕ್ಕೆ ಆಗುವುದಿಲ್ಲ. ಇವತ್ತು ಎಕ್ಸೈಸ್ ಆ್ಯಕ್ಟ್‌ನ ಪ್ರಕಾರ ಕೂಡ ಎಲ್ಲಿ ಜನ ಬೇಡ ಎಂದು ಹೇಳುತ್ತಾರೆ, ಅಲ್ಲಿ ನೀವು ಅರ್ರ್ಯಾಕ್ ಆ್ಯಕ್ಷನ್ ಮಾಡುವುದಕ್ಕೆ ಅಧಿಕಾರ ಇಲ್ಲ. ಅದರಲ್ಲಿ ಪಂಚಾಯಿತಿ ರಾಜ್ಯ ಎಂದು ಹೇಳಿ ವಿಕೇಂದ್ರಿಕರಣ ಮಾಡಿ ಅಧಿಕಾರ ಕೊಡುವುದಕ್ಕೆ ಹೊರಟಿದ್ದೇವೆ. ಸಂಪೂರ್ಣವಾದಂತಹ ಅಧಿಕಾರ ಎಷ್ಟು ಸಾಧ್ಯ ಅಷ್ಟನ್ನು ಕೊಡುತ್ತಿದ್ದೇವೆ. ಎನ್ನುವಾಗ ಹೊಸದಾಗಿ ಆರಿಸಿ ಬಂದಿರತಕ್ಕಂಥ ಪಂಚಾಯಿತಿಗಳು ಈ ರೀತಿಯ ಒಂದು ಒಮ್ಮತದ ರೆಸಲ್ಯೂಷನ್ ಮಾಡುವುದಾದರೆ ಅದಕ್ಕೆ ಸರಿಯಾದಂತಹ ಮನ್ನಣೆ ಕೊಡುತ್ತದೆ ಎಂದು ನಾನು ನಂಬಿದ್ದೇನೆ. ಇದಕ್ಕಿಂತ ಜಾಸ್ತಿ ಏನೂ ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈಗ ಎಷ್ಟೋ ವೆಲ್‌ಫೇರ್ ಸ್ಕಿಮ್‌ಗಳು ಏನು ಮಾಡಿದ್ದೀರಿ ನಾನು ಅವುಗಳನ್ನು ಸ್ವಾಗತ ಮಾಡುತ್ತೇನೆ. ನಾನು ನಿಮ್ಮ ಒಳ್ಳೆಯ ಕೆಲಸವನ್ನು ಸ್ವಾಗತ ಮಾಡುವುದರಲ್ಲಿ ನನಗೆ ಯಾವುದೇ ಸಂಕೋಚವಿಲ್ಲ. ಉದಾಹರಣೆಗೆ ಒಂದು ಲಕ್ಷ ಮನೆಗಳನ್ನು ವರ್ಷಕ್ಕೆ ಕಟ್ಟುವುದಕ್ಕೆ ನೀವು ಹೊರಟಿದ್ದೀರಿ. ತಾವು ಅದನ್ನು ಬಜೆಟ್ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಅದೇ ರೀತಿ ಗವರ್ನಮೆಂಟ್ ಆಫ್ ಇಂಡಿಯಾ ಅವರೂ ಕೂಡ 10 ಲಕ್ಷ ಮನೆಗಳನ್ನು ಕಟ್ಟುವುದಕ್ಕೆ ಹೊರಟಿದ್ದಾರೆ. ನಮ್ಮ ಪಾಲು 10 ಲಕ್ಷದಲ್ಲಿ ನಮ್ಮ ಪಾಪ್ಯುಲೇಷನ್ ಪ್ರಕಾರ ನೋಡುವುದಾದರೆ ನಮ್ಮ 5 ಪರ್ಸೆಂಟ್ ಬರುತ್ತದೆ. ಈ 10 ಲಕ್ಷದಲ್ಲಿ 5 ಪರ್ಸೆಂಟ್ ನಮ್ಮ ಕರ್ನಾಟಕಕ್ಕೂ ಬರಬೇಕು. ಎಂದರೆ 50 ಸಾವಿರ ಮನೆ ಗವರ್ನಮೆಂಟ್ ಆಫ್ ಇಂಡಿಯಾ ಸ್ಕೀಂನಿಂದ ಬರಬೇಕು. ಮತ್ತು ನಮ್ಮ ಸರ್ಕಾರದ ಪ್ರಯತ್ನದಿಂದ ಒಂದು ಲಕ್ಷ. ಒಟ್ಟು 1 ಲಕ್ಷ 50 ಸಾವಿರ ಮನೆಗಳು ಕಟ್ಟುವುದರಲ್ಲಿ ಏನೂ ತೊಂದರೆ ಇಲ್ಲ. ಇದರ ಬಗ್ಗೆ ನೀವು ಕೇಂದ್ರಕ್ಕೆ ಕೇಳುವುದಕ್ಕೆ ಹಿಂಜರಿಯಬಾರದು. ಇದರಲ್ಲಿ ಯಾವ ಸಂಕೋಚದ ಪ್ರಶ್ನೆ ಇಲ್ಲ. ಅದೇ ರೀತಿ ಮಿಡ್ ಡೇ ಮೀಲ್ಸ್ ಹಾಗೂ ಓಲ್ಡ್ ಏಜ್ ಪೆನ್‌ಷನ್, ಇವು ಹೊಸ ಸ್ಕೀಂ ಏನಲ್ಲ. 70ರಲ್ಲಿ ಕೂಡ ಮಿಡ್ ಡೇ ಮೀಲ್ಸ್ ಕರ್ನಾಟಕದಲ್ಲಿ ಇತ್ತು. ಓಲ್ಡ್ ಏಜ್ ಪೆನ್‌ಷನ್ ಆಗಲೇ ಪ್ರಾರಂಭವಾಗಿದ್ದುದು. ಇದು ಎಲ್ಲರಿಗೂ ಗೊತ್ತಿದೆ. ಅದು ಈಗ ಸ್ವಲ್ಪ ಜಾಸ್ತಿಯಾಗಿದೆ. ಆದರೂ ಕೂಡ ಒಳ್ಳೆಯ ಕಾರ್ಯಕ್ರಮಗಳನ್ನು ನೀವು ಏನು ಕಾಪಾಡಿಕೊಂಡು ಬೆಳೆಸಿಕೊಂಡು ಬರುತ್ತಿದ್ದೀರಲ್ಲಾ ಎನ್ನುವುದೇ ಒಂದು ಸಂತೋಷ. ಅದಕ್ಕೆ ನಾನು ಹೇಳಿದೆ. ಆ ಪಕ್ಷ, ಈ ಪಕ್ಷ ಎಂದು ನಿಮ್ಮ ಭಾಷಣದಲ್ಲಿ ಏನಿದೆ ಅದನ್ನು ಬಿಟ್ಟಿದ್ದರೆ ಒಳ್ಳೆಯದಿತ್ತು. ಏಕೆಂದರೆ ಯಾವ ಪಕ್ಷ ಇದ್ದರೂ ಕೂಡ ಇದು ಪ್ರಜಾಪ್ರಭುತ್ವದ ಸಾಧನೆ. ಇದು 40- 50 ವರ್ಷಗಳ ಸಾಧನೆ. ಯಾವ ಪಕ್ಷ ಇದ್ದರೆ ಏನು? ಅಷ್ಟೊಂದು ವ್ಯತ್ಯಾಸ ಇಂತಹ ವಿಷಯಗಳಲ್ಲಿ ಆಗುವುದಿಲ್ಲ. ಇವತ್ತು ಮಿಡ್ ಡೇ ಮೀಲ್ಸ್, ಓಲ್ಡ್ ಏಜ್ ಪೆನ್‌ಷನ್, ಇದರ ಬಗ್ಗೆ ಸೆಂಟ್ರಲ್‌ನವರು ಕೆಲಸ ಮಾಡುತ್ತಿದ್ದಾರೆ. ನಾವೂ ಮಾಡುತ್ತಿದ್ದೇವೆ. ಇದರಲ್ಲಿ ಕಾನ್ಸಿಟಿಟ್ಯೂಷನ್ ನೋಡಿದರೆ

ಇದು ಸ್ಟೇಟ್ ಸೆಕ್ಟರ್ ಹೌದು, ಕನ್‌ಕರೆಂಟ್ ಸಬ್ಜೆಕ್ಟ್ ಹೌದು. ಎಂದರೆ ಕಾನೂನು ಪ್ರಕಾರ ಅವರು ಇಲ್ಲೂ ಪ್ರವೇಶ ಮಾಡುವಂತಹ ಹಕ್ಕು ಇದೆ. ಆದರೆ ಮೂಲಭೂತವಾಗಿ ಇದು ಸ್ಟೇಟ್ ಸೆಕ್ಟರ್. ಆದ ಕಾರಣ ನೀವು ಸೆಂಟ್ರಲ್‌ಗೆ ಹೇಳಬೇಕು. ಇದನ್ನು ನಾವು ಮಾತನಾಡಿಕೊಂಡು ಒಂದು ಹೊಂದಾಣಿಕೆ ಮಾಡುವುದು, ಇದು ಪ್ಯಾರಲಲ್ ಸ್ಕೀಂ ಆಗಿ ಬೆಳೆಸುವುದು ಬೇಡ ಎಂದು. ಸ್ಟೇಟ್ ಸ್ಕೀಂ ಒಂದು ಸೆಂಟ್ರಲ್ ಸ್ಕೀಂ ಒಂದು ಎಂದು. ಎಲ್ಲೆಲ್ಲಿ ಅದೇ ವಿಷಯದ ಮೇಲೆ, ಸೆಂಟ್ರಲ್ ಸ್ಕೀಂ, ಸ್ಟೇಟ್ ಸ್ಕೀಂ ಇದೆ, ಅವೆಲ್ಲಾ ಒಂದು ಹೊಂದಾಣಿಕೆ ಮಾಡುವಂತಹ ಒಪ್ಪಂದ, ನೀವು ಸೆಂಟ್ರಲ್ ಜೊತೆಗೆ ಮಾಡುವಂತಾದ್ದು ಈ ಮಾತು ಕರ್ನಾಟಕಕ್ಕೆ ಮಾತ್ರ ಅನ್ವಯಿಸುವುದಿಲ್ಲ. ಎಲ್ಲಾ ರಾಜ್ಯಗಳಿಗೂ ಅನ್ವಯಿಸುತ್ತದೆ. ಇನ್ನು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಬರಿ ಹೆಸರಿಗೆ ಇದೆ. ಇಂತಹ ವಿಷಯಗಳು ಚರ್ಚೆನೇ ಆಗುವುದಿಲ್ಲ. ನಾನು ನೋಡುತ್ತಿದ್ದೇನೆ ಬರೇ ರಾಜಕೀಯ ಚರ್ಚೆನೇ ಜಾಸ್ತಿ. ಆರ್ಥಿಕವಾಗಿ ಯಾವಾಗ ಚರ್ಚೆ ನ್ಯಾಯವಾಗಿ ಮಾಡಬೇಕು ಅದರ ಕಡೆ ಯಾರೂ ಲಕ್ಷ್ಯ ಕೊಡುತ್ತಿಲ್ಲ. ಇವತ್ತು ಹಣಕಾಸಿನ ಮಂತ್ರಿಗಳು, ಎಕ್ಸೈಸ್ ಟ್ಯಾಕ್ಸನ್ನು ಭಾರಿ ಪ್ರಮಾಣದಲ್ಲಿ ಇಳಿಸಿದ್ದಾರೆ. ಉದ್ದೇಶ ಏನು ಅಂದರೆ ಇನ್‌ಫ್ಲೇಷನ್ ಕಡಿಮೆ ಆಗಲಿ ಎಂದು. ಇವತ್ತು 11 ಪರ್ಸೆಂಟ್ ಇನ್‌ಫ್ಲೇಷನ್ ಇದೆ. ಈಗ ಸೇಲ್ ಟ್ಯಾಕ್ಸ್, ನಮ್ಮದೇ ನಮ್ಮ ಎಲಾಸ್ಟಿಕ್ ಟ್ಯಾಕ್ಸ್ ಇರುವುದರಿಂದ ಅದನ್ನು ಜಾಸ್ತಿ ಮಾಡುವಂತಹ ಹವ್ಯಾಸ ಒಂದು ವಿಚಾರ. ಯಾರು ಫೈನಾನ್ಸ್ ಮಿನಿಸ್ಟರ್ ಆದರೂ ಅದು ಬಿಟ್ಟಿದ್ದು ಅಲ್ಲ. ನಾನೇ ಇರಲಿ, ನೀವೇ ಇರಲಿ. ಏಕೆಂದರೆ ಬೇರೆ ನಮಗೆ ಎಲಾಸ್ಟಿಕ್ ಸೋರ್ಸ್ ಇಲ್ಲ. ಆದುದರಿಂದ ನಾವು ಸೇಲ್ಸ್ ಟ್ಯಾಕ್ಸನ್ನು ನೋಡುತ್ತಿದ್ದೇವೆ, ನೀವು ನೋಡುತ್ತಿದ್ದೀರಿ. ಆದರೆ ಈ ಸೇಲ್ಸ್ ಟ್ಯಾಕ್ಸನ್ನು ಮತ್ತು ಎಕ್ಸೈಸ್ ಏನಿದೆ ಇದನ್ನು ಪರಸ್ಪರ ವಿರೋಧವಾಗಿ ಉಪಯೋಗಿಸಬಾರದು ಎಂಬ ಈ ದೃಷ್ಟಿಯಿಂದ ಸೆಂಟ್ರಲ್, ಸ್ಟೇಟ್‌ಗೆ ಇದರ ಬಗ್ಗೆ ಕೂಡ ಚರ್ಚೆ ಮಾಡುವ ಅವಶ್ಯಕತೆ ಬಹಳಷ್ಟು ಇದೆ. ಇನ್ನು ವಿಲೇಜ್ ಸ್ಯಾನಿಟೇಷನ್‌ಗೆ ನೀವು 20 ಕೋಟಿ ಕೊಟ್ಟಿದ್ದೀರಿ. ಅದನ್ನು ನಾನೂ ಕೂಡ ಆ ಕಾಲಕ್ಕೆ ನಿಮ್ಮ ಸರ್ಕಾರಕ್ಕೆ ಹೇಳುತ್ತಿದ್ದೆ. ಎವತ್ತು ಅದನ್ನೆ ತಾವು ಮುಂದುವರಿಸುತ್ತಿದ್ದೀರಿ ; ಸಂತೋಷ. ಸ್ವಶಕ್ತಿ, ಸೆಲ್ಫ್ ಎಂಪ್ಲಾಯ್‌ಮೆಂಟ್ ಫಾರ್ ವುಮೆನ್ ಎಂದು ಏನು ಮಾಡಿದ್ದೀರಿ ಇದು ಒಳ್ಳೆಯ ಕಾರ್ಯಕ್ರಮ. ಇದು ಬರೀ ಹೆಣ್ಣು ಮಕ್ಕಳಿಗೆ ಮಾತ್ರ ಅನ್ವಯಿಸಬಾರದು. ಇಡೀ ಬಡ ಜನಾಂಗಕ್ಕೆ ಈ ಸ್ವಶಕ್ತಿ ಕಾರ್ಯಕ್ರಮವನ್ನು ಅಳವಡಿಸಬೇಕು. ಇದು ಹೊಸ ಕಾರ್ಯಕ್ರಮವೇನಲ್ಲ. ಹೆಸರು ಹೊಸದು, ಆದರೆ ಈ ರೀತಿ ಸೆಲ್ಫ್ ಎಂಪ್ಲಾಯ್‌ಮೆಂಟ್ ಪ್ರೊಗ್ರಾಮ್ಸ್ ಏನಿದೆ ಇದನ್ನು ಇಡೀ ದೇಶದಲ್ಲೇ ಬೆಳಸಬೇಕು ಎನ್ನುವ ವಿಚಾರ ಹಾಗೆ ಇದೆ. ಇನ್ನು ಶೇ 30 ರಷ್ಟು ಹೆಣ್ಣು ಮಕ್ಕಳಿಗೆ ಪಾಲಿಟೆಕ್ನಿಕ್‌ನಲ್ಲಿ ಸೀಟು ರಿಸರ್ವ್ ಮಾಡಬೇಕೆಂದು ಇದೆ. ಇದೂ ಕೂಡ ಒಳ್ಳೆಯ ವಿಚಾರ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಡಿಸ್ಟ್ರಿಕ್ಟ್‌ಗೆ ಮಾಡಲ್ ರೆಸಿಡೆನ್ಸಿಯಲ್ ಸ್ಕೂಲ್ ಆಗಬೇಕು; ಇದೂ ಕೂಡ ಒಳ್ಳೆಯ ವಿಚಾರ. ನನ್ನ ದೃಷ್ಟಿಯಲ್ಲಿ ನೀವು ಒಂದು

ಒಳ್ಳೆಯ ಮಾಡೆಲ್ ರೆಸಿಡೆನ್ಸಿಯಲ್ ಸ್ಕೂಲ್ ಮಾಡಿ ಎಲ್ಲಾ ಜಾತಿ ಮತಗಳಲ್ಲಿ ಬಡ ಜನರಲ್ಲಿ ಇರುವಂತಹ ಒಳ್ಳೆಯ ವಿದ್ಯಾರ್ಥಿಗಳನ್ನು ಗುರುತಿಸಿ ನೀವು ಅಲ್ಲಿ ಓದಿಸುವುದಾದರೆ ಈ ರಿಸರ್ವೇಷನ್ ಅನ್ನು 10 ವರ್ಷಗಳಾದರೂ ಇಟ್ಟುಕೊಳ್ಳುವಂತಹ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ಎಲ್ಲಾ ಸಮಾಜದ ಮಕ್ಕಳು ಕೆಲವರು ಡಾಕ್ಟರ್ ಆಗುತ್ತಾರೆ, ಕೆಲವರು ಐ.ಎ.ಎಸ್. ಆಫೀಸರ್‌ಗಳು ಆಗುತ್ತಾರೆ, ಕಮೀಷನರ್ ಆಗುತ್ತಾರೆ. ಆಗ ರಿಸರ್ವೇಷನ್ ತೆಗೆದು ಹಾಕುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ನಾವು ಮಾಡದೇ ರಿಸರ್ವೇಷನ್ ಅನ್ನು ವರ್ಷೆ ವರ್ಷೆ ಮುಂದಕ್ಕೆ ಹಾಕುತ್ತಿದ್ದೇವೆ. ಮತ್ತು ಅದರ ಬಗ್ಗೆ ಜಗಳವನ್ನು ಆಡುತ್ತಿದ್ದೇವೆ. ನನಗೆ ಅನ್ನಿಸುತ್ತದೆ ಜಿಲ್ಲಾ ಮಟ್ಟದಲ್ಲಿ ಸಾಧ್ಯವಾದರೆ ತಾಲ್ಲೂಕು ಮಟ್ಟದಲ್ಲಿ ಉತ್ತಮವಾದಂತಹ ಸಂಸ್ಥೆಯನ್ನು ಮಾಡಿ ಅದರಲ್ಲಿ ಅಡ್‌ಮಿಷನ್ ಎಲ್ಲರಿಗೂ ಸಿಗುವಂತೆ ಮಾಡಬೇಕು. ಅಲ್ಲಿ ಬರೀ ಶ್ರೀಮಂತ ಮಕ್ಕಳು ಅಲ್ಲ, ಎಲ್ಲರಿಗೂ ಅವಕಾಶ ಸಿಕ್ಕಬೇಕು. ಇದು ಬಹಳ ಮುಖ್ಯವಾದದ್ದು, ಇವತ್ತು ಒಳ್ಳೆಯ ಶಾಲೆಗಳಿವೆ ಶ್ರೀಮಂತ ಮಕ್ಕಳು ಹೋಗುತ್ತಿದ್ದಾರೆ. ಅಲ್ಲಿ ಬಡ ಮಕ್ಕಳು ಹೋಗುವುದಕ್ಕೆ ಅವಕಾಶವಿರುವುದಿಲ್ಲ. ನೀವು ಈ ವಿಚಾರದಲ್ಲಿ ಮಾಡುವುದಾದರೆ ಇದರಲ್ಲಿ ನೀವು ಯಶಸ್ಸು ಆಗುವುದಾದರೆ ನೀವು ಜಿಲ್ಲಾ ಮಟ್ಟದಲ್ಲಿಯೇ ಎಂಟ್ರೆನ್ಸ್ ಟೆಸ್ಟ್ ಮಾಡಬೇಕಾಗುತ್ತದೆ. ನಮ್ಮ ಆಫೀಸರ್ಸ್ ಮಾಡುವುದಲ್ಲ. ನ್ಯಾಷನಲ್ ಇನ್‌ಸ್ಟಿಟ್ಯೂಟ್‌ನವರು ಏನಿದ್ದಾರೆ. ಇಲ್ಲಿ ಸೈಂಟಿಫಿಕ್ ಟೆಸ್ಟ್ ಎಂದರೆ ಆಪ್ಟಿಟ್ಯೂಡ್ ಟೆಸ್ಟ್ ಮಾಡುತ್ತಾರೆ. ಆದರೆ ಹಳ್ಳಿಗಳಲ್ಲಿರುವಂತಹ ಮಕ್ಕಳಿಗೆ ಮಾಹಿತಿ ಇರುವುದಿಲ್ಲ. ಆದರೆ ಬುದ್ಧಿ ಇರುತ್ತದೆ. ಅವರಿಗೆ ತಲೆಯಲ್ಲಿ ಬುದ್ಧಿ ಇದೆಯೋ ಇಲ್ಲವೋ ಎಂಬುದನ್ನು ನೋಡುವುದೇ ಆಪ್ಟಿಟ್ಯೂಡ್ ಟೆಸ್ಟ್. ಇದನ್ನು ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಮಾಡಿದರೆ ಅಂತಹ ಹುಡುಗರನ್ನು ನೀವು ಗುರುತಿಸುವುದಕ್ಕೆ ಸಾಧ್ಯವಾಗುತ್ತದೆ. ನೀವು ಬೆಂಗಳೂರಿನಲ್ಲಿ ಟೆಸ್ಟ್ ಇಟ್ಟರೆ ಯರೂ ಬರುವುದಿಲ್ಲ. ಅವರಿಗೆ ಬರುವುದಕ್ಕೂ ಆಗುವುದಿಲ್ಲ. ಆದುದರಿಂದ ನೀವು ರೆಸಿಡೆನ್‌ಷಿಯಲ್ ಸ್ಕೂಲ್ ಐಡಿಯಾ ಯಶಸ್ವಿಯಾಗುವುದಾದರೆ Identification of students at District level by scientific aptitude test ಇದು ಬಹಳ ಮುಖ್ಯವಾದದ್ದು, ಇದರಲ್ಲಿ ಬೇರೆ ಬೇರೆ ಜನಾಂಗದ ಬಡ ಹುಡಗರೂ ಇದ್ದಾರೆ.

ಅವರನ್ನು ಗುರುತಿಸಬೇಕು. ಆಗ ಈ ಜಾತಿ, ಮೇಲು ಕೀಳು ಎಂಬ ವಿಚಾರವೇನಿದೆ, ಇದನ್ನು ಸಂಪೂರ್ಣವಾಗಿ ತಡೆ ಹಾಕುವುದಕ್ಕೆ ಇದು ಒಂದೇ ಒಂದು ಮಾರ್ಗವಾಗುತ್ತದೆ ಎಂದು ನನಗನ್ನಿಸುತ್ತದೆ. ಆದುದರಿಂದ ಮಾಡೆಲ್ ರೆಸಿಡೆನ್ಸಿಯಲ್ ಸ್ಕೂಲ್ ಎಂಬ ಸಂಸ್ಥೆ ಏನಿದೆ ಇದನ್ನು ಬಡವರಿಗೋಸ್ಕರ ಮಾಡಬೇಕು ಅಂದರೆ ಶ್ರೀಮಂತರು ಅಲ್ಲಿ ಇರಬಾರದೆಂದಲ್ಲ, ಶ್ರೀಮಂತರು ಏನೂ ಬೇರೆ ಜಾತಿಯಲ್ಲ. ಶ್ರೀಮಂತ ಹುಡಗರಿಗೂ ಬುದ್ಧಿ ಇರಬೇಕು. ಅವರಿಗೂ ಅದೇ ಆಪ್ಟಿಟ್ಯೂಡ್ ಟೆಸ್ಟ್ ಇರಬೇಕು. ಅವರೆಲ್ಲಾ ಒಂದೇ ತರಹ ಓದಿದರೆ ಶ್ರೀಮಂತರು, ಬಡವರು, ಆ ಜಾತಿ ಈ ಜಾತಿ, ಎನ್ನುವ ವಿಚಾರ

ಬಹಳಷ್ಟು ನಾವು ತೆಗೆದು ಹಾಕುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಒಂದು ವಿಚಾರ ಗ್ರಾಮ ಪಂಚಾಯತ್ ಬಗ್ಗೆ ನಮ್ಮ ಆ್ಯಕ್ಟ್‌ನಲ್ಲಿ 1 ಲಕ್ಷ ರೂ.ಗಳನ್ನು ವರ್ಷೆ ವರ್ಷೆ ಕೊಡಬೇಕೆಂದು ನಾವು ಮಾಡಿದ್ದೇವೆ. ನೀವು ಅದನ್ನು 1 ಲಕ್ಷ 25 ಸಾವಿರ ರೂ.ಗಳೆಂದು ಮಾಡಿದ್ದೀರಿ. ಬಹಳ ಸಂತೋಷ. ಇದನ್ನು ಇನ್ನೂ ಜಾಸ್ತಿ ಮಾಡಿದರೆ ಇನ್ನೂ ಬಹಳ ಸಂತೋಷ. ನಮ್ಮ ಸರ್ಕಾರ ಇದ್ದಾಗ ನಾವು ಸ್ಟೇಟ್ ಫೈನಾನ್ಸ್ ಕಮಿಷನ್ ನೇಮಕ ಮಾಡಿದ್ದೇವೆ. ಅದನ್ನು ನಾವು ಏಪ್ರಿಲ್ 30 ನೇ ತಾರೀಖು ನೇಮಕ ಮಾಡಿದ್ದೇವೆ. ನಮ್ಮ ಕಾನೂನಿನ ಪ್ರಕಾರ ಅದು ಆ್ಯಕ್ಟ್ ಅದ ನಂತರ ಒಂದು ವರ್ಷದ ಸ್ಟೇಟ್ ಫೈನಾನ್ಸ್ ಕಮೀಷನ್ ಆಗಬೇಕೆಂದು ಇದೆ. ಅದನ್ನು ನಾವು ಮಾಡಿದ್ದೇವೆ. ನಾವು ಅದನ್ನು ಮಾಡುವಾಗ ಅವರಿಗೆ ಹೇಳಿದ್ದೇವೆ. 3- 12- 1994ಕ್ಕೆ ಇಂಟರಿಯಮ್ ರಿಪೋರ್ಟ್ ಅನ್ನು ಕೊಡಬೇಕೆಂದು ಹೇಳಿದ್ದೇವೆ. ಈಗ ಡಿಸೆಂಬರ್ 94 ಮುಗಿದು ಹೋಯಿತು. ಇಂಟರಿಯಮ್ ರಿಪೋರ್ಟ್ ಈಗ ಬರಲಿಲ್ಲ. ನಮ್ಮ ಆರ್ಡರ್‌ನಲ್ಲಿ ಇನ್ನೊಂದು ಮಾತನ್ನು ಹೇಳಿದ್ದೇವೆ. ಫೈನಲ್ ಇನ್ನೊಂದು 30 ನೇ ಸೆಪ್ಟೆಂಬರ್ 95ಕ್ಕೆ ಬರಬೇ ಎಂದು. ನನಗೆ ಏನು ಆಸೆ ಇತ್ತು, ಈ ಇಂಟೀರಿಯಮ್ ರಿಪೋರ್ಟ್ ಆಧಾರದ ಮೇಲೆ ತಮ್ಮ ಬಜೆಟ್ ಅನ್ನು ರಚನೆ ಮಾಡುವುದಕ್ಕೆ ಸಹಾಯವಾಗುತ್ತದೆ ಎಂಬುದು ನನ್ನ ವಿಚಾರವಿತ್ತು. ದುರ್ದೈವದಿಂದ ಆ ರೀತಿಯಾಗಲಿಲ್ಲ. ಮುಂದಿನ ವರ್ಷದ ಬಜೆಟನ್ನು ಮಂಡನೆ ಮಾಡುವಾಗ ಖಂಡಿತವಾಗಿ ಈ ಆಧಾರದ ಮೇಲೆ ನೀವು ಬಜೆಟನ್ನು ರೂಪಿಸಬೇಕು. ಇನ್ನು ಒಂದು ವರ್ಷವಾದರೂ ನಿಮ್ಮ ಸರ್ಕಾರವೇ ಇರುತ್ತದೆ. ಅದರಲ್ಲಿ ನನ್ನದು ಏನೂ ಅನುಮಾನವಿಲ್ಲ. ನಿಮ್ಮ ಮುಂದಿನ ವರ್ಷದ ಬಜೆಟ್‌ಗೆ ಒಂದು ಕ್ರೆಡಿಬಿಲಿಟಿ ಬರಬೇಕಾದರೆ ಈ ಮಾತನ್ನು ನೀವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಇವತ್ತು ಏನು ವ್ಯತ್ಯಾಸ ಕಂಡು ಬರುತ್ತಿದೆ, ಆ ವ್ಯತ್ಯಾಸ ಮುಂದಿನ ಬಜೆಟ್‌ನಲ್ಲಿ ನೋಡಬಾರದು. ಆ ರೀತಿ ನೋಡಿದರೆ ನೀವು ಯಾವ ಬಜೆಟ್ ಇಟ್ಟರ್ ಕೂಡ ನಾವು ಗಂಭೀರವಾಗಿ ಲಕ್ಷ್ಯ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನು ರೈಸ್ ಸಬ್ಸಿಡಿ ಬಗ್ಗೆ ತಾವು ಏನು ಹೇಳಿದ್ದೀರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ.

MR. SPEAKER :- You are talking of decentralisation. You were also Minister for Rural Develoopment & Panchayat Raj. ಇತ್ತೀಚಿನ ದಿನಗಳಲ್ಲಿ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹಾಗೂ ಇತರ ಸದಸ್ಯರುಗಳು ಕೆಲವು ಪ್ರಿವಿಲೇಜಸ್‌ಗಳು ಶಾಸಕರಿಗೆ ಕರ್‌ಟೈಲ್ ಆಗಿದ್ದಾವೆ ಎನ್ನತಕ್ಕ ಇಷ್ಟವನ್ನು ತೆಗೆದುಕೊಂಡಿದ್ದರು. In view of the existence of newly elected decentralised institutions ತಮ್ಮ ಅಭಿಪ್ರಾಯ ಏನು?

ಶ್ರೀ ಎಂ.ವೈ.ಘೋರ್ಪಡೆ :- ಇದಕ್ಕೆ ನನ್ನ ಅಭಿಪ್ರಾಯ ಸ್ಪಷ್ಟವಾಗಿದೆ. ಅವರಿಗೆ ಹಣ ಅಷ್ಟೇ ಅಲ್ಲ, ಅವರ ಅಧಿಕಾರ ಮತ್ತು ಜವಾಬ್ದಾರಿ ಕೂಡ ಎಷ್ಟು ಜಾಸ್ತಿ

ಮಾಡುವುದಕ್ಕೆ ಸಾಧ್ಯ, ಅದನ್ನು ಮಾಡುತ್ತಲೇ ಹೋಗಬೇಕು. It is a pertinent question. Atleast you are interested in it. Many people are not interested in it.

MR. SPEAKER :- I am glad atleast you have responded to that.

ಶ್ರೀ ಎಂ.ವೈ.ಘೋರ್ಪಡೆ :- ಕಾಂಗ್ರೆಸ್ ಸರ್ಕಾರ ಇದ್ದಾಗ, ಜನತಾ ಸರ್ಕಾರ ಇದ್ದಾಗ ಇಲ್ಲಿ ಬೆಂಗಳೂರಿನಲ್ಲಿರತಕ್ಕ ಜನ ಅವರಿಗೆ ಕೊಟ್ಟಿರುವಂತಹ ಫಂಕ್ಷನ್ ವಾಪಸ್ಸು ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಸಾಕಷ್ಟು ಮಾಡಿದ್ದಾರೆ. ನಾವು ಮಾಡಿದ ತಪ್ಪಲ್ಲ. ಯಾರೇ ರಾಜ್ಯಭಾರ ಮಾಡಲಿ, ಈ ಅಧಿಕಾರವನ್ನು ಸರ್ಕಾರವು ಅವರಿಗೆ ಕೊಟ್ಟರೆ ಸರಿಯಾಗುವುದಿಲ್ಲ. ಅದು ನಮ್ಮ ಕಡೆ ಇರಬೇಕು ಎಂದು ನಿರ್ಧಾರ ಕೈಗೊಳ್ಳುತ್ತಾರೆ. ನಿಮ್ಮ ಕಾಲದಲ್ಲಿ ಕೋ ಆಪರೇಷನ್ ಅನ್ನು ವಾಪಸ್ ತೆಗೆದುಕೊಂಡಿತ್ತು. ಇದನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಏನು ಕಾರಣ? ನನ್ನ ಕಾಲದಲ್ಲಿ I had to resist that temptation. I had to resist severally. ಎಲ್ಲರಿಗೂ ಇದು ಆಗುವುದಿಲ್ಲ. ಯಾರೇ ಮಂತ್ರಿಯಾಗಲಿ ಆ tendency ಯನ್ನು ರೆಸಿಸ್ಟ್ ಮಾಡಬೇಕಾಗುತ್ತದೆ. ರೈಸ್ ಸಬ್ಸಿಡಿ ಏನಿದೆ, ಇದನ್ನು ಸ್ವಾಗತ ಮಾಡುತ್ತೇನೆ. ಇದನ್ನು ಸ್ವಾಗತ ಮಾಡುವುದಕ್ಕೆ ವೈಯಕ್ತಿಕವಾದಂತಹ.....

ಶ್ರೀ ಕಷ್ಯಪ್ಪನವರ್ :- ದಿವಂಗತ ಮಾನ್ಯ ದೇವರಾಜ ಅರಸುರವರ ಕಾಲದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರ ಮತ್ತು ತಾಲ್ಲೂಕು ಪಂಚಾಯತ್ ಅಧ್ಯಕ್ಷರ ಒಂದು ಸಮಾವೇಶವನ್ನು ಏರ್ಪಡಿಸಿದಂತಹ ಸಂದರ್ಭದಲ್ಲಿ ಈಗ ನಾವು ಆಶ್ರಯ ಮನೆಗಳು ಎಂದು ಏನು ಕಟ್ಟುತ್ತಿದ್ದೇವೆ ಅದೇ ರೀತಿ ಆಗ ಜನತಾ ಮನೆಗಳು ಎಂದು ಕಟ್ಟುತ್ತಿದ್ದೆವು. ಆಗ ಆ ಅಧಿಕಾರವನ್ನು ಗ್ರಾಮ ಪಂಚಾಯತ್ ಮಟ್ಟಕ್ಕೆ ಕೊಡಬೇಕೆಂದು ಗ್ರಾಮ ಪಂಚಾಯತ್ ಅಧ್ಯಕ್ಷರು ಎಲ್ಲಾ ಸೇರಿ ಮಾನ್ಯ ದೇವರಾಜ ಅರಸುರವರನ್ನು ಕೇಳಿದಾಗ ಅವರು ರಾಜ್ಯದಲ್ಲಿ ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಸದಸ್ಯರು ಹಾಗೂ ಅಧ್ಯಕ್ಷರು ಎಲ್ಲಾ ಸೇರಿ 12 ಸಾವಿ ಜನರು ಇದ್ದೀರಿ, ಒಂದು ವಾರ್ಡ್‌ನಲ್ಲಿ 500 ಮತಗಳಿಂದ ನೀವು ಚುನಾಯಿತರಾಗಿರುತ್ತೀರಿ. ಆಗ ನಿಮಗೆ ಯಾರು ಓಟು ಹಾಕಿದ್ದಾರೆ. ಯಾರು ಓಟು ಹಾಕಿಲ್ಲ ಯಾರನ್ನು ವಿರೋಧ ಮಾಡಬೇಕು, ಯಾರಿಗೆ ಮನೆಯನ್ನು ಕೊಡಬೇಕೆಂದು ಈ ರೀತಿ ಪಕ್ಷಾತೀತವಾಗಿ ಮಾಡುತ್ತೀರಿ. ನಿಷ್ಪಕ್ಷಪಾತವಾಗಿ ಅಲ್ಲಿ ನೀವು ನಿರ್ಣಯ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆಂದು, ಆದುದರಿಂದ ಇದನ್ನು ಮೆಲ್ಮಟ್ಟದಲ್ಲಿ ಇಟ್ಟರೆ ಇಡೀ ತಾಲ್ಲೂಕಿನಲ್ಲಿರತಕ್ಕ ಒಬ್ಬ ಶಾಸಕರು ಅಥವಾ ಒಬ್ಬ ಅಧ್ಯಕ್ಷರ

ಕೈಗೆ ಕೊಟ್ಟರೆ ಅವರಿಗೆ ಯಾರು ಯಾರು ಎನ್ನತಕ್ಕದ್ದು ತಿಳಿಯುವುದಿಲ್ಲ. ಆದ್ದರಿಂದ ನಿಷ್ಪಕ್ಷಪಾತವಾಗಿ ನ್ಯಾಯವಾದಂತಹ ರೀತಿಯಲ್ಲಿ ಹಂಚಿಕೆಯಾಗುತ್ತದೆ. ಆದುದರಿಂದ ಈ ಅಧಿಕಾರವನ್ನು ನಿಮ್ಮ ಕೈಗೆ ಕೊಡುವುದಿಲ್ಲವೆಂದು ಉತ್ತರ ಕೊಟ್ಟರು. ಇಂದೂ ಕೂಡ ಇದೀಗ ಚುನಾಯಿತರಾಗಿ ಇನ್ನೂ ಅವರು ಅನೇಕ ತರಬೇತಿಯನ್ನು ಪಡೆದು, ನ್ಯಾಯವಾದ ರೀತಿಯಲ್ಲಿ ಆಡಳಿತವನ್ನು ನಡೆಸುವಂತಹ ಒಂದು ಪರಿಸ್ಥಿತಿಯಲ್ಲಿರುವಾಗ, ಈಗಲೇ ಅವಶ್ಯಕವಾದ ಆಶ್ರಯ ಕಟ್ಟಡಗಳ ಅಧಿಕಾರವನ್ನು ಶಾಸಕರಿಗೆ ಕೊಡಬೇಕೆಂಬ ವಿಚಾರವನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು :- ಆದಾದ ನಂತರ ಮಾನ್ಯ ದಿವಂಗತ ನಜೀರ್ ಸಾಬ್‌ರವರು ಗ್ರಾಮ ಸಭೆಯ ವಿಚಾರವನ್ನು ಹೇಳಿದ್ಧಾರೆ. ಅದನ್ನು ತಾವು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು.

ಶ್ರೀ ಎಂ.ವೈ.ಘೋರ್ಪಡೆ :- ನಾವು ಸಂಪೂರ್ಣವಾಗಿ ಒಪ್ಪಿರತಕ್ಕಂಥ ಸಿದ್ಧಾಂತ ಎಂದರೆ ಯಾವುದನ್ನು ಹಳ್ಳಿ ಮಟ್ಟದಲ್ಲಿ ಮಾಡುವುದಕ್ಕೆ ಸಾಧ್ಯ ಅದು ಹಳ್ಳಿ ಮಟ್ಟದಲ್ಲಿ ನಡೆಯಬೇಕು, ಯಾವುದನ್ನು ತಾಲ್ಲೂಕು ಮಟ್ಟದಲ್ಲಿ ಮಾಡುವುದಕ್ಕೆ ಸಾಧ್ಯ ಅದು ತಾಲ್ಲೂಕು ಮಟ್ಟದಲ್ಲಿ ನಡೆಯಬೇಕು, ಯಾವುದು ಜಿಲ್ಲಾ ಮಟ್ಟದಲ್ಲಿ ಮಾಡಲಿಕ್ಕೆ ಸಾಧ್ಯ ಅದು ಜಿಲ್ಲಾ ಮಟ್ಟದಲ್ಲಿ ನಡೆಯಬೇಕು. ಈ ಬಜೆಟ್ ನನಗನ್ನಿಸುತ್ತದೆ ಮೂರನೇ ಒಂದು ಭಾಗ ನಾವು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಮುಖಾಂತರ ಖರ್ಚು ಮಾಡುವವರಿದ್ದೀರಿ; ಅದು ಜಾಸ್ತಿಯಾಗಲಿ ಎಂದು ನಾನು ಹಾರೈಸುತ್ತೇನೆ. ನಮ್ಮ ಸಿಬ್ಬಂಧಿ ವರ್ಗವನ್ನು ಅವರಿಗೆ ಕೊಟ್ಟಿದ್ದೇವೆ. ಇದನ್ನು ನಾನು ಕಾನೂನಿನ ಪ್ರಕಾರ ಮಾಡಲಿಕ್ಕೆ ಎಲ್ಲಾ ರೀತಿಯಿಂದ ನೋಡುತ್ತಿದ್ದೇನೆ. ಬೇಗ ಇದನ್ನು ಸೂಪರ್‌ವಿಷನ್ ಮಾಡಿ ಕೆಲಸಗಳನ್ನು ಮಾಡಲಿಕ್ಕೆ ನಾವೆಲ್ಲಾ ಸಹಾಯ ಮಾಡಬೇಕಾಗುತ್ತದೆ. ಪಕ್ಷಪಾತವಾಗಿದೆ, ನಿಷ್ಪಕ್ಷಪಾತವಾಗಿದೆ.....

ಶ್ರೀ ಎಂ.ಪಿ.ಪ್ರಕಾಶ್ :- ಮಾನ್ಯ ಅಧ್ಯಕ್ಷರೇ, ಸದಸ್ಯರು ಹೇಳಿದರು, ಇಂತಹದೇ ಒಂದು ಪ್ರಶ್ನೆಯನ್ನು ಇಂಗ್ಲೀಷರು ನಮಗೆ ಸ್ವಾತಂತ್ರ್ಯವನ್ನು ಕೊಡುವ ಸಂದರ್ಭದಲ್ಲಿ ಬಂದಾಗ ಕೇಳಿದ್ದರು ಎಂದು ಮಹಾತ್ಮ ಗಾಂಧೀಜಿಯವರು ಹೇಳುತ್ತಿದ್ದರು, ನೀವು ಇಷ್ಟು ಜಾತಿಗಳು, ಇಷ್ಟು ಭಾಷೆಗಳು ಇಟ್ಟುಕೊಂಡು ನಿಮ್ಮನ್ನು ನೀವೇ ಆಳಿಕೊಳ್ಳುವುದಕ್ಕೆ ಅನರ್ಹರಾಗಿದ್ದೀರಿ ಆದ್ದರಿಂದ ಸ್ವಾತಂತ್ರ್ಯವನ್ನು ಒಟ್ಟಿಗೆ ನಿಮಗೆ ಕೊಡಲಿಕ್ಕೆ ಆಗುವುದಿಲ್ಲ ಎಂದು ಅಂದಾಗ want my government but not the good government ಎಂದು ಹೇಳಿದರು. ಒಂದು ವೇಳೆ ತಪ್ಪುಗಳು ಆಗಿರಬಹುದು.

ಸಭಾಧ್ಯಕ್ಷರು :- ಅದಕ್ಕೆ ಅವರಿಗೆ ಪೂರ್ಣ ಅಂದಾಜು ಇದ್ದಹಾಗೆ ಇಲ್ಲ, ನಮ್ಮ

ಸಿಸ್ಟಂನಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಗ್ರಾಮ ಸಭೆ ಮೂಲ ಆಧಾರ. ಗ್ರಾಮ ಸಭೆಯಲ್ಲಿ ಪಾರ್ಟಿ ಇಲ್ಲ, ಆ ಊರಿನಲ್ಲಿ ಜೀವಂತ ಇರುವ ಜನರೆಲ್ಲಾ ಬರುತ್ತಾರೆ; ಎಲ್ಲಾ 18 ವರ್ಷ ತುಂಬಿದ ಅಡಲ್ಟ್ಸ್ ಯಾರು ಇರುತ್ತಾರೆ ಆ ಊರಿನ ಎಲ್ಲಾ ಜನ ಸೇರಿ ಚೂಸ್ ಮಾಡುತ್ತಾರೆ. ಐ.ಆರ್.ಡಿ.ಪಿ.ಗೆ, ಸೈಟಿಗೆ ಆಗಲೀ, ನಮ್ಮ ಲಾಸ್ಟ್ ಸ್ಟೇಜಿನಲ್ಲಿ the most powerful body is Gram Sabha. ಆದರಿಂದ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ :- ಗ್ರಾಮ ಸಭೆಗಳಿಗೂ ಕೊಡಬೇಕು ಮತ್ತು ಅಧಿಕಾರ ವಿಕೇಂದ್ರಿಕರಣದ ಬಗ್ಗೆ ನಾವು ವಿಶ್ವಾಸ ಇಟ್ಟುಕೊಳ್ಳಬೇಕು.

SRI M.Y.GHORPADE :- I entirely agree with the Hon. Minister. But, I want my Government and good Government also. It is not right to assume that a distant Government is a good Government. The people will have to learn by making mistakes. This democratic process of learning will have to go on; the assumption that justice will have to be done from distance is not true.

ಈ ರೈಸ್ ಸಬ್ಸಿಡಿ ಬಗ್ಗೆ ನಾನು ಹೇಳುತ್ತಿದ್ದೆ. ಇದರ ಬಗ್ಗೆ ವೈಯಕ್ತಿಕವಾದಂಥ ಕಾರಣ ಇದೆ ಎಂದು. ನಾನು ಅದರ ಪರವಾಗಿ ಇರಲಿ, ಏಕೆಂದರೆ ನಮ್ಮ ಸೆಂಡೂರ್ ಕಂಪನಿಯಲ್ಲಿ ಈ ಎಸೆನ್‌ಷಿಯಲ್ ಕಮಾಡಿಟಿಸ್ ಅನ್ನು ನಾವು ಕಾರ್ಮಿಕರಿಗೆ ಕೊಡುತ್ತೇವೆ, ನೂರು ರೂಪಾಯಿ ಖರ್ಚು ಮಾಡಿ ಒಂದು ಕಾರ್ಡ್ ತೆಗೆದುಕೊಂಡರೆ ಏಳುನೂರು ರೂಪಾಯಿಗಳ ಎಸೆನ್‌ಷ್ಯಲ್ ಕಮಾಡಿಟಿಸನ್ನು ಪೂರಾ ಅವರಿಗೆ ಕೊಡುತ್ತಿದ್ದೇವೆ ಅಂದರೆ monthly subsidy of Rs.600 per card ವರ್ಷಕ್ಕೆ ಏಳು ಸಾವಿರ ರೂಪಾಯಿ ಆಗುತ್ತದೆ. ಇದು ಬಹಳ ಯಶಸ್ವಿಯಾಗಿ ನಮ್ಮ ಕಂಪನಿಯಲ್ಲಿ ನಡೆದಿದೆ. ಇದರ ಉಪಯೋಗ ಏನು ಎಂಬುದು ನನಗೆ ಚೆನ್ನಾಗಿ ಗೊತ್ತಿದೆ. ಇದೇ ನಾನು ಡಿ.ಎ.ರೂಪದಲ್ಲಿ ಕೊಟ್ಟಿದ್ದರೆ ಅದು ಆಹಾರಕ್ಕಾಗಿ ಹೋಗುತ್ತಾ ಇರಲಿಲ್ಲ, ಸರಾಯಿ ಅಂಗಡಿಗೆ ಹೋಗುತ್ತಿತ್ತು, ಬ್ರಾಂಡಿ ಶಾಪಿಗೆ ಹೋಗುತ್ತಿತ್ತು. ಇನ್ನಾವುದಕ್ಕೋ ಹೋಗುತ್ತಿತ್ತು. ಹೆಣ್ಣು ಮಕ್ಕಳು ಮತ್ತು ಮಕ್ಕಳು ಈ ರೀತಿ ಸಬ್ಸಿಡೈಸ್ಡ್ ತೆಗೆದುಕೊಳ್ಳುವುದನ್ನು ಬಹಳಷ್ಟು ಸ್ವಾಗತ ಮಾಡುತ್ತೇನೆ. ನೀವು 10 ಕೆ.ಜಿ.ರೈಸನ್ನು 3.20 ಪೈಸೆ ಪ್ರಕಾರ ಕೊಡುತ್ತೇವೆಂದು ಬಜೆಟ್ ಭಾಷಣದಲ್ಲಿ ಹೇಳಿದ್ದೀರಿ, ಅಂದರೆ 6.50 ಪೈಸ್ ಮಾರ್ಕೆಟ್ ವ್ಯಾಲ್ಯು ಇದ್ದುದನ್ನು 3 ರೂಪಾಯಿ 20 ಪೈಸೆಗೆ ಕೊಟ್ಟರೆ, 3 ರೂಪಾಯಿ 30 ಪೈಸೆ ಒಂದು ಕೆ.ಜಿ.ಗೆ ನೀವು ಸಬ್ಸಿಡೈಸ್ಡ್

ಮಾಡಿದಂತಾಗುತ್ತದೆ. ಅಂದರೆ ಒಂದು ಕಾರ್ಡಿಗೆ, ತಿಂಗಳಿಗೆ 33 ರೂಪಾಯಿ ಸಬ್ಸಿಡಿ ಇದೆ. ಅಂದರೆ ವರ್ಷಕ್ಕೆ ಒಂದು ಕಾರ್ಡಿಗೆ ನಾಲ್ಕು ನೂರು ರೂಪಾಯಿ ಸಬ್ಸಿಡಿ ಇದೆ. ಈಗ ಇನ್ನೂರು ಕೋಟಿ ರೂಪಾಯಿಗಳನ್ನು ನೀವು ಇದಕ್ಕಾಗಿ ತೆಗೆದು ಇಟ್ಟಿದ್ದೀರಿ. ಅಂದರೆ ವರ್ಷಕ್ಕೆ ನಾಲ್ಕು ನೂರು ರೂಪಾಯಿ ಒಂದು ಕಾರ್ಡಿಗೆ ಆಗುವುದಾದರೆ ಇನ್ನೂರು ಕೋಟಿ ರೂಪಾಯಿಯಿಂದ 55 ಲಕ್ಷ ಕಾರ್ಡುಗಳನ್ನು ನಾವು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಅಂದರೆ ಬಡತನದ ರೇಖೆಯ ಕೆಳಗಡೆ ಏನು ನಮ್ಮ ಜನಸಂಖ್ಯೆ ಇದೆ ಅದಕ್ಕೂ ಒಂದು ಸ್ವಲ್ಪ ಜಾಸ್ತಿ ಇದೆ. ನಾನು ಟೀಕೆ ಮಾಡುತ್ತಿರುವುದು ತಪ್ಪೇನಿಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ.....

ಶ್ರೀ ಸಿದ್ಧರಾಮಯ್ಯ :- 52 ಲಕ್ಷ ಕಾರ್ಡುಗಳು ಇದ್ದಾವೆ.

ಶ್ರೀ ಎಂ.ವೈ.ಘೋರ್ಪಡೆ:- ಸರಿ ಬಿಡಿ. ಇದು ನನ್ನ ಲೆಕ್ಕದಲ್ಲಿ ಮತ್ತು ನಿಮ್ಮ ಬಜೆಟ್ ಭಾಷಣದಲ್ಲಿ ಇಲ್ಲ, ನಿಮ್ಮ ಇನ್ನೂರು ಕೋಟಿ ಫಿಗರ್ ಮೇಲೆ ನಾನು ರಿಲೈ ಮಾಡಿರತಕ್ಕಂಥದ್ದು. ನಾನು ಇಷ್ಟಾದರೂ ಮಾಡಿದೆನಲ್ಲಾ, ಈ ವಿಷಯವನ್ನು ನೀವೇನೂ ಹೇಳಲಿಲ್ಲ, ಅಥವಾ ಟಾರ್ಗೆಟ್ ಮಾಡುವಾಗ ಈ ಕಾರ್ಡನ್ನು ಯಾರು ಬಡವರಿದ್ದಾರೆ ಅವರನ್ನು ಗುರುತಿಸಿ ಎಲ್ಲಾ ಬಡ ಜನರಿಗೆ ಈ ಕಾರ್ಡನ್ನು ಕೊಡಿಸುವುದು ಬಹಳ ಮುಖ್ಯ. ನಾನು ಹೇಳಿದೆ ಇದರ ಬಗ್ಗೆಯೂ ಕೂಡ ಒಂದು ರಾಷ್ಟ್ರೀಯ ನೀತಿ ಆಗಬೇಕಾದ್ದು ಅತಿ ಮುಖ್ಯ. ಇದಕ್ಕೆ ಮೂರು ಕಾರಣ ಇದೆ. ಇದರ ಭಾರ ಸಂಪೂರ್ಣವಾಗಿ ರಾಜ್ಯ ಸರ್ಕಾರದ ಮೇಲೆ ಮಾತ್ರ ಬೀಳುತ್ತದೆ. ಏಕೆ ಬೀಳಬೇಕು? ಆದ ಕಾರಣ ನಾನು ಹೇಳುತ್ತಿರುವುದು. ಇದರ ಬಗ್ಗೆ ಒಂದು ಡೈಲಾಗ್ ನಡೆಸಿ ಈ ಭಾರ ಸಂಪೂರ್ಣವಾಗಿ ರಾಜ್ಯ ಸರ್ಕಾರದ ಮೇಲೆ ಬೀಳುವ ಅವಶ್ಯಕತೆ ಇರಬಾರದು, ಕೇಂದ್ರ ಸರ್ಕಾರದವರೂ ಈ ಭಾರ ತೆಗೆದುಕೊಳ್ಳಬೇಕಾಗುತ್ತದೆ. ಈಗ ಪ್ರಧಾನ ಮಂತ್ರಿಯವರು ಕೂಡ ಇದರ ಬಗ್ಗೆ ಇಂತಹದೇ ಒಂದು ಸಬ್ಸಿಡಿ ಸ್ಕೀಂನ್ನು ಮಾಡುವ ಯೋಚನೆಯಲ್ಲಿದ್ದೇವೆ ಎಂದು ಹೇಳಿದ್ದಾರೆ. ಅವರ ಹತ್ತಿರ ನೀವು ಮಾತನಾಡಿ ಈ ಭಾರ ಅವರ ಮೇಲೆ ಕೂಡ ಬೀಳುವ ರೀತಿಯಲ್ಲಿ ನೀವು ಪ್ರಯತ್ನಿಸಬೇಕು. ಎರಡನೆಯದು, ಈ ಪೊಲಿಟಿಕಲ್ ಕಾಂಪಿಟೇಷನ್ ಅಂದರೆ ರಾಷ್ಟ್ರೀಯ ಸ್ಪರ್ಧೆ ಅವಾಯ್ಡ್ ಮಾಡಬೇಕು. ಯಾರು ಸಬ್ಸಿಡಿ ಜಾಸ್ತಿ ಇದೆ ಅಂಥ ಹೇಳಿ. ಇದು ಸ್ಪರ್ಧೆಯ ವಿಷಯ ಅಲ್ಲ. ಎಷ್ಟು ಅವಶ್ಯಕತೆ ಇದೆ ಅಷ್ಟು ಮಾಡಬೇಕು, ಯಾರು ಜಾಸ್ತಿ ಮಾಡಿದ್ದಾರೆ ಈ ರೀತಿಯ ರಾಜಕೀಯ ಸ್ಪರ್ಧೆ ಒಳ್ಳೆಯದಲ್ಲ. ಇದರಿಂದ ಒಂದು ನ್ಯಾಷನಲ್ ಪಾಲಿಸಿಯನ್ನು ಮಾಡಲಿಕ್ಕೆ ಇರತಕ್ಕ ಅವಕಾಶವನ್ನು ತಪ್ಪಿಸಿದಂತಾಗುತ್ತದೆ. ಮೂರನೆಯದು ಈ ವಿಚಾರ ಎಲ್ಲಾ ರಾಜ್ಯಕ್ಕೂ ಮುಟ್ಟಬೇಕು. ಬರೀ ಕರ್ನಾಟಕ, ಆಂಧ್ರದ ಕಡೆ ಸ್ವಲ್ಪ ಹಣ ಇದೆ ಎಂದು ಹೇಳಿ ಅವರು ಮಾಡಿ ಈ ದೇಶದ ಹಲವಾರು ರಾಜ್ಯಗಳಲ್ಲಿ ಇದನ್ನು ಮಾಡದೇ ಹೋದರೆ ಏನು ಪ್ರಯೋಜನವಾಗುವುದಿಲ್ಲ. ಸಾಕಷ್ಟು ಹಣ ಇಲ್ಲದವರು ಏನು ಮಾಡಬೇಕು? ಈ

ಮೂರು ಕಾರಣಕ್ಕಾಗಿ ಈ ವಿಚಾರಕ್ಕೆ ಒಂದು ರಾಷ್ಟ್ರೀಯ ಸ್ವರೂಪ ಕೊಡುವುದು ಅತ್ಯಾವಶ್ಯಕ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನನಗೆ ಕೇಳುವುದಾದರೆ there is a ratio of hardship in our country. Ratio of hardship ಅಂದರೆ, ನಮಗೆ ದಿನ ಎಷ್ಟು ಕೂಲಿ ಬರುತ್ತದೆ ಮತ್ತು ಒಂದು ಕೆ.ಜಿ. ಕಾಳು ಕೊಂಡುಕೊಳ್ಳಬೇಕಾದರೆ ಅದಕ್ಕೆ ಎಷ್ಟು ಖರ್ಚಾಗುತ್ತದೆ. This is the ratio of hardship. ಕರ್ನಾಟಕದಲ್ಲಿ 72 ರಲ್ಲಿ ಬರ ಬಂದಾಗ ನಾನು ಗುಲ್ಬರ್ಗಾ ಆ ಕಡೆಯೆಲ್ಲಾ ಹೋಗಿದೆ. ಅವಾಗ ಕೂಲಿ 2 ರೂಪಾಯಿ 50 ಪೈಸೆ ಇತ್ತು ಅಧ್ಯಕ್ಷರೇ, ಗಂಡು ಮಕ್ಕಳಿಗೆ ಕೂಲಿ 2 ರೂಪಾಯಿ 50 ಪೈಸೆ ಸಿಗುತ್ತಾ ಇರಲಿಲ್ಲ. ಆ ಕಾಲಕ್ಕೆ 2 ರೂಪಾಯಿ 50 ಪೈಸೆ ಕೊಟ್ಟರೆ ಒಂದು ಕೆ.ಜಿ. ಜವಾರ್ ಸಿಗುತ್ತಾ ಇರಲಿಲ್ಲ, ಸಿಗುತ್ತಾ ಇತ್ತು ಎಂದು ಇಟ್ಟುಕೊಂಡರೂ ಕೂಡ ಈ ಹಾರ್ಡ್‌ಶಿಪ್ ರೇಷಿಯೋ ಏನಾಯಿತು 1: 1 ಅಂದರೆ ಒಂದು ದಿನಕ್ಕೆ ಎಷ್ಟು ಕೂಲಿ ಬರುತ್ತದೆ ಅದನ್ನೆಲ್ಲಾ ಒಂದು ಕೆ.ಜಿ. ಜೋಳ ಕೊಂಡುಕೊಳ್ಳುವುದಕ್ಕೆ ಉಪಯೋಗಿಸಬೇಕು ಎಂದಾದರೆ ಏನು ಅನುಕೂಲವಾಗುತ್ತದೆ? 1: 1 ರೇಷಿಯೋ ಅಂದರೆ ಬಹಳ ಹಾರ್ಡ್‌ಶಿಪ್. ಆ ಕಾಲವನ್ನು ನಾವು ನೋಡಿದ್ದೇವೆ. ಈ ಪರಿಸ್ಥಿತಿ ಏನು ಇದೆ? ಈಗ ಜವಾರ್ ಆರು ರೂಪಾಯಿ ಎಂದು ನಾವು ಇಟ್ಟುಕೊಂಡರೆ, ಮಿನಿಮಂ ವೇಜಸ್ 35 ರೂ. ಎಂದು ಇಟ್ಟುಕೊಂಡರೆ, 1:6 ಆಗುತ್ತದೆ. ಅಂದರೆ ಜವಾರ್‌ಗೆ ಆರು ರೂಪಾಯಿ ಆದರೂ ಸಹ ಆರು ಪಟ್ಟು ಮಿನಿಮಂ ವೇಜಸ್ ಇವತ್ತು ನಾವು ನಿಗದಿ ಮಾಡಿದ್ದೇವೆ. ಕಾಂಗ್ರೆಸ್ ಮ್ಯಾನಿಫೆಸ್ಟೋದಲ್ಲಿ ಅದು 40 ರೂಪಾಯಿ ಮಿನಿಮಂ ಆಗಬೇಕು ಎಂದು ನಾವು ಹೇಳಿದ್ದೇವೆ. ಆದರೆ, ಅರ್ಥಶಾಸ್ತ್ರಜ್ಞನಾಗಿ ನಾನು ಮಾತನಾಡಬೇಕಾದರೆ ಇದರಲ್ಲಿ ರೇಷಿಯೋ ಏನು ಇದೆ ಎಂಬುದನ್ನು ನಾವು ನೋಡಬೇಕು. ರಾಷ್ಟ್ರಮಟ್ಟದಲ್ಲಿ ಈ ರೇಷಿಯೋ ಇಷ್ಟು ಇರಬೇಕು ಎಂಬುದನ್ನು ನೋಡಬೇಕು ಮತ್ತು ಈ ರೇಷಿಯೋವನ್ನು ಕಾಪಾಡುವಂಥ ಪ್ರಯತ್ನ ಇಡೀ ರಾಷ್ಟ್ರದಲ್ಲಿ ನಡೆಯಲಿ. ಆ ರೀತಿ ಆದರೆ ಮಾತ್ರ ಈ ಇನ್‌ಫ್ಲೇಷನ್ ನಿಂದ ಕಾಪಾಡಿದಂತೆ ಆಗುತ್ತದೆ. ಈ ರೇಷಿಯೋ 1:6 ಏನಿದೆ, ಇದನ್ನು ಕಾಪಾಡುವ ಬಗ್ಗೆ ನಾನು ನಿಮಗೆ ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನೀವು ಅಕ್ಕಿಯನ್ನು ಸಬ್ಸಿಡೈಸ್ಡ್ ಮಾಡಿ ಹಂಚುತ್ತಿದ್ದೀರಿ. ನಮ್ಮ ಕರ್ನಾಟಕದಲ್ಲಿ ಜೋಳ ಮತ್ತು ರಾಗಿ ತಿನ್ನುವಂಥ ಬಡ ಜನ ಇದ್ದಾರೆ. ನೀವು ಅದಕ್ಕೂ ಮಿನಿಮಂ ಸಪೋರ್ಟ್ ಪಾಲಿಸಿ ತರಹ ಮಾಡಿ ಅದನ್ನು ಕೂಡ ನೀವು ನ್ಯಾಯವಾದಂಥ ಬೆಲೆಗೆ ಹಂಚುವಂಥ ಪ್ರಯತ್ನ ಏಕೆ ಮಾಡಬಾರದು? ಬಡ ಜನ ಅಂದರೆ ಜೋಳ ತಿನ್ನುವಂಥ ಜನ. ಇದೇ ತತ್ವ ಏನಿದೆ, ಅಕ್ಕಿಗೆ ಏನು ಅನ್ವಯಿಸುತ್ತದೆ, ಗೋಧಿಗೆ ಏನು ಅನ್ವಯಿಸುತ್ತದೆ, ರೈತರಿಗೆ ಮಿನಿಮಂ ಸಪೋರ್ಟ್ ಪ್ರೈಸ್ ಕೊಟ್ಟು ಗ್ರಾಹಕರಿಗೆ, ವೀಕರ್ಸ್ ಸೆಕ್ಷನ್ಸ್‌ಗೆ ನ್ಯಾಯವಾದಂಥ ಬೆಲೆಗೆ ಮಾರುವುದು, ಸಬ್ಸಿಡಿ ಕೊಡಬೇಕಾದರೂ ಕೊಡಬೇಕು, ಈ ವಿಚಾರ ಏನು ಇದೆ, ಅದು ಜೋಳಕ್ಕೆ, ರಾಗಿಗೆ ಏಕೆ ಅನ್ವಯಿಸುವುದಿಲ್ಲ? ಇದು ಕರ್ನಾಟಕದ ಪ್ರಶ್ನೆ. ಬೇರೆ ಕಡೆ ರಾಗಿ

ಇಲ್ಲ, ಜೋಳ ಇಲ್ಲ, ಆದ ಕಾರಣ ಇದೇ ವಿಚಾರವನ್ನು ನೀವು ಪ್ರಯೋಗವಾಗಿಯಾದರೂ ಇದನ್ನು ಮಾಡುವ ಪ್ರಯತ್ನ ಮಾಡಬೇಕು ಮತ್ತೆ ಇದನ್ನು ಕೆಲಸಕ್ಕಾಗಿ ಉಪಯೋಗಿಸಬೇಕು. ಫುಡ್ ಫಾರ್ ವರ್ಕ್. ನಾವು ಎಷ್ಟೋ ಕಡೆ ಕೆರೆಗಳನ್ನು ಮಾಡಿಸುವಾಗ, ರಸ್ತೆಗಳನ್ನು ಮಾಡಿಸುವಾಗ, ಜನ ಕಾಳು ಕೇಳುತ್ತಾರೆ. ನ್ಯಾಯವಾದ ಬೆಲೆಗೆ ಕಾಳು ಕೊಟ್ಟರೆ ಅದು ಅವರಿಗೆ ದೊಡ್ಡ ಸಮಾಧಾನ. ಹಣ ಕೊಟ್ಟರೆ ಸಮಾಧಾನ ಇಲ್ಲ. ಅದ್ದರಿಂದ ಈ ಫುಡ್ ಫಾರ್ ವರ್ಕ್ ವಿಚಾರ ಏನಿದೆ ಮತ್ತು ರಾಗಿ, ಜೋಳ, ಕೊಂಡುಕೊಂಡು ಹಂಚುವಂಥ ವಿಚಾರ; ಇದರ ಬಗ್ಗೆ ನೀವು ಆಳವಾಗಿ ಚಿಂತನೆ ಮಾಡಬೇಕು. ಆಗಲೇ ನೀವು ಕರ್ನಾಟಕಕ್ಕೆ ಸರಿಹೋಗುವಂಥ ಒಂದು ಕಾರ್ಯಕ್ರಮ ಮಾಡಿದಂತಾಗುತ್ತದೆ.

ಇನ್ನು ಕೊನೆಯದಾಗಿ ಹೇಳುವುದಾದರೆ ಬಡತನ ನಿರ್ಮೂಲನ ಮಾಡತಕ್ಕದ್ದು ಕೇವಲ ಈ ಕಾರ್ಯಕ್ರಮಗಳಿಂದಲ್ಲ. ಇದರಿಂದ ಸ್ವಲ್ಪ ಮಟ್ಟಿಗೆ ಉಪಯೋಗವಾಗಬಹುದು. ಆದರೆ ಬಡತನವನ್ನು ನಿರ್ಮೂಲನ ಮಾಡಬೇಕಾದರೆ ಹಳ್ಳಿಯಲ್ಲಿರತಕ್ಕ ಜನರಿಗೆ ಸಾಕಷ್ಟು ಕೆಲಸವನ್ನು ಕೊಡತಕ್ಕ ಕೆಲಸವನ್ನು ನಾವು ಮಾಡಬೇಕು. Maximise employment at the District and Taluk level.

ಎಂದು ನಾನು ಪದೇ ಪದೇ ಹೇಳುತ್ತಿದ್ದೇನೆ. ಅಂದರೆ ಸ್ವಯಂ ಉದ್ಯೋಗ ಮತ್ತು ಸಣ್ಣ ಉದ್ಯೋಗ. ಇವತ್ತು ವ್ಯವಸಾಯ, ಸಣ್ಣ ಉದ್ಯೋಗ ಮತ್ತು ಸ್ವಯಂ ಉದ್ಯೋಗ ಏನಿದೆ ಆದರ ಬಗ್ಗೆ ನಾವು ಭಾಷಣ ಮಾಡುತ್ತೇವೆ. ಕೇಂದ್ರ ಸರ್ಕಾರವೂ ಅಷ್ಟೆ, ರಾಜ್ಯ ಸರ್ಕಾರವೂ ಅಷ್ಟೆ. ಇದರಿಂದ ಬಡತನ ನಿರ್ಮೂಲನವಾಗುವುದಿಲ್ಲ. ನಾವು ಡಿಸ್ಟ್ರಿಕ್ಟ್ ಪ್ಲಾನಿಂದ ಕಮಿಷನ್‌ನ್ನು ನೇಮಕ ಮಾಡುತ್ತೇವೆ. ಅವರಿಗೆ ನಾವು ಸಾಕಷ್ಟು ಸಹಾಯ ಮಾಡಿದರೆ ಆ ಡಿಸ್ಟ್ರಿಕ್ಟ್‌ನಲ್ಲಿ ಯಾವ ಯಾವ ಕೆಲಸಕ್ಕೆ ಎಷ್ಟೆಷ್ಟು ಜನಗು ಹೋಗುತ್ತಿದ್ದಾರೆ, ಎಷ್ಟು ಕುಟುಂಬಗಳಲ್ಲಿ ಒಬ್ಬರಿಗೂ ಕೆಲಸವಿಲ್ಲ ಎಂಬುದನ್ನು ತಕ್ಷಣ ನೀವು ನೋಡಿ ಎಲ್ಲಿ ಕೆಲಸಗಳು ಅಭಾವವಿದೆ ಅಲ್ಲಿ ಯಾವುದಾದರೂ ಒಂದು ಕೆಲಸವನ್ನು ಕೊಡಿಸತಕ್ಕಎಂಪ್ಲಾಯ್‌ಮೆಂಟ್ ಜನರೇಷನ್ ಪ್ಲಾನನ್ನು ಮಾಡಬೇಕು. ಇದು ಇಡೀ ದೇಶಕ್ಕೆ ಅನ್ವಯಿಸುತ್ತದೆ. ಇದು ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ. ನಾವು ಲಿಬರಲೈಸೇಷನ್ ಮಾಡುತ್ತಿದ್ದೇವೆ. ದೊಡ್ಡ ದೊಡ್ಡ ಕೈಗಾರಿಕೆಗಳು ಪ್ರಾಂಭವಾಗುತ್ತಿವೆ. ಇದರಿಂದ ಶ್ರೀಮಂತರಿಗೆ ಮತ್ತು ಬಡವರಿಗೆ ಇರತಕ್ಕ ವ್ಯತ್ಯಾಸ ಜಾಸ್ತಿ ಆಗಬಾರದು. ಕೆಲಸವಿಲ್ಲದೆ ಜನ ನಿರುದ್ಯೋಗಿಗಳಾಗಬಾರದೆಂದು ಹೇಳುವುದಾದರೆ ನನ್ನ ದೃಷ್ಟಿಯಲ್ಲಿ ಏಕೈಕ ಮಾರ್ಗ, i.e., Nationalise Employment at the District and Taluk levels, ಬರೇ ಬಾಯಿ ಮಾತಿನಿಂದ ಹೇಳಿದರೆ ಆಗುವುದಿಲ್ಲ, ಅಥವಾ ಕೇವಲ ಹಣವನ್ನು ಕೊಟ್ಟರೂ ಆಗುವುದಿಲ್ಲ. ಇದರ ಬಗ್ಗೆ ಒಂದು ರಾಜಕೀಯ ಇಚ್ಛಾಶಕ್ತಿ

ಇರಬೇಕು. ಇದು ಸ್ವಂತಕ್ಕಾಗಿ ದುಡಿಯತಕ್ಕದ್ದಲ್ಲ. ಸಂಘಸಂಸ್ಥೆಗಳನ್ನು ಕಟ್ಟಿ ದುಡಿಯಬೇಕೆಂಬ ಜನರು ನಮ್ಮ ದೇಶದಲ್ಲಿ ಎಷ್ಟು ಜನರಿದ್ದಾರೆ? ಇಂಥ ಒಂದು ಮೂವ್‌ಮೆಂಟನ್ನು ನಾವು ಮಾಡಬೇಕಾಗುತ್ತದೆ. ತಮಗೆ ಒಂದು ಉದಾಹರಣೆಯನ್ನು ಕೊಡಬೇಕಾದರೆ ಇವತ್ತು ನಮ್ಮ ಸಂಡೂರಿನಲ್ಲಿ 200 ಜನ ಲಂಬಾಣಿ ಹೆಣ್ಣು ಮಕ್ಕಳು ತಯಾರು ಮಾಡಿದಂಥ ವಸ್ತುಗಳನ್ನು ನಾವು ಇವತ್ತು ಹೊರ ದೇಶಗಳಿಗೆ ಕಳುಹಿಸುತ್ತಿದ್ದೇವೆ. ಹೊರ ದೇಶದಿಂದ ಬೇಡಿಕೆ ಏನು ಬರುತ್ತಿದೆ, ಅಷ್ಟು ವಸ್ತುಗಳನ್ನು ನಾವು ತಯಾರು ಮಾಡುವುದಕ್ಕೆ ಆಗುತ್ತಿಲ್ಲ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು)

ಆದ್ದರಿಂದ ನಾವು ಈ ಹೆಣ್ಣು ಮಕ್ಕಳಿಗೆ ಸರಿಯಾಗಿ ಮಾರ್ಗದರ್ಶನವನ್ನು ಕೊಟ್ಟರೆ, ಮಾರ್ಕೆಟ್‌ನಲ್ಲಿ ಖರ್ಚಾಗುವಂಥ ಯಾವ ಯಾವ ವಸ್ತುಗಳನ್ನು ತಯಾರು ಮಾಡಬೇಕೆಂದು ಹೇಳಿದರೆ, ಸಂಘ ಸಂಸ್ಥೆಗಳನ್ನು ಕಟ್ಟಿ ಮಾರ್ಕೆಟಿಂಗನ್ನು ಮಾಡುವುದಾದರೆ, ಈ ಜನರು ಪ್ರತಿ ದಿನ 4050 ರೂ.ಗಳ ಸಂಪಾದನೆ ಮಾಡುವುದಕ್ಕೆ ಸಾಧ್ಯತೆ ಇದೆ. ಆದರೆ ಈ ಪ್ರಯತ್ನ ಆಗಬೇಕು. ಈ ಕೆಲಸವನ್ನು ರಾಜಕೀಯ ಸಂಸ್ಥೆಗಳು ಮಾಡುತ್ತಿಲ್ಲ, ಬೇರೆ ಸಂಸ್ಥೆಗಳೂ ಕೂಡ ಇದನ್ನು ಮಾಡುತ್ತಿಲ್ಲ. ಕೇವಲ ಅಧಿಕಾರಿಗಳ ಮತ್ತು ಹಣದ ರಾಜಕೀಯವನ್ನು ನಾವು ನೋಡುತ್ತಿದ್ದೇವೆ. ಸೇವಾಮಯವಾದ ರಾಜಕೀಯ ಆಗಬೇಕು. ಜನರನ್ನು ಸಂಘಟಿಸಿ ಅವರ ಆದಾಯವನ್ನು ಹೆಚ್ಚು ಮಾಡತಕ್ಕ ಕೆಲಸವನ್ನು ನಮ್ಮಲ್ಲಿ ಎಷ್ಟು ಜನರು ಮಾಡುತ್ತಿದ್ದೇವೆ? ಇವತ್ತು ಮಾನ್ಯ ಮನಮೋಹನ ಸಿಂಗ್‌ರವರು ಹೇಳುತ್ತಿದ್ದಾರೆ, ನಮ್ಮ ದೇಶದಲ್ಲಿ ಪ್ರತಿ ವರ್ಷ 1.10 ಕೋಟಿ ಜಾಬ್ಸ್ ಜಾಸ್ತಿಯಾಗಬೇಕು ಎಂದು. ಹಿಂದೆ ವರ್ಷಕ್ಕೆ 30 ಲಕ್ಷ ಮಾತ್ರ ಜಾಬ್ಸ್ ಜಾಸ್ತಿಯಾಗುತ್ತಿತ್ತು. ಈಗ 65 ಲಕ್ಷ ಜಾಬ್ಸ್ ಜಾಸ್ತಿಯಾಗುತ್ತಿದೆ ಎಂಬ ಮಾತನ್ನು ಹೇಳುತ್ತಿದ್ದಾರೆ. ಇದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಇಷ್ಟ ಮಾತ್ರ ಹೇಳುತ್ತೇನೆ. ನಮ್ಮ ದೇಶದಲ್ಲಿ ಏನು ಜನಸಂಖ್ಯೆ ಇದೆ ಅದರಲ್ಲಿ ಹತ್ತನೇ ಒಂದು ಭಾಗ ಮಾತ್ರ ಆರ್ಗನೈಸ್ಡ್ ಸೆಕ್ಟಾರ್‌ನಲ್ಲಿ ಸಂಬಳಕ್ಕಾಗಿ ದುಡಿಯುತ್ತಿದ್ದಾರೆ. ನೂರಕ್ಕೆ ತೊಂಭತ್ತು ಜನರು ಹಳ್ಳಿಗಳಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಸ್ವಯಂ ಉದ್ಯೋಗ ನಮಗೆ ಗೊತ್ತಾಗುವುದಿಲ್ಲ. ಅನ್ ಆರ್ಗನೈಸ್ಡ್ ಸೆಕ್ಟಾರ್ ಅಂದರೆ 90 ಪರ್ಸೆಂಟ್ ಜನ ಯಾರಿದ್ದಾರೆ ಅವರ ಬಗ್ಗೆ ನಾವು ಸಂಪೂರ್ಣವಾದಂಥ ರಾಜಕೀಯವಾಗಿ, ಸಾಮಾಜಿಕವಾಗಿ ಸರ್ವ ಶಕ್ತಿಯನ್ನೂ ನಾವು ಉಪಯೋಗಿಸಿ ಒಂದು ಮೂವ್‌ಮೆಂಟನ್ನು ಮಾಡಿದರೆ ಮಾತ್ರ ಹಳ್ಳಿಯಲ್ಲಿರತಕ್ಕ ಜನರಿಗೆ ನಾವು ಕೆಲಸವನ್ನು ಕೊಡಿಸಲು ಸಾಧ್ಯ. ನಮ್ಮ ದೇಶದಲ್ಲಿ ಇವತ್ತು ಇಂಡಸ್ಟ್ರೀಯಲೈಸೇಷನ್ ಕೂಡ ಮುಂದುವರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನೂರಕ್ಕೆ 20 ಜನರಿಗೆ ಮಾತ್ರ ಏನು ಪರ್ಚೇಸಿಂಗ್ ಪವರ್ ಇದೆ ಅವರ ಸುತ್ತಲೇ ಈ ಇಂಡಸ್ಟ್ರೀಯಲೈಸೇಷನ್ ವ್ಯವಸ್ಥೆ, ಆರ್ಥಿಕ

ವ್ಯವಸ್ಥೆ ಸೀಮಿತವಾಗಿರುತ್ತದೆ. ಹೊಸ ಆರ್ಥಿಕ ವ್ಯವಸ್ಥೆ ಹಳ್ಳಿಗಳಿಗೆ ಮುಟ್ಟಬೇಕಾದರೆ ಎಷ್ಟು ಮಟ್ಟಿಗೆ ಅವರಿಗೆ ಪರ್ಚೇಸಿಂಗ್ ಪವರನ್ನು ಕೊಡುತ್ತೇವೆ ಅಷ್ಟು ಮಟ್ಟಿಗೆ ನಾವು ಮಾಡುವುದಕ್ಕೆ ಸಾಧ್ಯ.

ಇನ್ನು ಕೊನೆಯದಾಗಿ ಹೇಳುವುದಾದರೆ, ಈಗ ಬಿಸಿಲು ಕಾಲ ಹತ್ತಿರ ಬರುತ್ತಿದೆ. ಎಂಪ್ಲಾಯ್‌ಮೆಂಟ್ ಅಷ್ಯೂರೆನ್ಸ್ ಸ್ಕೀಂ ಬಗ್ಗೆ ಕೇಂದ್ರ ಸರ್ಕಾರದವರು ನಮಗೆ ಹೇಳುತ್ತಾರೆ, ಹಳ್ಳಿಗಳಲ್ಲಿ ಕೆಲಸಗಳ ಅಭಾವ ಇದ್ದರೆ, ಹತ್ತು ಜನರು ಪಂಚಾಯಿತಿಗೆ ಬಂದು ನಮಗೆ ಕೆಲಸ ಬೇಕೆಂದು ಕೇಳಿದರೆ ನೀವು ಯಾವುದಾದರೂ ಒಂದು ಕೆಲಸವನ್ನು ಕೊಡಬೇಕು. ಅದಕ್ಕೆ ಬೇಕಾದ ಹಣವನ್ನು ನಾವು ಕೊಡುತ್ತೇವೆಂದು ಕೇಂದ್ರ ಸರ್ಕಾರದವರು ಹೇಳುತ್ತಿದ್ದಾರೆ. ಆದರೆ ಇವತ್ತು ಎಂಪ್ಲಾಯ್‌ಮೆಂಟ್ ಅಷ್ಯೂರೆನ್ಸ್ ಸ್ಕೀಂ ಬಗ್ಗೆ ಎಷ್ಟು ಜನರಿಗೆ ಮಾಹಿತಿ ಇದೆ? ಇವತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇದರ ಬಗ್ಗೆ ಸಾಕಷ್ಟು ತಿಳುವಳಿಕೆಯನ್ನು ಕೊಡಬೇಕು. ಈಗ ಬಿಸಿಲು ಕಾಲವಾಗಿರುವುದರಿಂದ ಹಳ್ಳಿಯ ಜನರಿಗೆ ರಸ್ತೆ ಕೆಲಸ, ಒಡ್ಡು ಹಾಕುವ ಕೆಲಸ ಇನ್ನೂ ಮುಂತಾದ್ದನ್ನೆಲ್ಲಾ ನಾವು ಮಾಡಿಸಬೇಕು. 72ನೇ ಇಸವಿಯಲ್ಲಿ ಬರಗಾಲ ಬಂದಾಗ ನೀವು ಎಷ್ಟು ಜನರು ಕೆಲಸಕ್ಕೆ ಬರುತ್ತೀರೋ ಬನ್ನಿ ಎಂದು ನಾನು ಹೇಳಿದೆ. ಆದರೆ ಬಂದದ್ದಾರೂ ಎಷ್ಟು ಜನರು. ಭಾರಿ ಬಿಸಿಲು ಬಂದಾಗ ಕೇವಲ 11 ಲಕ್ಷ ಜನರು ಒಡ್ಡು ಹಾಕುವ ಕೆಲಸಕ್ಕೆ ಬಂದರು. ಅಷ್ಟು ಜನರಿಗೆ ನಾವು ಕೆಲಸ ಕೊಡಬೇಕಾಯಿತು. 11 ಲಕ್ಷ ಜನರು ಎಂದರೆ ಈ ಜನಸಂಖ್ಯೆಗೆ ಅಷ್ಟೇನೂ ದೊಡ್ಡದಿಲ್ಲ. ಅದ್ದರಿಂದ ಎಂಪ್ಲಾಯ್‌ಮೆಂಟ್ ಅಷ್ಯೂರೆನ್ಸ್ ಸ್ಕೀಂಅನ್ನು ವಿಶೇಷವಾಗಿ ನಡೆಸಬೇಕು. ಸ್ವಯಂ ಉದ್ಯೋಗ ಯೋಜನೆ ಏನಿದೆ ಇದಕ್ಕೆ ಮಾನ್ಯ ಬಂಗಾರಪ್ಪನವರು ವಿಶ್ವ ಯೋಜನೆ ಎಂಬ ಹೊಸ ಹೆಸರನ್ನು ಕೊಟ್ಟಿದ್ದಾರೆ. ಆದರೆ ಇದು ಹೊಸ ವಿಚಾರ ಏನೂ ಅಲ್ಲ. ಇದು ಹಳೆಯದು. ಪ್ಲಾನ್ ಡಾಕ್ಯುಮೆಂಟ್‌ನಲ್ಲಿ ಕೂಡ ಇದು ಇದೆ - ಡಿಸ್ಟ್ರಿಕ್ಟ್ ಮ್ಯಾನ್ ಪವರ್ ಪ್ಲಾನಿಂಗ್ ಆನ್ ಎಂಪ್ಲಾಯ್‌ಮೆಂಟ್ ಜನರೇಷನ್ ಎಂದು. ಇದನ್ನು ಬಹಳ ಆಸಕ್ತಿಯಿಂದ ಮಾಡಬೇಕೆಂದು ಬರೆದಿದ್ದಾರೆ. ಆದರೆ ಇದು ಹೊಸದೇನೂ ಅಲ್ಲ. ಇದು ಹಳೆಯ ವಿಚಾರ. ಆದರೆ ಇದು ಹಳೆಯ ವಿಚಾರವಾಗಿದ್ದರೂ ಕೂಡ ನಾವು ಅದಕ್ಕೆ ಸಾಕಷ್ಟು ಶಕ್ತಿಯನ್ನು ತುಂಬಿಲ್ಲ. ಈ ಒಂದು ಪ್ರಯತ್ನವನ್ನು ನಾವೆಲ್ಲರೂ ಮಾಡಬೇಕು. ಆಗಮಾತ್ರ ಕೇಂದ್ರ ಸರ್ಕಾರ ಏನು ಮಾಡುತ್ತಿದೆ ಅದರಿಂದ ಸಾಕಷ್ಟು ಫಾಯಿದೆಯನ್ನು ನಾವು ಪಡೆದುಕೊಳ್ಳುವುದಕ್ಕೆ ಸಾಧ್ಯ. ಇದರಿಂದ ಹಳ್ಳಿಗಳ ಹೊಸ ಆರ್ಥಿಕ ನೀತಿಯಲ್ಲಿ ಒಂದು ಪಾತ್ರವನ್ನು ಕೊಡಿಸುವುದಕ್ಕೆ ಸಾಧ್ಯವಾಗುತ್ತದೆ. ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟದ್ದಕ್ಕೆ ತಮಗೆ ಧನ್ಯವಾದಗಳು.

ಉಪಾಧ್ಯಕ್ಷರು :- ಮಾನ್ಯ ಸದಸ್ಯರಲ್ಲಿ ವಿಜ್ಞಾಪನೆ. ಇವತ್ತು ಈ ಚರ್ಚೆಯನ್ನು

ಮುಕ್ತಾಯ ಮಾಡಬೇಕಾಗಿರುವುದರಿಂದ ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಕಡಿಮೆ ಸಮಯದಲ್ಲಿ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಮಾನ್ಯ ಶ್ರೀರಾಮ ರೆಡ್ಡಿಯವರು ಮಾತನಾಡಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಈಗ ನಾನು ಮಾತನಾಡುವುದಿಲ್ಲ. ನಾಳೆ ಬೆಳಿಗ್ಗೆ ಮಾತನಾಡುತ್ತೇನೆಂದು ಹೇಳಿದ್ದೇನೆ. ನಾಳೆ ಮಾತನಾಡುವುದಕ್ಕೆ ಸಮಯ ಇದೆ.

ಉಪಾಧ್ಯಕ್ಷರು:- ಇಲ್ಲ, ಇವತ್ತೇ ಮಾತನಾಡಿ ಮುಗಿಸಬೇಕೆಂದಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ನಾವು ಮಾನ್ಯ ಸ್ಪೀಕರ್‌ರವರ ಜೊತೆಯಲ್ಲಿ ಮಾತನಾಡಿದ್ದೇವೆ. ನಾಳೆ ಸಂಜೆಯವರೆಗೆ ಚರ್ಚೆ ಮಾಡುವುದು, ನಾಡಿದ್ದು ಮುಂಜಾನೆ ಉತ್ತರ ಕೊಡಬೇಕು, ಮಧ್ಯಾಹ್ನದ ನಂತರ ಮೇಲ್ಮನೆಗೆ ಕಳುಹಿಸಬೇಕೆಂದು ನಾನೂ ಮಾನ್ಯ ವಾಟಾಳ್ ನಾಗರಾಜ್‌ರವರೂ ಎಲ್ಲರೂ ಸ್ಪೀಕರ್‌ರವರ ಹತ್ತಿರ ಮಾತನಾಡಿದ್ದೇವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ):- ಸನ್ಮಾನ್ಯ ಸಭಾಧ್ಯಕ್ಷರೇ, ಹಾಗೂ ಹತ್ತನೆಯ ಶಾಸನ ಸಭೆಯ ಮೊದಲನೇ ಆಯವ್ಯಯವನ್ನು ಮಂಡನೆ ಮಾಡತಕ್ಕ ಮಾನ್ಯ ಹಣಕಾಸಿನ ಸಚಿವರಾದ ಮಾನ್ಯ ಸಿದ್ಧರಾಮಯ್ಯನವರಿಗೆ ಶುಭವನ್ನು ಕೋರುತ್ತಾ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಬಹಳ ಕಿರಿಯ ಸದಸ್ಯರು ಅವರವರ ಕಾಲದಲ್ಲಿ ಏನೇನು ಸಾಧನೆಗಳನ್ನು ಮಾಡಿದರೋ ಅದನ್ನು ಬಹಳ ಗಂಭೀರವಾಗಿ ಹೇಳಿದರು. ಆದರೆ ಒಂದು ಆರ್ಥಿಕ ನೀತಿಯ ಬಗ್ಗೆ ತಮ್ಮ ಆತಾ ಕ್ರಮ ಬಹಳ ಗಂಭೀರವಾಗಿದೆ. ಏಕೆಂದರೆ ನಾವು ನಾನಾ ಆಲೋಚನೆಗಳನ್ನು ಮಾಡಿದ್ದೆವು. ಗಾಂಧಿ ವಿಚಾರಧಾರೆ ಆರ್ಥಿಕ ನೀತಿಯ ಬಗ್ಗೆ ಬಹಳ ಪತ್ರಿಕೆಗಳ ಮೂಲಕ ಗಾಂಧೀ ವಿಚಾರ ಧಾರೆಯನ್ನು ಇಡೀ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಅನುಷ್ಠಾನಕ್ಕೆ ತರಬೇಕೆಂದು ಯೋಚನೆ ಮಾಡಿದ್ದೆವು. ಆದರೆ ನಾವು ಬಹಳ ಗಂಭೀರವಾಗಿ ಯೋಚನೆ ಮಾಡಿದೆವು. ಇದರಲ್ಲಿ ನಾವು ಸಬ್ಸಿಡಿ ಕೊಡುತ್ತೇವೆ, 220 ಕೋಟಿ ರೂ. ಹಣವನ್ನು ಸಬ್ಸಿಡಿ ಕೊಟ್ಟಿದ್ದೇವೆ ಎಂದು ಹೇಳಿದಾಗ ಇಷ್ಟೊಂದು ಬಡತನ ಬರುವುದಕ್ಕೆ ಕಾರಣವೇನೆಂಬುದನ್ನು ಮೊದಲು ನಾವು ಗಂಭೀರವಾಗಿ ಯೋಚನೆ ಮಾಡಬೇಕು. ಬಡತನ ಬರುವುದಕ್ಕೆ ಮೊದಲನೇ ಕಾರಣಗಳೇನು? ಯಾವ ಯಾವ ಕಾರಣಗಳಿಂದ ರಾಜ್ಯದಲ್ಲಿ ಆರ್ಥಿಕ ಅಸಮಾನತೆ ಬಂದು ಬಡತನದ ರೇಖೆಯಲ್ಲಿ ನರಳುವ ಕಾರಣವೇನು? ನಾವು 220 ಕೋಟಿ ರೂಪಾಯಿಗಳನ್ನು ಸಬ್ಸಿಡಿ ಅಹಾರಕ್ಕಾಗಿ ಕೊಡುತ್ತೇವೆ ಎನ್ನುವಂಥ ಮಾತನ್ನು ಹೇಳುತ್ತೀರಿ. ಇನ್ನೊಂದು ದಿಕ್ಕಿನಲ್ಲಿ ಆಲೋಚನೆ ಮಾಡುತ್ತೇವೆ, 710 ಕೋಟಿ ರೂಪಾಯಿ

ಲಿಕ್ಕರ್ ಬಾಬಿಯಲ್ಲಿ ಬರುತ್ತದೆ ಎಂದು. ನೋಡಿ. ಹೆಂಡ, ಸಾರಾಯಿ, ಬೀಡಿ ಬ್ರಾಂಡಿ ದಂಧೆಯಲ್ಲಿ 710 ಕೋಟಿ ರೂಪಾಯಿ ಬರುತ್ತದೆ. ಲಾಟರಿ ಟಿಕೆಟ್ ಮೂಲಕ ಇಷ್ಟು ಹಣ ಬರುತ್ತದೆ. ಬಡತನ ರೇಖೆಯಲ್ಲಿರುವವರಿಗೆ 220 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಮಾಡಿ ಮತ್ತೆ 510 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಬಂದಿರಿ. ಅವರುಗಳು ಎಲ್ಲಿ ಮೇಲೆ ಬರುವುದಕ್ಕೆ ಸಾಧ್ಯ? ಮತ್ತೆ ಇಲ್ಲಿ ಬಡತನ. ಈಗಾಗಲೇ ತಾವು ಒಂದು ಮಾತನ್ನು ಹೇಳಿದಿರಿ, ಅದಕ್ಕಿಂತ ದೊಡ್ಡ ಸುಳ್ಳು ಇನ್ನಾವುದು? ಏಕೆಂದರೆ ಒಂದು ಆರ್ಥಿಕ ನೀತಿಗೆ ಯಾವಾಗಲೂ ಒಂದು ಶಿಸ್ತು ಇರಬೇಕು. ತಾವು ಒಂದು ಮಾತನ್ನು ಹೇಳಿದಿರಿ, ಪ್ರಕೃತಿ ವಿಕೋಪಕ್ಕೆ ಸಿಕ್ಕಿ ಗ್ರಾಮೀಣ ಜನರಿಗೆ ರೈತರಿಗೆ ನಾವು ಮನ್ನಾ ಮ್ಾಡುತ್ತೇವೆ. ಅವರ ಕೃಷಿ ಕಾರ್ಮಿಕರು ಇರಲಿ ಐ.ಆರ್.ಡಿ.ಪಿ. ಲೋನ್, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಸಾಲವೂ ಆದರಲ್ಲಿತ್ತು. ಆದರೆ ಆ ಸಾಲಧ ನೀತಿ ಇದೆಯಲ್ಲಾ, ಸಾಲ ಕೊಡುವ ಉದ್ದೇಶ ಯೋಜನೆ ಬಡತನದಿಂದ ಮೇಲೆ ಬರುವ ಯೋಜನೆಯೇ? ತಾವು ದಯವಿಟ್ಟು ಗಂಭೀರವಾಗಿ ಆಲೋಚನೆ ಮಾಡಬೇಕು. ಯೋಜನೆಯ ವಿಚಿತ್ರ ರೀತಿ ಹೇಗೆ ಇದೆ ಎಂದರೆ ಬಡತನದ ರೇಖೆಯಲ್ಲಿರುವ ಜನ ಆದರಿಂದ ಮೇಲಕ್ಕೆ ಬರಬಾರದು. ಮೇಲಕ್ಕೆ ಬರದೇ ಇರುವ ಯೋಚನೆಗಳನ್ನೆಲ್ಲಾ ಮಾಡಿ ಯಾವಾಗಲೂ ಅವರನ್ನು ನಾವು ಬಡವರನ್ನಾಗಿ ಇಟ್ಟುಕೊಂಡಿದ್ದೇವೆ. ಅವರಿಗೆ ನಾವು ಸಬ್ಸಿಡಿ ಎಂದು ಕೊಡುವ ಒಂದು ನಿಯಮವನ್ನು ರೂಢಿಸಿಕೊಂಡು ಬಂದಿದ್ದೇವೆ. ಅವರ ಜೀವನ ಭದ್ರತೆ, ಅವರ ಬದುಕಿನ ಬಗ್ಗೆ ಆಲೋಚನೆಯನ್ನು ಮಾಡಲೇ ಇಲ್ಲ. ಇನ್ನೊಂದು ಈ ಸರ್ಕಾರ ಬರುತ್ತದೆ, ಇನ್ನೊಂದು ಸರ್ಕಾರ ಬರುತ್ತದೆ, ಕಂಬಿ ಹಾಕಿರುತ್ತಾರೆ, ಕಂಬಿ ಜೋಡಿಸಿಕೊಂಡು ರೈಲು ಓಡಿಸಿಕೊಂಡು ಹೋಗುತ್ತದೆ. ಒಂದು ಸಾರಿ ಈ ಸರ್ಕಾರ ಬಂದಾಗ ಕೆಲವು ಮನೆಗಳನ್ನು ಜಾಸ್ತಿ ಮಾಡಿದೆವು. ಇನ್ನೊಂದು ಸರ್ಕಾರದಿಂದ ಸಬ್ಸಿಡಿ ಜಾಸ್ತಿ ಮಾಡಿದೆವು, ಈ ರೀತಿ ನಾವು ಮಾಡಿಕೊಂಡು ಬಂದಿದ್ದೇವೆ. ಆದರೆ ಬಡತನವನ್ನು ಹೋಗಲಾಡಿಸುವ ಕಾರ್ಯಕ್ರಮಗಳ ಬಗ್ಗೆ ತಾವು ಅತ್ಯಂತ ಗಂಭೀರವಾಗಿ ಆಲೋಚನೆ ಮಾಡಿಲ್ಲ. ಆದರೆ ನೀವು ಸಬ್ಸಿಡಿ ಕೊಡುತ್ತಿದ್ದೀರಿ ಪ್ರಕೃತಿ ವಿಕೋಪಕ್ಕೆ. ಯಾವುದೇ ಕಾರಣಕ್ಕೂ ಪ್ರಕೃತಿ ವಿಕೋಪಕ್ಕೆ ಸಿಗತಕ್ಕಂಥ ಪರಿಸ್ಥಿತಿ ಇರಲಿಲ್ಲ. ಈಗಾಗಲೇ ನಾನು ಮೊನ್ನೆ ದಿವಸ ಹೇಳಿದ್ದೇನೆ, ಪ್ರಕೃತಿ ವಿಕೋಪಕ್ಕೆ ಅತಿವೃಷ್ಟಿ, ಅನಾವೃಷ್ಟಿ ಕಾರಣಗಳು. ಅತಿವೃಷ್ಟಿ ಅನಾವೃಷ್ಟಿಯಲ್ಲಿ ನೀವು ಯೋಚನೆ ಮಾಡಿದರೆ ಅನಾವೃಷ್ಟಿ ಒಂದು ತೆಗೆದುಕೊಳ್ಳೋಣ. ಹೋದ ಸಾರಿ ಒಂದೇ ಒಂದು ಯಾವುದೇ ಸರ್ಕಾರ ಆಗಬಹುದು, ಯಾರ ಕೈಯಲ್ಲೂ ಕೊಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ. ಕಡ್ಲೆಕಾಯಿ ಬಿತ್ತನೆ ಬೀಜ ಹತ್ತು ಲಕ್ಷವೋ ಹದಿನೈದು ಲಕ್ಷವೋ ಪೂರ್ಣ ನಷ್ಟವಾಯಿತು. ಏನು ಕೊಡುವುದಕ್ಕೆ ಸಾಧ್ಯ? 200 ರೂಪಾಯಿ ಇಲ್ಲ 150 ರೂಪಾಯಿ ಕೊಡಬಹುದು. ಬಿತ್ತನೆ ಬೀಜಕ್ಕೆ 50 ಕೆ.ಜಿ.ಗೆ ಎಷ್ಟಾಯಿತು. 500 ರೂಪಾಯಿ ಬರೀ ಬಿತ್ತನೇ ಬೀಜವಾಯಿತು. ಅದಕ್ಕೆ ರಾಸಾಯನಿಕ ಗೊಬ್ಬರ ಮತ್ತು ಬೇಸಾಯ, ಯಾವುದೇ ರೈತನಿಗೆ

ತಾವು ಅತಿವೃಷ್ಟಿ ಅನಾವೃಷ್ಟಿಯಿಂದ ಯಾವುದೇ ಸರ್ಕಾರ ಇರಬಹುದು, ಹಣವನ್ನು ಅವರಿಗೆ ಪರಿಹಾರ ರೂಪದಲ್ಲಿ ಕೊಟ್ಟಿಲ್ಲ. ಒಂದು ಅವನು ಅನುಭವಿಸುವುದು, ಅವನು ಬದುಕಬಹುದು, ಇಲ್ಲದಿದ್ದರೆ ಸಾಯಬಹುದು, ಇದು ಏನಾಗಿದೆ ಎಂದರೆ ನಾವು ಚುನಾವಣೆಯಲ್ಲಿ ಒಂದು ಮಾತನ್ನು ಹೇಳಿದ್ದೇವೆ. ರೈತನಿಗೆ ಏನೋ ಒಂದು ಸಹಾಯ ಧನವನ್ನು ಮಾಡಬೇಕು ಎಂದು ಮಾಡಿದ್ದೀರಿ ಅಷ್ಟೆ. ಅಷ್ಟು ಬಿಟ್ಟರೆ ರೈತರಿಗೆ ಮೂಲಭೂತ ಸಮಸ್ಯೆಗಳ ಬಗ್ಗೆ ಒಂದು ವಾಕ್ಯ ಇಲ್ಲ. ಇವತ್ತು ರೈತರು ಎಷ್ಟೊಂದು ಅನ್ಯಾಯವನ್ನು ಅನುಭವಿಸುತ್ತಿದ್ದಾರೆ ಎಂದರೆ ಇವತ್ತು ಕೂಲಿ ಮಾಡುವವರೂ ಇದ್ದಾರೆ. ವೈಜ್ಞಾನಿಕವಾಗಿ 1947ನೇ ಇಸವಿಯಿಂದ ಇಲ್ಲಿಯವರೆಗೆ ಲೆಕ್ಕ ತೆಗೆದುಕೊಳ್ಳಿ, ಎಷ್ಟು ವೈಜ್ಞಾನಿಕವಾಗಿ ಅವರಿಗೆ ನಾವು ಕೂಲಿ ಕೊಟ್ಟಿದ್ದೇವೆ, ಅವರ ಬದುಕಿನ ಬಗ್ಗೆ ಏನು ಆಲೋಚನೆಗಳನ್ನು ಮಾಡಿಕೊಂಡು ಬಂದಿದ್ದೇವೆ ಎನ್ನುವುದನ್ನು ಗಂಭೀರವಾಗಿ ಯೋಚನೆ ಮಾಡಬೇಕು. ಬರೀ ಬೆಲೆ ನೀತಿ, ಕೂಲಿ ನೀತಿ, ಹೀಗೆ ಬಹಳಷ್ಟು ಮೋಸ ಮಾಡಿದ್ದೇವೆ. 1944ನೇ ಇಸವಿಯಲ್ಲಿ ನನಗೆ ಗೊತ್ತಿರುವ ಹಾಗೆ ಒಂದು ಟನ್ ಕಬ್ಬಿಗೆ 24 ರೂಪಾಯಿ. 1985ನೇ ಇಸವಿಯಷ್ಟೊತ್ತಿಗೆ ಕಬ್ಬಿನ ಬೆಲೆ 258 ರೂಪಾಯಿ. ಅಂದರೆ ನಲವತ್ತು ವರ್ಷಕ್ಕೆ ಹತ್ತು ಪಟ್ಟು ಜಾಸ್ತಿಯಾಯಿತು. ಅಲ್ಲಿ ಕೂಲಿಯೇ ಹತ್ತು ಪಟ್ಟು ಜಾಸ್ತಿಯಾಯಿತು. ಅದೇ ಬೇರೆ ಕೈಗಾರಿಕೆಯಿಂದ ಉತ್ಪಾದನೆ ಮಾಡಿದಂಥ ಯಾವುದೇ ಪದಾರ್ಥಗಳು, ನೌಕರಿಯಲ್ಲಿರುವವರ ಎಲ್ಲರ ಸಂಬಳ 50 ಪಟ್ಟು, 70 ಪಟ್ಟು, 80 ಪಟ್ಟು, ನೂರು ಪಟ್ಟು ಜಾಸ್ತಿಯಾಯಿತು. ಆದಕ್ಕೆ ನಾವು ರೈತನನ್ನು ಏನೂ ಗೊತ್ತಿಲ್ಲದ ಹಾಗೆ ಇಟ್ಟುಕೊಂಡಿದ್ದೇವೆ. ಬಡತನ ರೇಖೆಯಲ್ಲಿರುವ ಒಂದು ಯೋಜನೆ ಮಾಡಬೇಕು. ಯಾವಾಗಲೂ ಅವನು ಮೇಲೆ ಬರಬಾರದು. ಅವನು ಎಮ್ಮೆಯನ್ನು ಕಾಯಬೇಕು, ಅವರು ಲಾಟರಿ ಟಿಕೆಟ್ ತೆಗೆದುಕೊಳ್ಳಬೇಕು. ಅವನು ಸಾರಾಯಿ ಕುಡಿಯಬೇಕು, ಅವರು ಶೈಕ್ಷಣಿಕವಾಗಿ, ಮಾನಸಿಕವಾಗಿ ಮೇಲೆ ಬರಬಾರದು. ಈ ಯೋಜನೆಗಳು ಹೋಗಬೇಕು. ಅವರು ವೈಜ್ಞಾನಿಕವಾಗಿ ಸಮಾನತೆಯಿಂದ ಬದುಕಬೇಕು. ಆಗ ನಿಜವಾಗಲೂ ಒಂದು ಸರ್ಕಾರ ಒಂದು ಮಹತ್ತರವಾದ ಬದಲಾವಣೆಯ ಕೆಲಸವನ್ನು ಮಾಡುತ್ತಿದೆ ಎಂದು ಯೋಚನೆ ಮಾಡಬಹುದು. ಈಗ ಉದಾಹರಣೆಗೆ ಈ ಸಬ್ಸಿಡಿ ವಿಷಯದ ಬಗ್ಗೆ ಮಾತನಾಡಿ ಆಯಿತು. ಇನ್ನೊಂದು ನೀವು ಕೃಷಿಗೆ ಯೋಜನಾ ವೆಚ್ಚದಲ್ಲಿ 6.94 ಕಾಂಗ್ರೆಸ್‌ನವರು ಮಾಡಿದರೆ, ತಾವು 6.47 ಮಾಡಿದ್ದೀರಿ. ಗ್ರಾಮೀಣಾಭಿವೃದ್ಧಿಗೆ ಕಾಂಗ್ರೆಸ್‌ನವರು 6.70 ಆದರೆ ತಾವು 5.62 ಮಾಡಿದ್ದೀರಿ. ವಿಶೇಷ ಪ್ರದೇಶದ ಯೋಜನೆಗೆ 3.43 ಕಾಂಗ್ರೆಸ್‌ನವರಾದರೆ ತಾವು 2.66 ಮಾಡಿದ್ದೀರಿ. ಕೈಗಾರಿಕೆಗೆ ಕಾಂಗ್ರೆಸ್ ಸರ್ಕಾರದಲ್ಲಿ 3.10 ಯೋಜನಾ ಹಣ ಮಾಡಿದರೆ ತಾವು 5.80 ಮಾಡಿದ್ದೀರಿ. ಶಿಕ್ಷಣ ಇತ್ಯಾದಿ 9.59 ಪರ್‌ಸೆಂಟ್ ಇದ್ದರೆ ತಾವು 8.83 ಪರ್‌ಸೆಂಟ್ ಮಾಡಿದ್ದೀರಿ. ಆದರಲ್ಲಿ ತಾವು ಹೆಚ್ಚು ಮಾಡಿರುವುದು ಎಂದರೆ ನೀರಾವರಿಗೆ 2 ಪರ್‌ಸೆಂಟ್ ಜಾಸ್ತಿ ಮಾಡಿದ್ದೀರಿ. ಶಕ್ತಿ ಮೂಲಗಳಿಗೆ ಅರ್ಧ ಪರ್‌ಸೆಂಟ್ ಅಂದರೆ ವಿದ್ಯುಚ್ಛಕ್ತಿ. ಅರ್ಧ ಪರ್‌ಸೆಂಟ್ ಹೆಚ್ಚು ಜಾಸ್ತಿ

ಮಾಡಿದ್ದೀರಿ. ತಾವು ಶಿಕ್ಷಣದ ಬಗ್ಗೆ ಆಮೂಲಾಗ್ರವಾಗಿ ಬದಲಾವಣೆ ಮಾಡುವುದು ಬೇರೆ ವಿಷಯ. ಗ್ರಾಮೀಣ ಶಿಕ್ಷಣ ಎಂದರೆ ಹೇಗೆ ಆಗಿದೆ ಎಂಬುದನ್ನು ಹೇಳುತ್ತೇನೆ. ಹೊಸ ಸ್ಕೂಲುಗಳನ್ನು ಕಟ್ಟಿಸುವುದು ಆಮೇಲೆ ಇರಲಿ. ಇಡೀ ರಾಜ್ಯದಲ್ಲಿ ಯಾವುದೇ ಕಡೆ ಸ್ಥೂಲವಾಗಿ ಸಮೀಕ್ಷೆ ಮಾಡಿ ತರಿಸಿ. ಇನ್ನು ಎರಡು ವರ್ಷಗಳಲ್ಲಿ ನೂರಕ್ಕೆ ಎಂಭತ್ತು ಸ್ಕೂಲುಗಳು ಯಾವುದೂ ಉಳಿಯುವುದಿಲ್ಲ. ಮಕ್ಕಳೇನಾದರೂ ಕುಳಿತರೆ ಹೆಲ್ಮೆಟ್ ಹಾಕಿಕೊಂಡು ಕುಳಿತುಕೊಳ್ಳಬೇಕು. ಆ ಮಟ್ಟದ್ದು ಇದೆ. ನಾವು ಎಷ್ಟೊಂದು ತಿಳಿವಳಿಕೆ ಇಲ್ಲದೆ ತಪ್ಪು ಮಾಡುತ್ತಿದ್ದೇವೆ. ನಾವು ಶಿಕ್ಷಣದ ಬಗ್ಗೆ ಅಮೂಲಾಗ್ರವಾಗಿ ಯೋಚನೆ ಮಾಡುವುದಿಲ್ಲ. ಏನೋ ಓದಿಸಬೇಕು, ಪ್ರೈಮರಿ ಸ್ಕೂಲಿಗೆ ಕಳುಹಿಸಬೇಕು, ಮಿಡ್ಲ್ ಸ್ಕೂಲ್‌ಗೆ ಕಳುಹಿಸಬೇಕು, ಏನೋ ಒಂದು ಓದಬೇಕು ಎಂದು ಅದನ್ನು ಓದಿಸುವುದು ನಾವು. ಆದರೆ ನಿಜವಾದ ಆಲೋಚನೆಯನ್ನು ಮಾಡಬೇಕು. ಯಾವ ಮಟ್ಟದಲ್ಲಿ ಶಿಕ್ಷಣದ ವ್ಯತ್ಯಾಸ, ತಾರತಮ್ಯ ಇದೆ ಎಂದು ಹೇಳಿ ನನ್ನದೇ ಉದಾಹರಣೆಯಾಗಿ ಹೇಳುತ್ತೇನೆ. ಈಗ ತಾವು ಹೊಸ ಶಾಲೆಗಳನ್ನು ಮಾಡಬೇಕು ಎಂದು ಇದ್ದೀರಿ. ಯಾರ ಮಕ್ಕಳಿಗೆ ಸಿಗುತ್ತದೆ? ನವೋದಯ ಶಾಲೆಗೆ ನನ್ನ ಮಗಳಿಗೆ ಸೀಟು ಸಿಕ್ಕಿತ್ತು. ಇಂಟರ್‌ವ್ಯೂ ಫೇಸ್ ಮಾಡಿದ್ದಳು. ನನಗೆ ಫೀಸ್ ಕಟ್ಟಿಸಿ ಓದಿಸುವ ಶಕ್ತಿ ನನಗಿತ್ತು. ಆದರೆ ನವೋದಯ ಶಾಲೆಗೆ ಎಂಥ ಮಕ್ಕಳಿಗೆ ಸಿಗಬೇಕು. ಪೂರ್ಣ ಬಡತನದ ರೇಖೆಯಲ್ಲಿರುವ ಮಕ್ಕಳಿಗೆ ಅಲ್ಲಿ ನೂರು ಜನ ಅಥವಾ ಇನ್ನೂರು ಜನ ಮಕ್ಕಳನ್ನು ಸೆಲೆಕ್ಟ್ ಮಾಡುತ್ತೇವೆ. ಅವರಿಗೆ ಒಂದು ವರ್ಷಗಳ ಕಾಲ ಆ ಶಿಕ್ಷಣಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಕೊಟ್ಟು ಅವರಿಗೆ ತರಬೇತಿ ಕೊಡಿಸಿ ಅದರಲ್ಲಿ ಆ ಮಕ್ಕಳನ್ನು ಜ್ಞಾನವನ್ನು ಪರಿಶೀಲನೆ ಮಾಡಿ ಆಗ ಆ ಮಕ್ಕಳನ್ನು ಸೇರಿಸಬೇಕಾಗುತ್ತದೆ. ನಿಜವಾದ ಬಡತನದ ರೇಖೆಯಲ್ಲಿರುವ ಮಕ್ಕಳಿಗೆ ಸಿಗುವಂಥ ಛಾನ್ಸ್. ನಾನೂ ಓದಿದ್ದೇನೆ. ನನ್ನ ಹೆಂಡತಿಯೂ ಓದಿದ್ದಾಳೆ. ನನ್ನ ಮಗಳನ್ನು ಓದಿಸಬೇಕಾದರೆ ಯಾವುದು ಪುಸ್ತಕ ನವೋದಯ ಶಾಲೆಗೆ ಸೇರುವಂಥ ಯಾವುದು ಪುಸ್ತಕ ಓದಿಸಬೇಕು ಎಂದು ನನಗೆ ಗೊತ್ತು. ಆ ಪುಸ್ತಕವನ್ನು ನಾನು ನನ್ನ ಮಗಳಿಗೆ ಓದಿಸಿದೆ. ನನ್ನ ಮಗಳು ಪಾಸ್ ಮಾಡಿದಳು. ಆದರೆ ಪೂರ್ಣ ಬಡತನದ ರೇಖೆಯಲ್ಲಿರುವ ವ್ಯಕ್ತಿ ಗಂಡ ಹೆಂಡತಿ ಪುಸ್ತಕದ ಹೆಸರೇ ಗೊತ್ತಿಲ್ಲ. ಅವರಿಗೂ ಓದಿಸಬೇಕು ಎನ್ನುವ ಆಸೆ. ಅಂಥ ಮಕ್ಕಳಿಗೆ ಸೀಟ್ ಸಿಕ್ಕಿದರೆ ಶಿಕ್ಷಣದ ಬದಲಾವಣೆಯೇನಾದರೂ ಮಾಡುವುದಕ್ಕೆ ಸಾಧ್ಯ. ಅಲ್ಲಿ ಹಳ್ಳಿಯಲ್ಲಿ ಇನ್ನೊಂದು ಸ್ಕೂಲು ಕಟ್ಟಿಸಿ ಎಂದು ಹೇಳುತ್ತೇವೆ. ಆರ್.ಸಿ.ಸಿ. ಬಿಲ್ಡಿಂಗ್ ಕಟ್ಟಿಸುತ್ತೀರಿ. ಈಗ ಇರುವ 35 ಸಾವಿರ ರೂಪಾಯಿ, 33 ಸಾವಿರ ರೂಪಾಯಿ ಕೊಟ್ಟು ಶಾಲೆಯನ್ನು ಕಟ್ಟಿಸುತ್ತಿದ್ದೀರಲ್ಲಾ, ಈ ರೀತಿ 33 ಸಾವಿರ ರೂಪಾಯಿ ಒಂದು ಕೊಠಡಿಯನ್ನು ಕಟ್ಟಿದ್ದರೆ ಅದರಲ್ಲಿ ಮಕ್ಕಳು ಎಲ್ಲಿ ಓದಬೇಕು ಎಂಬುದನ್ನು ತಾವು ಯೋಚನೆ ಮಾಡಿ. ಒಂದು ಸ್ಕೂಲನ್ನು ಅಷ್ಟು ದೊಡ್ಡದಾಗಿ ಆರು ಕ್ಲಾಸ್, ಏಳು ಕ್ಲಾಸಿನ ಕಟ್ಟಿಸಿದರೆ ಜಾಗವನ್ನು ಎಷ್ಟು ಅಕ್ಯುಪೈ ಮಾಡುತ್ತದೆ. ಇವತ್ತು ರಾಜ್ಯದಲ್ಲಿ ಮನೆ ಕಟ್ಟಲಿಕ್ಕೆ ನಾವು ಕೈಗಾರಿಕೆಗೋಸ್ಕರ ಇನ್ನಿತರೆ ಎಲ್ಲಾ ಚಟುವಟಿಕೆಗಳಿಗೂ ಪ್ರತಿ ದಿವಸ ಎಷ್ಟು

ಜಮೀನನ್ನು ಉಪಯೋಗಿಸುತ್ತಿದ್ದೇವೆ ಎನ್ನುವುದನ್ನು ಯೋಚನೆ ಮಾಡಿದ್ದೀರಾ? ಒಂದು ಶಾಲೆಯನ್ನು, ಸುಮಾರು 10 ಕೊಠಡಿಯನ್ನು ಬಹಳ ದೂರ ಮಟ್ಟದಲ್ಲಿ ಕಟ್ಟಿದಾಗ 10 ಕೊಠಡಿ ಇರುವ ಜಾಗದಲ್ಲಿ 30 ಕ್ಲಾಸ್. ಮಾಡಬಹುದು. ಮೂರು ಅಂತಸ್ತುಗಳ ಕಟ್ಟಡವನ್ನು ಕಟ್ಟಿದರೆ ಜಾಗ ಉಳಿತಾಯ ಮಾಡಬಹುದು. ಈ ಕಟ್ಟಡದ ಬಗ್ಗೆ ಆಮೂಲಾಗ್ರವಾದ ಬದಲಾವಣೆ ಆಗದೇ ಇದ್ದರೆ ಇನ್ನು ಎರಡು ವರ್ಷದಲ್ಲಿ ಪ್ರತಿ ಹಳ್ಳಿಯಲ್ಲಿ 50 ರಿಂದ 100 ಮಕ್ಕಳು ಸಾಯುವಂಥ ಒಂದು ಸ್ಥಿತಿ ಸೃಷ್ಟಿಯಾಗುತ್ತದೆ. ತಾವು ಇದನ್ನು ದಯವಿಟ್ಟು ಗಂಭೀರವಾಗಿ ಯೋಚನೆ ಮಾಡಬೇಕು. ಹಳ್ಳಿಯಲ್ಲಿ ಹೇಗಿದೆ ಎಂದರೆ ಒಂದು ರೂಮ್ ಇರುತ್ತದೆ. ಏನೋ ಹಿಂಸೆಗೆ ಅವರ ತಂದೆ ತಾಯಿಗಳು ಮಕ್ಕಳನ್ನು ಕಳುಹಿಸುವುದು. ಅವರಿಗೆ ಡೆಸ್ಕ್ ಏನೂ ಇಲ್ಲ. ಏನೋ ಕುಳಿತಿರುತ್ತಾರೆ ಮಕ್ಕಳು. ಅದರಲ್ಲಿ ಏಳು ಕ್ಲಾಸ್ ಇದ್ದರೆ ಮೂರು ಜನ ಮೇಷ್ಟ್ರು. ಅದರಲ್ಲ ಒಬ್ಬರು ಯಾರೋ ರಜ. ಅದನ್ನೇನೂ ಕೇಳುವ ಹಾಗಿಲ್ಲ. ಎ.ಇ.ಓ. ಅನ್ನೂ ಕೇಳುವ ಹಾಗಿಲ್ಲ, ಆ ಮೇಷ್ಟ್ರನ್ನೂ ಕೇಳುವ ಹಾಗಿಲ್ಲ. ನಾವೇ ಹೇಳಬೇಕು ಹಳ್ಳಿಗಳಲ್ಲಿ, ನೀವೆಲ್ಲಾ ಬೀಗ ಹಾಕಿ ಮೇಷ್ಟ್ರು ಸ್ಕೂಲಿಗೆ ಬರದೇ ಇದ್ದರೆ ಎಂದು. ಗಣರಾಜ್ಯೋತ್ಸವದ ದಿವಸ ಮೇಷ್ಟರೇ ಬಂದು ಬಾವುಟ ಹಾರಿಸಿದ್ದರು. ನನ್ನ ಕ್ಷೇತ್ರದಲ್ಲಿ. ಆ ಸುದ್ದಿ ಪೇಪರ್‌ನಲ್ಲೂ ಬಂದಿತ್ತು. ಊರಿನವರೆಲ್ಲಾ ಸೇರಿ ಮೇಷ್ಟ್ರನ್ನು ಕೂಡಿ ಹಾಕಿಕೊಂಡಿದ್ದರು. ಕೆಲವರಿರಬಹುದು ಒಳ್ಳೆ ಮೇಷ್ಟ್ರುಗಳು. ಎಲ್ಲಾ ಮೇಷ್ಟ್ರನ್ನು ನಾನು ಕೆಟ್ಟವರು ಎಂದು ಹೇಳುವುದಿಲ್ಲ. ವೈದ್ಯಕೀಯ ಸೌಲಭ್ಯದ ಬಗ್ಗೆ ಯೋಚನೆ ಮಾಡಿದಾಗ ನಿಜವಾಗಿ ಬಹಳ ಗಂಭೀರವಾಗಿ ತಾವು ಯೋಚನೆ ಮಾಡಬೇಕು. ಗ್ರಾಮೀಣ ಪ್ರದೇಶದಲ್ಲಿ ವೈದ್ಯಕೀಯ ಸೌಲಭ್ಯ ನಾವು ಕನಿಷ್ಠ ಕೊಡುತ್ತೇವೆ ಎಂದರೆ, ಅದು ಮೊಬೈಲ್ ಆಸ್ಪತ್ರೆ ಆದರೆ ಮಾತ್ರ. ಏನಾದರೂ ಬದಲಾವಣೆ ಮಾಡಲು ಸಾಧ್ಯ. ಮೊಬೈಲ್ ವ್ಯಾನ್ಸ್ ಮೂಲಕ ವೈದ್ಯಕೀಯ ಸೌಲಭ್ಯ ಒದಗಿಸಬೇಕು. ಅದರಲ್ಲೂ ಹೆಚ್ಚು ಮಳೆ ಆಧಾರಿತ ಪ್ರದೇಶಗಳಲ್ಲಿ ಕೂಡ ನಾರ್ತ್ ಕರ್ನಾಟಕದ ಹಳ್ಳಿಗಳಲ್ಲಿ ಇದು ಅತಿ ಅವಶ್ಯಕ. ನಾನು ಅಲ್ಲಿ ನೋಡಿದ್ದೇನೆ. ಎಷ್ಟೊಂದು ಬಡತನ? ಎಷ್ಟೊಂದು ಇಲ್ಲಿಟ್ರಸಿ. ಎಷ್ಟೊಂದು ನೋವು? ನಿಜವಾಗಿಯೂ ನೋಡಬಾರದು. ಯಾವ ಮಟ್ಟದ ಬಡತನ ಇದೆ ಎಂದರೆ 6 ವರ್ಷ 78 ವರ್ಷದ ಹೆಣ್ಣು ಮಕ್ಕಳನ್ನೆಲ್ಲಾ ಮದುವೆ ಮಾಡತಕ್ಕ, ತಿಳಿವಳಿಕೆ ಇಲ್ಲದೇ ಇರತಕ್ಕ ಒಂದು ಕತ್ತಲೆಯ ಸಮಾಜದಲ್ಲಿ ಬೆಳೆಯುತ್ತಿರುವ ಬಡತನವನ್ನು ನಾವು ನೋಡಿದ್ದೇವೆ. ತಾವು ದಯವಿಟ್ಟು ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು. ಇವತ್ತು ಆಯವ್ಯಯ ಮಂಡನೆ ಮಾಡುತ್ತಿದ್ದೀರಿ. ಆದರೆ ಎಲ್ಲಿಂದ ಹಣ ಜಾಸ್ತಿ ಬರುತ್ತಿದೆ? ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಎಲ್ಲಿಂದ ಹಣ ಜಾಸ್ತಿ ಬರುತ್ತಿದೆ? ಎಲ್ಲಿಂದ ಬೊಕ್ಕಸ ತುಂಬುತ್ತದೆ, ಎಲ್ಲಿಗೆ ನೀವು ಖರ್ಚು ಮಾಡುತ್ತಿದ್ದೀರಿ? 100- 115 ವಿಚಾರಗಳನ್ನು ಗಂಭೀರವಾಗಿ, ಬಹಳ ದೊಡ್ಡದಾಗಿ ತಾವು ಮಂಡಿಸಿದ್ದೀರಿ. ಹಳ್ಳಿಗಳ ಬಗ್ಗೆ ಬಜೆಟ್‌ನಲ್ಲಿ 70 ಭಾಗ ಕೊಡುತ್ತೇವೆ ಎಂದು ತಾವು ಹೇಳಿರತಕ್ಕ ಮಾತು ಪೂರ್ಣ ಸುಳ್ಳು. ಒಟ್ಟು ತಾವು ಹೇಳಿರತಕ್ಕ ವಿಷಯ ತೆಗೆದುಕೊಳ್ಳಿ.

ಒಟ್ಟು 19 ನಗರಗಳಿಗೆ ಬಜೆಟ್ಟಿನಲ್ಲಿ ತಾವು ಇಟ್ಟಿರುವುದು 12.63. ತಾವು ಹೇಳಿರತಕ್ಕ 56,689 ಗ್ರಾಮಗಳ ನೆಲೆಗಳಿಗೆ ಒಟ್ಟು ಬಜೆಟ್ಟಿನಲ್ಲಿ 5.62 ಭಾಗವನ್ನು ತಾವು ಕೊಟ್ಟಿದ್ದೀರಿ. ತಾವು ಒಂದು ಒಳ್ಳೆಯ ಕೆಲಸ ಮಾಡಿದ್ದೀರಿ. ಅದರ ಬಗ್ಗೆ ಬೇರೆ ಮಾತಿಲ್ಲ. ಇವತ್ತು ಕೇಂದ್ರ ಸರ್ಕಾರದಲ್ಲಿ, ರಾಜ್ಯ ಸಭೆಯಲ್ಲಿ ಪೇಟೆಂಟ್ ಕಾಯಿದೆ ಬಿದ್ದು ಹೋಗಿದೆ. ಪೇಟೆಂಟ್ ಕಾಯಿದೆ ಬಗ್ಗೆ ರಾಜ್ಯ ಸರ್ಕಾರದಲ್ಲಿ ಬಹಳ ಬದಲಾವಣೆ ಮಾಡುತ್ತೇವೆಂದು ಹೇಳಿದ್ದೀರಿ. ಎಲ್ಲಾ ವಿರೋಧ ಪಕ್ಷದವರೂ ವಿರೋಧ ಮಾಡಿದರು. ಅದಕ್ಕೆ ಮತ ಇಲ್ಲದೇ ಇವತ್ತು ಪೇಟೆಂಟ್ ಕಾಯಿದೆ ರಾಜ್ಯ ಸಭೆಯಲ್ಲಿ ಬಿದ್ದು ಹೋಗಿದೆ. ಆದರೆ 100ನೇ ವಿಷಯದಲ್ಲಿ ಹೇಳಿದ್ದೀರಿ. ಕರ್ನಾಟಕರಾಜ್ಯದಲ್ಲಿ ಹೇರಳ ಜೈವಿಕ ಸಂಪನ್ಮೂಲಗಳಿವೆ. ರಾಜ್ಯವು, ಈ ಅತ್ಯಮೂಲ್ಯ ಜೈವಿಕ ಸಂಪನ್ಮೂಲಗಳ ಮೇಲೆ ಆಸ್ತಿ ಹಕ್ಕನ್ನು ಪಡೆದುಕೊಳ್ಳಬೇಕಾಗಿದೆ. ಅರಣ್ಯ ನಾಶವಾಗುತ್ತಿರುವುದರಿಂದ ಹಾಗೂ ನವೀನ ತಂತ್ರಜ್ಞಾನ ಬಳಸಿ ವ್ಯವಸಾಯ ಮಾಡುತ್ತಿರುವುದರಿಂದ ಸಾಕಷ್ಟು ಪ್ರಮಾಣದಲ್ಲಿ ತಳಿಗಳು ನಾಶವಾಗುತ್ತಿವೆ. ಇದನ್ನು ತಡೆಗಟ್ಟಲು ಮತ್ತು ಜೈವಿಕ ಸಂಪನ್ಮೂಲಗಳನ್ನು ಸಂರಕ್ಷಿಸಲು ಸರ್ಕಾರವು ಜೀನ್ ಬ್ಯಾಂಕುಗಳು, ಜೆರ್ಮ್-ಪ್ಲಾಸಂ ಬ್ಯಾಂಕ್‌ಗಳು ಮತ್ತು ಬಯೋ ಡೈವರ್ಸಿಟಿ ಪಾರ್ಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಇದಕ್ಕೆ ಸಂಬಂಧಿಸಿದಂತೆ ಸಸ್ಯ ಹಾಗೂ ಪ್ರಾಣಿಗಳ ಸಮೀಕ್ಷೆ ನಡೆಸಲು ಉದ್ದೇಶಿಸಲಾಗಿದೆ . ಎಂದು ಹೇಳಿದ್ದೀರಿ. ನಾನು ಎರಡು ಖಾಸಗೀ ಮಸೂದೆಗಳನ್ನು ಮಂಡಿಸಿದ್ದೇನೆ. ದಯವಿಟ್ಟು ಇದನ್ನು ಸರ್ಕಾರದ ಮಸೂದೆಯಾಗಿ ದಯವಿಟ್ಟು ತಾವು ಹೇಳಿರುವ ಪ್ರಕಾರ ಪರಿವರ್ತನೆ ಮಾಡಿಕೊಳ್ಳಬೇಕು ಈ ವಿಚಾರದಲ್ಲಿ ನಾನು ಮಂಡಿಸಿದ್ದೇನೆ. ಈಗಾಗಲೇ ಕೇಂದ್ರ ಸರ್ಕಾರದಲ್ಲಿ ಇದಕ್ಕೆ ವಿರೋಧ ಇದೆ. ದಯವಿಟ್ಟು ಇದನ್ನು ಸರ್ಕಾರದ ಮಸೂದೆಯಾಗಿ ಪರಿವರ್ತನೆ ಮಾಡಿಕೊಂಡು ತಾವು ಹೇಳಿರುವ ಪ್ರಕಾರ ಬದಲಾವಣೆ ಮಾಡಿಕೊಳ್ಳಬಹುದು. ಮೊನ್ನೆ ದಿವಸ ತಾವು ಮಾತನಾಡಬೇಕಾದರೆ ಫಾಸ್ಟ್ ಟ್ರಾಕ್ ರಸ್ತೆ ಬಗ್ಗೆ ಹೇಳಿದ್ದೀರಿ. ಡೆಕ್ಕನ್ ಹೆರಾಲ್ಡ್‌ನಲ್ಲಿ ಮಾರ್ಚಿ 27ನೇ ತಾರೀಖು ಬಂದಿದೆ. 431 ಕೋಟಿ ರೂಪಾಯಿ ಮಾತ್ರ ಖರ್ಚಾಗುತ್ತದೆಂದು ತಾವು ಹೇಳಿದ್ದೀರಿ. ಆದರೆ ಅದರ ಪೂರ್ಣ ಖರ್ಚು ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿರುವುದು 960 ಕೋಟಿ ರೂಪಾಯಿ. 960 ಕೋಟಿ ರೂಪಾಯಿ ಎಂದರೆ ಒಂದು ಕಿಲೋಮೀಟರ್‌ಗೆ ಏಳು ಕೋಟಿ ರೂಪಾಯಿಗಳು. ಒಟ್ಟು 140 ಕಿಲೋಮೀಟರ್ ಇದೆ. ಒಂದು ಕಿಲೋಮೀಟರ್‌ಗೆ ಸುಮಾರು ಏಳು ಕೋಟಿ ರೂಪಾಯಿ ಫಾಸ್ಟ್ ಟ್ರಾಕ್ ರಸ್ತೆ ಮಾಡುವುದಕ್ಕೆ ಖರ್ಚು ಮಾಡುತ್ತೀರಿ. ಇದೆಲ್ಲಾ ತಾವು ದಯವಿಟ್ಟು ಯೋಚನೆ ಮಾಡಬೇಕು. ಇವತ್ತು ಗ್ರಾಮೀಣ ಪ್ರದೇಶಗಳಿಗೆ ಏನೇನೋ ಮಾಡುತ್ತಿದ್ದೇವೆ ಎಂದು ಹೇಳುತ್ತೇವೆ. ಅದು ಮೂಲಭೂತ ಸಮಸ್ಯೆಗಳು. ಯಾವುದೇ ಸರ್ಕಾರ ಬರಲಿ ವಿವಿಧ ಯೋಜನೆಗಳ ಮೂಲಕ ಕುಡಿಯುವ ನೀರು ಕೊಡುತ್ತಿದ್ದೇವೆ, ರೋಡ್ ಕೊಡುತ್ತಿದ್ದೇವೆ, ಸ್ಕೂಲ್ ಕೊಡುತ್ತಿದ್ದೇವೆ ಎಂದು ಹೇಳುತ್ತಾರೆ. ಹಳ್ಳಿಗಳ ಅಭಿವೃದ್ಧಿ ಬಗ್ಗೆ ಮಾತನಾಡುತ್ತೇವೆ. ಯಾವುದೇ ಸರ್ಕಾರ ಇರಲಿ, ನಾನಾ

ಯೋಜನೆಗಳಲ್ಲಿ ಇದನ್ನೆಲ್ಲಾ ಮಾಡಿಕೊಳ್ಳಬಹುದು. ಆದರೆ ನಾವು ಯಾವ ಮಟ್ಟಕ್ಕೆ ಯೋಜನೆಯನ್ನು ಮಾಡಿಕೊಂಡು ಇಟ್ಟುಕೊಂಡಿದ್ದೇವೆ, ಎಲ್ಲಾ ಹಳ್ಳಿಗಳಲ್ಲಿ ಯಾವ ಮಟ್ಟದಲ್ಲಿ ರಸ್ತೆ ಇದೆ ಎಂಬುದನ್ನು ಯೋಚನೆ ಮಾಡುತ್ತಿಲ್ಲ. ಏಕೆಂದರೆ ಬಹಳ ತ್ವರಿತವಾಗಿ ಫಾಸ್ಟ್ ಟ್ರಾಕ್ ಬೇಕು. ಏಳು ಕೋಟಿ ರೂಪಾಯಿ ಒಂದು ಕಿಲೋಮೀಟರ್‌ಗೆ ಖರ್ಚು. ಯಾರ ಮೇಲೆ ಬೀಳುತ್ತದೆ ಈ ತೆರಿಗೆ? 960 ಕೋಟಿ ರೂಪಾಯಿ ಎಂದರೆ 7 ಕೋಟಿ ರೂಪಾಯಿ ಒಂದು ಕಿಲೋಮೀಟರ್‌ಗೆ ಬೀಳುತ್ತದೆ. ಯಾರ ಮೇಲೆ ಬೀಳುತ್ತದೆ ಇದು? ಭ್ರಷ್ಟಾಚಾರಕ್ಕೆ ಇದೂ ಒಂದು ಕಾರಣ. ಬಹಳ ಫಾಸ್ಟ್ ಆಗಿ ಬಸ್‌ನಲ್ಲಿ ಪ್ರಯಾಣ ಮಾಡಬೇಕೆಂದರೆ 50 ರೂಪಾಯಿ ಆಗಲಿ 100 ರೂಪಾಯಿ ಆಗಲಿ ಕೊಡಬೇಕು. ಆಮೇಲೆ ಇನ್ನೊಂದು ಬೆಂಗಳೂರು. 1500 ಕೋಟಿ ರೂಪಾಯಿಗಳಲ್ಲಿ ಸಾಮೂಹಿಕ ತ್ವರಿತ ಸಾರಿಗೆ ವ್ಯವಸ್ಥೆ ಮಾಡಬೇಕೆಂದು ಕಾಂಗ್ರೆಸ್ ಸರ್ಕಾರ ಹೇಳಿದ್ದನ್ನು ತಾವು ಅನುಷ್ಠಾನಕ್ಕೆ ತರಬೇಕೆಂದಿದ್ದೀರಿ. ಜಯನಗರದಿಂದ ರಾಜಾಜಿನಗರದವರೆಗೆ 1500 ಕೋಟಿ ರೂಪಾಯಿ ಖರ್ಚು ಮಾಡಿ ಫಾಸ್ಟ್ ಟ್ರ್ಯಾಕ್ ರಸ್ತೆ ಮಾಡುವುದು. 4000 ಕೋಟಿ ರೂಪಾಯಿ ಕ್ಷಿಪ್ರ ಸಾರಿಗೆ ವ್ಯವಸ್ಥೆ. ಬೆಂಗಳೂರಿನ ಯಾವುದೇ ಜನರಿಗೆ ಕೇಳಿ, ಈಗ ಇದು ಬೆಳೆದಿರುವುದು ಸಾಕು ಎಂದು ಹೇಳುತ್ತಾರೆ. ಬಿ.ಡಿ.ಎ. ರದ್ದು ಮಾಡಬೇಕು. ಬೆಂಗಳೂರು ಬೆಳೆಸುವುದು ಬೇಡ. ಇರುವ ಜನರಾದರೂ ನೆಮ್ಮದಿಯಾಗಿರಲಿ. ಬೆಂಗಳೂರು ಜನರು ನೆಮ್ಮದಿಯಿಂದ ಇರಬೇಕು ಎಂದು ತಮಗೆ ಆಸೆ ಇದ್ದರೆ ನಗರೀಕರಣ ಮೊದಲು ನಿಲ್ಲಿಸಬೇಕು. ಇಂಗಾಲದ ಮೊನಾಕ್ಸೈಡ್ ಕುಡಿಯುವುದು ಸಾಕು. ಇನ್ನು ಮುಂದೆ ಕುಡಿದರೆ ಬಹಳ ಕಷ್ಟ. ಈಗಾಗಲೇ ಬೆಂಗಳೂರು ನಗರದ ಜನರಿಗೆ ಕುಡಿಯುವ ನೀರು ಸಾಕಾಗುವುದಿಲ್ಲ. ಇದರ ಬಗ್ಗೆ ಆಲೋಚನೆ ಮಾಡಬೇಕು. ಕಾವೇರಿ 4ನೇ ಯೋಜನೆ, 5ನೇ ಯೋಜನೆ, 6ನೇ ಯೋಜನೆ ಮತ್ತು 7ನೇ ಯೋಜನೆ ಆಯಿತು. ಈಗ ಕಾವೇರ ನೀರೆಲ್ಲಾ ಕುಡಿಯುವುದಕ್ಕೆ ಪೂರ್ತಿ ಆಗಬೇಕು. ಕೈಗಾರಿಕಾ ವಿಕೇಂದ್ರಿಕರಣ ನೀವು ಎಲ್ಲಾ ಕಡೆ ಮಾಡಬೇಕು. ತಾಲ್ಲೂಕಿನಿಂದ ಹಿಡಿದು ಹೋಬಳಿ ಹೆಡ್‌ಕ್ವಾರ್ಟರ್‌ವರೆಗೆ ವಿಕೇಂದ್ರಿಕರಣ ವ್ಯವಸ್ಥೆ ಮಾಡಬೇಕಉ. ಬಿ.ಡಿ.ಎ. ರದ್ದು ಮಾಡಬೇಕು. ಅಲ್ಲಿರುವವರೆಲ್ಲಾ ಬಿಳಿ ಆನೆಗಳು. ಎಲ್ಲಾ ಭ್ರಷ್ಟಾಚಾರದಿಂದ ತುಂಬಿರುವವರು. ತಾವು ಸಮೀಕ್ಷೆ ಮಾಡಿದರೆ ಬಹಳ ಜನರನ್ನು ಜೈಲಿಗೆ ಹಾಕಬಹುದು. ಬಹಳ ಜನ ಸಿಗುತ್ತಾರೆ. ಏನೂ ಕಡಿಮೆ ಇಲ್ಲ.

ಕಾಡಿನಲ್ಲಿರುವ ಒಬ್ಬ ವೀರಪ್ಪನ್ ಹುಡುಕುತ್ತೀರಿ. ನಾಡಿನಲ್ಲಿರತಕ್ಕ ವೀರಪ್ಪನ್‌ಗಳು ಎಷ್ಟು ಜನರಿದ್ದಾರೆ. ಬಿ.ಡಿ.ಎ.ನಲ್ಲಿ ಬೇಕಾದಷ್ಟು ಜನ ವೀರಪ್ಪನ್‌ಗಳು ಇರುತ್ತಾರೆ. ಅವರನ್ನು ಹಿಡಿದು ಹಾಕಿದರೆ ಬೇಕಾದಷ್ಟು ಜನ ಸಿಗುತ್ತಾರೆ. ಅವರನ್ನು ಹಿಡಿದು ಹಾಕಬೇಕಾದರೆ ನಾವು ಸರಿಯಾಗಿರಬೇಕು. ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ನಾವು ಶಾಸಕರು ಏನು ಮಾತನಾಡುತ್ತೇವೆ, ಅವರು ಆಡಳಿತ ಪಕ್ಷ ಇರಬಹುದು ವಿರೋಧ ಪಕ್ಷ

ಇರಬಹುದು ನಾವು ಮೊದಲು ಆರ್ಥಿಕವಾಗಿ ಒಂದು ಶಿಸ್ತನ್ನು ಅಳವಡಿಸಿಕೊಳ್ಳಬೇಕು. ರಾಜ್ಯಕ್ಕೆ ಮಾರ್ಗದರ್ಶನ ಮಾಡಬೇಕಾದರೆ ಆಡಳಿತ ಪಕ್ಷದಲ್ಲಿರುವವರು ವಿರೋಧ ಪಕ್ಷದಲ್ಲಿರುವವರು ಶಿಸ್ತನ್ನು ಅಳವಡಿಸಿಕೊಳ್ಳಬೇಕು. ಸಭಾಧ್ಯಕ್ಷರ ಮೂಲಕ ನಾನು ತಮ್ಮ ಗಮನಕ್ಕೆ ತರುತ್ತೇನೆ, ಕಾನೂನು ಮಂತ್ರಿಗಳಾದ ನಾಣಯ್ಯನವರು ಇದರ ಬಗ್ಗೆ ದಯವಿಟ್ಟು ಯೋಚನೆ ಮಾಡಬೇಕು. ನಾವು ನ್ಯಾಯಾಲಯದ ಮೂಲಕ ಎಲ್ಲಾ ಸದಸ್ಯರೂ ನಮ್ಮ ಆಸ್ತಿಗಳನ್ನು ಘೋಷರ್ಣ ಮಾಡಿಕೊಂಡರೆ ರಾಜಕಾರಣಿಗಳ ಬಗ್ಗೆ ಕೀಳು ಭಾವನೆ ಇರತಕ್ಕ ಸಮಾಜದಲ್ಲಿ ಒಂದು ಉತ್ತಮವಾದ ಮಾರ್ಗದರ್ಶನವನ್ನು ಮಾಡುವುದರ ಮೂಲಕ ಒಂದು ರಾಜಕೀಯ ಸತ್‌ಸಂಪ್ರದಾಯವನ್ನು ಬೆಳೆಸಿದರೆ ಬಹಳ ಗಂಭೀರವಾದ ಶಾಸನ ಸಭೆಯಾಗಿ ಬೆಳೆಯುತ್ತದೆ. ಅದು ಆಡಳಿತ ಪಕ್ಷ ಆಗಬಹುದು, ವಿರೋಧ ಪಕ್ಷ ಆಗಬಹುದು, ಬೆಳೆಯಬಹುದು ಎಂದು ನನ್ನ ಆಸೆ. ಇದರ ಬಗ್ಗೆ ಸಭಾಧ್ಯಕ್ಷರು ಯೋಚನೆ ಮಾಡಬಹುದು. ಕಾನೂನು ಮಂತ್ರಿಗಳನ್ನು ಕೇಳಬಹುದು. ಸದಸ್ಯರ ಅಭಿಪ್ರಾಯವನ್ನು ಅಳವಡಿಸಿಕೊಳ್ಳಬಹುದು. ಇದು ನನ್ನ ವೈಯಕ್ತಿಕ ಅಭಿಪ್ರಾಯ ಇದು. ಏಕೆಂದರೆ ಆರ್ಥಿಕತೆಯ ಬಗ್ಗೆ ರಾಜ್ಯದ ಆರ್ಥಿಕತೆಯ ಬಗ್ಗೆ ನಾವು ಬಹಳ ಗಂಭೀರವಾಗಿ ಮಾತನಾಡಬೇಕಾಗುತ್ತದೆ. ನಾವು ಒಂದು ನೀತಿ ನಿಯಮಗಳ ಆಧಾರದ ಮೇಲೆ ಹೋಗುವುದು ಬಹಳ ಒಳ್ಳೆಯದು.

ಆಮೇಲೆ ಕರ್ನಾಟಕ ಹಿಂದುಳಿದ ವರ್ಗಗಳಿಗೆ ಬಹಳ ಆಲೋಚನೆ ಮಾಡಿದ್ದೇನೆ ಎಂದು ಹೇಳಿದ್ದಾರೆ. ಇವತ್ತು ಹಿಂದುಳಿದ ವರ್ಗಗಳ ಮೀಸಲಾತಿ ಬಗ್ಗೆ ಬಹಳ ದೊಡ್ಡ ದೊಡ್ಡ ಭಾಷಣಗಳು ಬಹಳ ಜನರನ್ನು ಅಸ್ಪೃಶ್ಯತೆ, ಅಸಮಾನತೆ ಇರತಕ್ಕ ಜನರನ್ನು ನಾವು ಮೇಲಕ್ಕೆ ಎತ್ತುತ್ತೇವೆ ಅಂತ ಬರೀ ಭಾಷಣಗಳೇ ಎಲ್ಲವೂ. ಗಾಂಧೀಜಿಯವರ ಫೋಟೋವನ್ನು ಪೂಜೆ ಮಾಡುತ್ತೇನೆ. ಅಂಬೇಡ್ಕರ್ ರವರನ್ನು ನೆನೆದುಕೊಳ್ಳುತ್ತೇನೆ. ಬಹಳ ಗಂಭೀರವಾಗಿ ಯೋಚನೆ ಮಾಡುತ್ತೇವೆ. ಉದಾಹರಣೆಗೆ ಒಂದು ಯೋಚನೆ ಮಾಡೋಣ. ಇಡೀ ಕರ್ನಾಟಕದಲ್ಲಿ ಪಂಚಾಯಿತಿಯಲ್ಲಿ ಇರತಕ್ಕ ಜಾತಿಯ ಹೆಸರಿನಿಂದ ಸಮಾಜದಿಂದ ದೂರ ಇಟ್ಟುಕೊಂಡಿರತಕ್ಕವರು ಹೇಸಿಗೆಯನ್ನು ಗುಡಿಸಿ ಇಡೀ ಹಳ್ಳಿಯ 5 ಸಾವಿರ 6 ಸಾವಿರ ಜನರ ಆರೋಗ್ಯವನ್ನು ಕಾಪಾಡತಕ್ಕ ಒಂದು ಪಂಚಾಯಿತಿಯ ನೌಕರರಿಗೆ ನಾವು 200250 ರೂ.ಗಳ ಸಂಬಳವನ್ನು ಕೊಟ್ಟು, ಇಡೀ ಗ್ರಾಮದಲ್ಲಿ ನೈರ್ಮಲ್ಲೀಕರಣವನ್ನು ಕಾಪಾಡತಕ್ಕ ಮಹಾನ್ ವ್ಯಕ್ತಿ ಎಲ್ಲರಿಗಿಂತ 10 ವರ್ಷ ಮೊದಲೇ ಸಾವನ್ನು ಪಡೆದುಕೊಳ್ಳುತ್ತಿದ್ದಾನೆ. ನಾವು ಮೀಸಲಾತಿ ಮೂಲಕ ಅಸ್ಪೃಶ್ಯತೆ ನೋವಿನಲ್ಲಿರತಕ್ಕ, ಅಸಮಾನತೆಯ ನೋವಿನಲ್ಲಿರತಕ್ಕ ಜನರನ್ನು ಮೇಲಕ್ಕೆ ಎತ್ತುತ್ತೇವೆಂದು ಬರಿ ಭಾಷಣದ ಮೂಲಕ ಏನೂ ಪ್ರಯೋಜನ ಇಲ್ಲ. ದಯವಿಟ್ಟು ಮಾನವೀಯತೆ, ಅನುಕಂಪ ತಮಗೆ ಏನಾದರೂ ಇದ್ದರೆ, ತಮ್ಮ ಸರ್ಕಾರಕ್ಕೆ ಇದ್ದರೆ, ಪಂಚಾಯಿತಿಯಲ್ಲಿ ಕಸ ಗುಡಿಸತಕ್ಕ ಅವರ ಮಕ್ಕಳಿಗೆ ಆತನ ಹೆಂಡತಿಗೆ ಒಂದು ಭವಿಷ್ಯ

ನಿಧಿಯನ್ನು ಸೃಷ್ಟಿ ಮಾಡುವುದೋ, ಇಲ್ಲ, ಅವನ ಮುಂದಿನ ಪೀಳಿಗೆಗೆ ಉತ್ತಮ ವ್ಯವಸ್ಥೆಯನ್ನು ಸೃಷ್ಟಿ ಮಾಡುವುದೋ ಮಾಡಿ. ನಮ್ಮ ಊರಿನಲ್ಲಿ 300 ರೂ.ಗೆ ಕಸ ಗುಡಿಸತಕ್ಕ ಆಂಡ ಅಂತ ಹೇಳಿ ಒಬ್ಬಳು ಇದ್ದಾಳೆ. ಇವತ್ತು ಗ್ರಾಮಗಳಲ್ಲಿ ಕಸ ಗುಡಿಸತಕ್ಕಂತಹವರನ್ನು ಯಾರೂ ಮುಟ್ಟಿಸಿಕೊಳ್ಳುವುದಿಲ್ಲ. ಅದೆಲ್ಲಾ ವಾಸ್ತವಿಕ ವಿಚಾರ. ನೇರವಾಗಿ ಮಾತನಾಡೋಣ. ಎಲ್ಲರೂ ನಾವು ಅವನನ್ನು ದೂರ ಇರು ಎಂದು ಹೇಳುತ್ತೇವೆ. ಅವನಿಗೆ ಟಿ.ಬಿ.ಬಂದಿತ್ತು. ಯಾರು ನೋಡುತ್ತಿದ್ದಾರೆ? ನಮ್ಮ ಊರಿನಲ್ಲಿ 56 ಸಾವಿರ ಜನಸಂಖ್ಯೆ ಇರಬಹುದು. ಯಾರು ನೋಡುತ್ತಾರೆ ಅವನನ್ನು? ದಯವಿಟ್ಟು ನಾವು ಭಾಷಣಗಳನ್ನು ನಿಲ್ಲಿಸಬೇಕು. ಏನಾದರೂ ಮಾಡಬೇಕು ಎಂದು ಇದ್ದರೆ ಅವನಿಗೆ ಮಾಡಿ. ಆಮೇಲೆ ನಾವು ಇಷ್ಟೊಂದು ಜನಸಂಖ್ಯೆ. ಆ ಜನಸಂಖ್ಯೆ ನಿಯಂತ್ರಣದ ಬಗ್ಗೆ ಏನೂ ಇಲ್ಲ. ಸುಮ್ಮನೆ ಕುಟುಂಬ ಕಲ್ಯಾಣ ಎಂದು ಹೇಳುತ್ತೇವೆ. ಒಂದು ರಾಜ್ಯ ಅಂದರೆ ಏನು ಎಂಬುದರ ಕಲ್ಪನೆ ನಮಗೆ ಬರಬೇಕು. ಎಷ್ಟು ಜನರಿಗೆ ವಸತಿಯಾಗಬಹುದು, ಎಷ್ಟು ಜನರಿಗೆ ಇಲ್ಲಿ ಊಟ ಸಿಗಬಹುದು, ಎಷ್ಟು ಜನರಿಗೆ ಉದ್ಯೋಗ ಸಿಗಬಹುದು, ಎಷ್ಟು ಜಮೀನನ್ನು ನಾವು ಉಳಿಸಿಕೊಳ್ಳಬಹುದು, ನಾವು ಕೃಷಿ ಉತ್ಪಾದನೆ ಮಾಡತಕ್ಕ ಕೃಷಿ ಜಮೀನನ್ನು ಎಷ್ಟು ಮಟ್ಟದಲ್ಲಿ ನಾವು ಹಾಳು ಮಾಡುತ್ತಿದ್ದೀರಿ. ಒಂದು ಕಲ್ಪನೆ ಇರಬೇಕು ನಮಗೆ. ಇವತ್ತು ನಿರುದ್ಯೋಗ ಸಮಸ್ಯೆ. ಯಾವುದೇ ಉದ್ಯೋಗವನ್ನು ಸೃಷ್ಟಿ ಮಾಡದೇ ಇರತಕ್ಕ ಶಿಕ್ಷಣ ಇಲ್ಲ. ಬರೀ ಬಿ.ಎಸ್ಸಿ, ಬಿ.ಎ. ಓದಿ ಮನೆಯಲ್ಲಿದ್ದಾರೆ. ಶಾಸನ ಸಭೆ ಶುರುವಾದ ತಕ್ಷಣ 100.ಟೆಂಟ್‌ಗಳನ್ನು ಹಾಕಿಕೊಳ್ಳುತ್ತಾರೆ. ಚಳುವಳಿ ಮಾಡುತ್ತಾರೆ. ಅವರಿಗೆ ಉದ್ಯೋಗವನ್ನು ಕೊಡುವುದಕ್ಕಾಗುವುದಿಲ್ಲ. ಒಂದು ನಾವು ಆಲೋಚನೆ ಮಾಡಬೇಕು ಒಂದು ಮಗುವಿಗೆ ಆಪರೇಷನ್ ಮಾಡಿಸಿಕೊಂಡರೆ ಕನಿಷ್ಠ ಉದ್ಯೋಗದ ಭರವಸೆ ಕೊಡತಕ್ಕಂತಹ ಕೆಲವು ಕಾನೂನನ್ನು ಮಾಡುವುದು. ಕೂಲಿ ಮಾಡತಕ್ಕ ಒಬ್ಬ ಮನುಷ್ಯ ಒಂದೇ ಮಗುವಿಗೆ ಆಪರೇಷನ್ ಮಾಡಿಸಿಕೊಂಡರೆ ಆ ಮಗುವಿಗೆ ಭವಿಷ್ಯ ನಿಧಿ ಸೃಷ್ಟಿ ಮಾಡಬಹುದು. 10 ಸಾವಿರ ಫಿಕ್ಸೆಡ್ ಡಿಪಾಸಿಟ್‌ನಲ್ಲಿ ಇಟ್ಟರೆ, ಅವನಿಗೆ ಇನ್ನೊಂದು ಮಗು ಹುಟ್ಟುವುದು ಕಡಿಮೆಯಾಗುತ್ತದೆ. ಅದರ ಮೂಲಕ ಆ ಮಗು ಮೆಜಾರಿಟಿ ಬರುವಷ್ಟರಲ್ಲಿ ಆ ದುಡ್ಡು ಒಂದೂವರೆ ಲಕ್ಷ ರೂ.ಆಗುತ್ತದೆ. ಆದರಿಂದ ಅವನ ಬದುಕು ಉತ್ತಮವಾಗುತ್ತದೆ. ಒಂದು ಬದಲಾವಣೆ ಮಾಡಬೇಕು. ಒಂದು ಜನ ಅಭಿಪ್ರಾಯದ ಮೇಲೆ ಸರ್ಕಾರ ಬಂದರೆ ಇಡೀ ಜನರ ಸಮಸ್ಯೆಯ ಬಗ್ಗೆ ಆಲೋಚನೆ ಮಾಡಿದರೆ, ಆರ್ಥಿಕ ಆಲೋಚನೆ ಮಾಡಿಕೊಂಡು ಬದುಕಿನ ಆಲೋಚನೆ ಮಾಡತಕ್ಕ ವಿಚಾರ ತಮ್ಮ ಬಜೆಟ್‌ನಲ್ಲಿರಬೇಕು. ಒಂದು ಚಳುವಳಿ ರೂಪದಲ್ಲಿ ನಡೆಯಬೇಕು; ಸರ್ಕಾರ. ಆಡಳಿತ ಪಕ್ಷ ಎಂದರೆ ನಾವು ಮಾಡುವುದೆಲ್ಲಾ ಸರಿ, ವಿರೋಧ ಪಕ್ಷ ಅಂದರೆ ನಾವು ಮಾಡುವುದನ್ನೆಲ್ಲಾ ವಿರೋಧ ಮಾಡುವುದು. ಆಡಳಿತ ಪಕ್ಷ, ವಿರೋಧ ಪಕ್ಷಗಳ ಘರ್ಷಣೆಯಿಂದ ಜನ ಜೀವನ ಉತ್ತಮವಾಗಿರಬೇಕು. ಅದು ರಾಜಕಾರಣ. ರಾಜಕೀಯ ಮಹಾತ್ಮ ಗಾಂಧೀಯವರು ಹೇಳಿದ ಹಾಗೆ ಸಮಾಜ ಸೇವೆಯೇ ಸಂಘ ಸಂಸ್ಥೆಗಳು.

ರಾಜಕೀಯ ಎಂದರೆ ಒಳ ಓಟು ಹಾಕುವುದು, ಇಲ್ಲ ಜಾತಿ ದ್ವೇಷ ಮಾಡುವುದು, ಗುಂಪುಗಾರಿಕೆ ಮಾಡುವುದು, ಪಕ್ಷ ಕಟ್ಟುವುದು. ಪಕ್ಷ ಅಂದರೆ ಏನು? ಪಕ್ಷಗಳು ಒಬ್ಬರಿಗೊಬ್ಬರು ಕಾಂಪಿಟೇಷನ್ ಮಾಡಬೇಕು. ನಾನು 80 ಟನ್ ಕಬ್ಬು ಬೆಳೆಯುತ್ತೇನೆ ಅಂದರೆ ನೀವು 90 ಟನ್ ಕಬ್ಬು ಬೆಳೆಯುತ್ತೇನೆ ಎಂದು ಹೇಳಬೇಕು. ನಾನು 6 ತಪ್ಪು ಮಾಡಿದರೆ, ನಾನು 12 ತಪ್ಪು ಮಾಡುತ್ತೇನೆಂದು ಹೇಳುವುದಲ್ಲ. ಆದ್ದರಿಂದ ದಯವಿಟ್ಟು ಚಳುವಳಿ ರೂಪದಲ್ಲಿ ಸರ್ಕಾರ ನಡೆಸಬೇಕು. ಏಕೆಂದರೆ ತಾವು ಹೆಚ್ಚು ಗ್ರಾಮೀಣ ಪ್ರದೇಶದ ಬಗ್ಗೆ ಆಲೋಚನೆ ಮಾಡಿ ಮಾತನಾಡಿದ್ದೀರಿ ತಾವು. 100ಕ್ಕೆ 70 ರೂ. ತಾವು ಯೋಚನೆಗಳನ್ನು ಮಾಡಿ ಅದರ ಮೂಲಕ ಬಹಳ ಗಂಭೀರವಾಗಿ ಕ್ರಮ ಕೈಗೊಳ್ಳುತ್ತೇವೆಂದು ಹೇಳಿ. ಆಮೇಲೆ ರೇಷ್ಮೆ ಉದ್ಯೋಗಕ್ಕೆ ಬಂದರೆ ತಾವು ಏನು ಮಾತನ್ನು ಹೇಳಿದ್ದೀರಿ. ಹೊಸ ರೇಷ್ಮೆ ತಳಿಯನ್ನು ಒದಗಿಸುವುದು. ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ಹಂತ ಹಂತವಾಗಿ ಕಂಪ್ಯೂಟರೀಕರಣ ಮಾಡುವುದು ಎಂದು. ಕೃಷಿ ಬಗ್ಗೆ ಯೋಚನೆ ಮಾಡಬೇಕು. ಒಂದು ಸಾರಿ ಯಾರೋ ಒಬ್ಬ ಜಪಾನಿಗೆ ಹೋಗಿ ಬಂದ. ತನ್ನ ಸ್ನೇಹಿತ ಕಾಳೇ-ಗೌಡ ಎಂದು. ಅವರು ಜಪಾನಿಗೆ ಹೋಗಿ ಬಂದಿದ್ದಾರೆ. ಅರ್ಧ ಎಕರೆ ರೇಷ್ಮೆ ಬೆಳೆಯತಕ್ಕ ಒಬ್ಬ ರೈತ ಕಾರಿನಲ್ಲಿ ತಿರುಗುತ್ತಾನೆ. ಆದರೆ, ಇಲ್ಲಿ ಎಲ್ಲಾ ರಾಜ್ಯದಲ್ಲಿ ಗುಲಾಮಗಿರಿ ವ್ಯವಸ್ಥೆಯಲ್ಲಿ ರಕ್ತ ಇಲ್ಲದೆ ತಿರುಗುತ್ತಾನೆ. ಹೋಗಲಿ ರೇಷ್ಮೆ ಬೆಳೆಯುವವರಲ್ಲಿ ಯಾರನ್ನಾದರೂ ಕರೆದುಕೊಂಡು ಬಂದು ನೋಡಿ. ಅವರ ಕಣ್ಣಲ್ಲಿ ರಕ್ತ. ಆದರೆ ಅವರಿಂದ ರಾಜ್ಯದ ರಾಷ್ಟ್ರದ ಬೊಕ್ಕಸಕ್ಕೆ ಎಷ್ಟೊಂದು ಹಣ ಬರುತ್ತದೆ ಎಂಬುದನ್ನು ಕಲ್ಪನೆ ಮಾಡುವುದಕ್ಕೆ ಸಾಧ್ಯವೇ? ಇಡೀ ಕೃಷಿ ಕ್ಷೇತ್ರದಲ್ಲಿ ಅತ್ಯಂತ ಕಷ್ಟ ಕ್ಲಿಷ್ಟವಾದ ಬೇಸಾಯ ರೇಷ್ಮೆ ಬೆಳೆ. ರೇಷ್ಮೆ ಬೆಳೆಯುವ ಪ್ರದೇಶದ ಬಹಳ ಜನ ಇಲ್ಲೇ ಇದ್ದೇವೆ ನಾವು. ಆದರೆ ರೇಷ್ಮೆ ಬೆಳೆಯುವ ಯಾರದ್ದೇ ಮನೆಗೆ ಹೋಗಿ, ಅಥವಾ ಯಾವುದೇ ಊರಿಗೆ ಹೋಗಲಿ, ಹೋಗುತ್ತಿದ್ದ ಹಾಗೆ ವಾಸನೆ. ಯಾರದ್ದೇ ಮನೆಗೆ ಹೋಗಿ ಆತನ ಕಣ್ಣಲ್ಲಿ ರಕ್ತ ಇಲ್ಲ. ಅವರ ಹೆಂಡತಿಗೆ ರಕ್ತ ಇಲ್ಲ. ಅವರ ಮಕ್ಕಳಿಗೆ ರಕ್ತ ಇಲ್ಲ. ಆದರೆ ನಾವು ಇವತ್ತು ಸುಂದರವಾದ ಸೀರೆ ಉಟ್ಟುಕೊಂಡಿದ್ದೇವೆ. ಇಡೀ ಸಾರಿಗೆ ವ್ಯವಸ್ಥೆ ಮೇಲೆ ನಾವು ನಿಂತಿದ್ದೇವೆ. ಇವತ್ತು ಬಹಳ ದೊಡ್ಡ ಉದ್ಯೋಗವನ್ನು ಸೃಷ್ಟಿ ಮಾಡಿಕೊಂಡು ಬರುತ್ತದೆ. ಆದರೆ ಅವನ ಜೀವನಕ್ಕೆ ಕನಿಷ್ಠ ಬೆಲೆಯನ್ನು ನಿಗದಿ ಮಾಡದೇ ಇರತಕ್ಕ ಕಾನೂನು. 1 ಸಾವಿರ ಇದ್ದಂತಹ ಟೈರು 10 ಸಾವಿರ ರೂ. ಆಗಿದೆ. 200 ರೂ. ಇದ್ದ ಸೀರೆ 5000 ರೂಪಾಯಿ ಆದರೆ ರೇಷ್ಮೆ ಬೆಳೆಯುವವನು ಈ ದೇಶಕ್ಕೆ ಉತ್ಪಾದನೆ ಮಾಡಿ, ತನ್ನ ಜೀವನವನ್ನು ತ್ಯಾಗ ಮಾಡತಕ್ಕ ಒಬ್ಬ ವ್ಯಕ್ತಿಯನ್ನು ನಾವು 70 ರೂ, ಒಂದು ಸಾರಿ, 70 ರೂ.ಎರಡು ಸಾರಿ, 70 ರೂ. ಮೂರು ಸಾರಿ ಎಂದು ಕೂಗತಕ್ಕಂತಹ ಮಾರ್ಕೆಟ್ ವ್ಯವಸ್ಥೆಯಲ್ಲಿ ನಾವು ಇಟ್ಟಿದ್ದೇವೆ. ನಾವು ಎಲ್ಲರೂ ಕೃಷಿ ಕ್ಷೇತ್ರದಲ್ಲಿ ಗ್ರಾಮೀಣ ಪ್ರದೇಶದಲ್ಲಿರತಕ್ಕವರ ಬಗ್ಗೆ ಮಾತನಾಡುತ್ತೇವೆ. ಬರೀ ರೈತರು, ರೈತರು. ಯಾವ ಪಕ್ಷದವರನ್ನು ಕೇಳಿ ರೈತರು. ಸುದ್ದಿ ಮಾತನಾಡುತ್ತಾರೆ. ನಮ್ಮ ಹಳ್ಳಿ ಕಡೆ ಒಂದು ಗಾದೆ

ಹೇಳುತ್ತಾರೆ. ಗಾಣ ಆಡಿಸುವವನು ಅಯ್ಯೋ ಅಂದರೆ ಮಗುವಿನ ನೆತ್ತಿ ತಣ್ಣಗಾಗುತ್ತಾ ಎಂದು. ಸುಮ್ಮನೆ ಹರಳೆಣ್ಣೆ ಆಡಿಸುವವರು ಎಲ್ಲರೂ ಅಯ್ಯೋ ಅಯ್ಯೋ ಅಂತಿರುತ್ತಾರೆ. ಅಲ್ಲೊಂದು ಮಗು ಬಿಸಿಲಿನಲ್ಲಿ ಕುಳಿತಿರುತ್ತದೆ. ಅದಕ್ಕೆ ಎಣ್ಣೆ ಬಿದ್ದರೆ ತಲೆ ತಣ್ಣಗಾಗುವುದು. ಸುಮ್ಮನೆ ಎಲ್ಲರೂ ಅಯ್ಯೋ ಅಯ್ಯೋ, ರೈತರು, ರೈತರು, ಏಕೆ ಮಾತನಾಡುತ್ತಾರೋ ನನಗೆ ಗೊತ್ತಿಲ್ಲ. ಕಡೆಗೆ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಬಡವರಿಗಾಗಿ ಆರೋಗ್ಯ ನಿಧಿ. 100 ಕೋಟಿ ಇಡುವುದರ ಮೂಲಕ ಅವರಿಗೆ ಆರೋಗ್ಯದ ಬಗ್ಗೆ ಹೃದ್ರೋಗ, ಕ್ಯಾನ್ಸರ್ ನ್ಯೂರೋ ಸರ್ಜಿಕಲ್ ಕಾಯಿಲೆಗಳು ಬಂದರೆ, ಅದು 100 ಕೋಟಿಯಿಂದ 150 ಕೋಟಿ ರೂ. ಇಡುವ ವ್ಯವಸ್ಥೆ ಮಾಡಿದರೆ ತಾವು ಏನು ಯೋಚನೆ ಹಾಕಿಕೊಂಡಿದ್ದೀರಿ, ಅದು ತುಂಬಾ ಒಳ್ಳೆಯ ಯೋಜನೆ, ತಾವು ಇದನ್ನು ಬಹಳ ಜವಾಬ್ದಾರಿಯುತವಾಗಿ ಮಾಡಬೇಕು ಎಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇನ್ನೊಂದು ತಾವು ಹೇಳಿದ್ದೀರಿ. ಕೃಷಿ ವಲಯದಲ್ಲಿ ಉತ್ಪಾದನೆ ಕಡಿಮೆಯಾಗುವ ಬಗ್ಗೆ. ಇದಕ್ಕೆ ಕಾರಣ ರಾಸಾಯನಿಕ ಗೊಬ್ಬರದ ಬೆಲೆ ಜಾಸ್ತಿಯಾಯಿತು. ಈಗ ನಾವು ಯಾವುದೇ ಕೈಗಾರಿಕೆಗಳಿಗೆ ಸಕಲು ನಿಧಿ ಎಂದು ತೆಗೆಯುತ್ತೇವೆ. ಡಿಪ್ರೀಸಿಯೇಶನ್ ಫಂಡ್ ಎಂದು ಕರೆಯುತ್ತೇವೆ. ಆದರೆ ಭೂಮಿಗೆ ಯಾವುದೇ ತರಹದ ಸವಕಲು ನಿಧಿಯನ್ನು ತೆಗೆದಿಲ್ಲ ನಾವು. ಭೂಮಿ ಸವೆಯುವುದಿಲ್ಲ ಎಂದು ನೀವು ತಿಳಿದುಕೊಂಡಿದ್ದೀರಿ. ಈಗ ರಾಯಚೂರು ಜಿಲ್ಲೆಯಲ್ಲಿ ಎಷ್ಟೋ ಸಾವಿರಾರು ಎಕರೆ ಜಮೀನು ಚೌಳು ಲೆಕ್ಕಕ್ಕೆ ಹೋಗಿದೆ. ಇದಕ್ಕೆ ಕಾರಣ ರಾಸಾಯನಿಕ ಅತಿ ಹೆಚ್ಚು ಉಪಯೋಗಿಸತಕ್ಕ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಇವತ್ತು ಒಂದು ಎಕರೆಯಲ್ಲಿ ಭತ್ತ ಬೆಳೆಯಬೇಕಾದರೆ 12 ಮೂಟೆ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸತಕ್ಕ ಪರಿಸ್ಥಿತಿ ರಾಯಚೂರಿನಲ್ಲಿದೆ. ನಮ್ಮ ಕೃಷಿ ಇಲಾಖೆ ಎಂದು ಇದೆ. ಆ ಕೃಷಿ ಇಲಾಖೆ ಅದು ಏತಕ್ಕೆ ಇದೆಯೋ ನಮಗೆ ಗೊತ್ತಿಲ್ಲ. ಕೃಷಿ ಇಲಾಖೆಯಲ್ಲಿ ಏನು ಮಾಡುತ್ತಾರೆಂದು ನಮ್ಮ ಕೃಷಿ ಮಂತ್ರಿಗೆ ಗೊತ್ತಿರಬಹುದು. ಕೃಷಿ ಇಲಾಖೆಯವರು ಏನು ಮಾತನಾಡುವುದು. ಸುಮ್ಮನೆ ಏನೋ ಗ್ರಾಮ ಸೇವಕ ಎಂದು ಇರುತ್ತಾನೆ. ಒಂದು ಹಳ್ಳಿಯಲ್ಲಿರುತ್ತಾನೆ. ಯಾವ್ಯಾವದೋ ಸಬ್ಸಿಡಿ ಕೊಡುತ್ತೀರಿ; ಆ ಸಬ್ಸಿಡಿ ಯಾವಾಗ ಬರುತ್ತದೆ ಎಂಬುದು ರೈತರಿಗೆ ಗೊತ್ತಿರುವುದಿಲ್ಲ. ಕಳ್ಳತನ ಮಾಡಿಕೊಂಡು ಭ್ರಷ್ಟಾಚಾರದ ಮೂಲಕ ಏನೋ ಮಾಡಿಕೊಂಡಿದ್ದಾರೆ. ಭೂಮಿಯನ್ನು ಉಳಿಸಿಕೊಳ್ಳತಕ್ಕ ಪ್ರಯತ್ನದಲ್ಲಿ ಏನೂ ಮಾಡುತ್ತಿಲ್ಲ. ಈಗಾಗಲೇ ಬೇರೆ ಎಲ್ಲಾ ಸೂಪರ್ ಪೊಟಾಷ್ ಮೇಲೆ ಹೆಚ್ಚು ಹಣ ಆಗಿದೆ. ನೈಟ್ರೋಜನ್ ಬೆಲೆ ಕಡಿಮೆಯಾಗಿದೆ. ನಾನು 350400 ರೂಪಾಯಿಗೆ ಕೊಟ್ಟರೆ ಒಂದು ಮೂಟೆ ಬರುತ್ತದೆ. ಅದು 2 ಮೂಟೆ ಬರುತ್ತದೆ ಎಂದು ಹೇಳಿ, ಹೆಚ್ಚು ನೈಟ್ರೋಜನ್ ಅನ್ನು ಉಪಯೋಗಿಸಿ ಇಡೀ ಭೂಮಿಯ ಸತ್ವವನ್ನು ಹಾಳು ಮಾಡತಕ್ಕಂತಹ ಪರಿಸ್ಥಿತಿ ಬಂದಿದೆ. ಕೃಷಿ ಇಲಾಖೆಗೆ ಅತ್ಯಂತ ಗಂಭೀರವಾಗಿ ಆ ದಿಕ್ಕಿನಲ್ಲಿ ಕೆಲಸ ಮಾಡುತ್ತಿಲ್ಲ. ಉತ್ಪಾದನೆಯಲ್ಲಾ ಪೂರ್ಣವಾಗಿ ನಿಂತು ಹೋಗತಕ್ಕಂತಹ ಪರಿಸ್ಥಿತಿ ಸೃಷ್ಟಿಯಾಗುತ್ತದೆ.

ಯಾವ ಮಟ್ಟಕೆಡಕ ಹೋಗಿದೆ ಎಂದರೆ ನಾನೇ ನೋಡಿದ್ದೇನೆ. 21, 22, 23, 24 ತಿಂಗಳಲ್ಲಿ ಕಬ್ಬು ಹೊಡೆಯುತ್ತಾರೆ. 21 ತಿಂಗಳು ಕಬ್ಬು ಹೊಡೆಯುತ್ತಾರೆ. 21 ತಿಂಗಳಲ್ಲಿ ಕಬ್ಬು ಹೊಡೆಯುವಂತಹ ಪರಿಸ್ಥಿತಿ ಎಲ್ಲಿಯಾದರೂ ಸೃಷ್ಟಿಯಾಗಿದೆಯೇ? ಕೃಷಿ ಮಟ್ಟಿಗೆ ಯಾವ ಮಟ್ಟದ ಆಲೋಚನೆ ಇರಬೇಕು ಅಂದರೆ ಆ ಜಿಲ್ಲೆಯ ಜಿಲ್ಲಾಧಿಕಾರಿಗಳು ಆ ಸಂಬಂಧಪಟ್ಟ ಕೃಷಿ ಅಧಿಕಾರಿಗಳು ರೈತರ ನೋವನ್ನು ಎಷ್ಟರ ಮಟ್ಟಿಗೆ ಸ್ಪಂದಿಸಬಹುದೆಂಬುದನ್ನು ತಾವು ಆಲೋಚನೆ ಮಾಡಬಹುದು. ಆಮೇಲೆ ಅಸಂಘಟಿತ ಕಾರ್ಮಿಕರಿಗೆ, ಅಸಂಘಟಿತ ಕಾರ್ಮಿಕರನ್ನು ನೀವು ಯಾರ್‍ಯಾರನ್ನು ಗುರುತು ಮಾಡಿದ್ದೀರಿ, ಅದು ಗೊತ್ತಿಲ್ಲ. ಬಹಳ ನೋವಿನಿಂದ ಹೇಳತಕ್ಕದ್ದು ಕರ್ನಾಟಕದ ಅಸಂಘಟಿತ ಕಾರ್ಮಿಕರು ಅಂದರೆ ಗಣಿ ಕೆಲಸ ಮಾಡುವವರು, ಕಲ್ಲು ಕೆಲಸ ಮಾಡುವವರು; ನೀವು ನೋಡಿ ಯಾವುದೇ ಹಳ್ಳಿಯಲ್ಲಿ ಕೈಕಾಲು ಇಲ್ಲ, ಬೆರಳು ಇಲ್ಲ ಅವರದೇ ಒಂದು ವರ್ಗ. ಸಂತೇಪೇಟೆಯಲ್ಲಿ ಮೂಟೆ ಹೊರುತ್ತಾರೆ; ಅವರ ಬೆನ್ನು ನೋಡಿದರೆ, ನಮಗೆ ಸಂಕಟ ಬರುತ್ತದೆ. ಇದರ ಮೇಲೆ ಕೃಷಿ ಕಾರ್ಮಿಕರು. ಇಡೀ ರಾಜ್ಯದಲ್ಲಿ ಸ್ಲಮ್ ಏರಿಯಾಗಳಲ್ಲಿರತಕ್ಕ ಪಟ್ಟಣ ಪ್ರದೇಶಗಳಲ್ಲಿರತಕ್ಕ ಕಾರ್ಮಿಕರು ಅವರ ಬಗ್ಗೆ ಏನಾದರೂ ಮಾಡತಕ್ಕದ್ದು ಅತಿ ಅವಶ್ಯಕ. ಅವರಿಗೆ ಯಾವುದೇ ಬ್ಯಾಂಕ್ ಫೆಸಿಲಿಟೀಸ್ ಇಲ್ಲ. ಅವರಿಗೆ ನೀವು ಯಾವ ಸಾಲ ಕೊಡುತ್ತೀರಿ? ಅವರ ಬದುಕಿಗೆ ಕೃಷಿ ಕಾರ್ಮಿಕರು ಅಸಂಘಟಿತ ಕಾರ್ಮಿಕರು ಜೀವನ ಹೇಗೆ ಮಾಡುತ್ತಾರೆಂದರೆ ನೂರಕ್ಕೆ ಹತ್ತು ರೂಪಾಯಿ ಬಡ್ಡಿ, ಕೊಟ್ಟು ಹಣ ಪಡೆಯತಕ್ಕ ಒಂದು ವ್ಯವಸ್ಥೆಯನ್ನು ಸೃಷ್ಟಿ ಮಾಡಿದ್ದೇವೆ. ಅವರಿಗೆ ಯಾವುದೇ ಒಂದು ವಿಧವಾದ ಭವಿಷ್ಯ ನಿಧಿಯನ್ನು ಸೃಷ್ಟಿ ಮಾಡುವ ದಿಕ್ಕಿನಲ್ಲಿ ನಾವು ಯಾರೂ ಕೆಲಸ ಮಾಡಲಿಲ್ಲ. ಅವರ ಜೀವನಕ್ಕೆ ನಿಜವಾದ ಭವಿಷ್ಯ ನಿಧಿಯನ್ನು ಸೃಷ್ಟಿ ಮಾಡಿದರೆ ಸರಿ. ಅಸಂಘಟಿತ ಕಾರ್ಮಿಕರ ಬಗ್ಗೆ ತಾವು ಸುಮ್ಮನೆ ಬಜೆಟ್‌ನಲ್ಲಿ ಭಾಷಣದಲ್ಲಿ ಇವರಿಗೆ ಏನು ಮಾಡಿದ್ದೇವೆಂದು ಹೇಳುವುದಿಲ್ಲ. ಅವರಿಗೆ ಭವಿಷ್ಯ ನಿಧಿಯನ್ನು ಸೃಷ್ಟಿ ಮಾಡುವ ಮೂಲಕ ಬೇಕಾದರೆ ಪ್ರಯೋಗಾತ್ಮಕವಾಗಿ ನಾನು ಇನ್ನು ಕೆಲವು ಸಲಹೆಗಳನ್ನು ಕೊಡುತ್ತೇನೆ; ಬಹಳ ಮಾಡಬಹುದು. ಬಹಳ ದೊಡ್ಡ ಕೆಲಸವನ್ನು ಮಾಡಬಹುದು, ಅದೇನೂ ಮಹಾ ಕೆಲಸವಲ್ಲ. ಅವರಿಗೆ ಭವಿಷ್ಯ ನಿಧಿಯನ್ನು ಸೃಷ್ಟಿ ಮಾಡಿ. ಮೂಟೆ ಹೊರುವ ಜನಗಳಿಗೆ. ಜಿಲ್ಲಾಧಿಕಾರಿಗಳು ಇನ್ನೊಬ್ಬರು ಸರ್ಕಾರಿ ನೌಕರರು ನಿವೃತ್ತಿಯಾದಾಗ ನಾವೇನು ಅವರಿಗೆ ನಿವೃತ್ತಿ ವೇತನವೇನು ಜೀವನಕ್ಕೆ ಯಾವ ರೀತಿ ಸಂಬಳ ಕೊಡುತ್ತೇವೆ ಆ ರೀತಿಯಲ್ಲಿ ಇವರಿಗೂ 25 ಸಾವಿರ 50 ಸಾವಿರ 75 ಸಾವಿರ ಸಿಗತಕ್ಕ ಭವಿಷ್ಯ ನಿಧಿಯನ್ನು ಸೃಷ್ಟಿ ಮಾಡತಕ್ಕ ಕಾರ್ಯಕ್ರಮವನ್ನು ಸರ್ಕಾರ ಮಾಡಬೇಕು. ಏಕೆಂದರೆ ಇನ್ನೊಂದು ಇದೆ, ಆಡಳಿತ ವಿಕೇಂದ್ರಿಕರಣ ವ್ಯವಸ್ಥೆ ಮಾಡಿದ್ದೇವೆ. ಪ್ರಾಕೃತಿಕ ಸಂಪತ್ತು ಆಯಾಯ ಪಂಚಾಯಿತಿಗಳ ಸ್ವತ್ತಲ್ಲ. ವಿಕೇಂದ್ರಿಕರಣ ಕಲ್ಪನೆಯಿಲ್ಲದೆ ಸುಮ್ಮನೆ ಮಾತನಾಡುತ್ತೇವೆ. ಪ್ರಾಕೃತಿಕ ಸಂಪತ್ತು ಆ ಪಂಚಾಯಿತಿಯ ಸ್ವತ್ತಲ್ಲ. ನಮ್ಮಲ್ಲಿ ಚಿನಕುರಳಿಯಲ್ಲಿ ಬಂಡೆ ಇದೆ; ಕ್ಯಾತನಹಳ್ಳಿಯಲ್ಲಿ ಬಂಡೆ ಇದೆ. ಅದರ ಆದಾಯ ಪಂಚಾಯಿತಿಯದು ಅಲ್ಲ. ಅದು ಜಿಯಾಲಜಿಕಲ್

ಡಿಪಾರ್ಟ್‌ಮೆಂಟ್‌ಗೆ ಹೋಗುತ್ತದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಸಂಬಂಧಪಟ್ಟಿದ್ದು. ಆ ಆದಾಯ ಅಲ್ಲಿಗೆ ಹೋಗುತ್ತದೆ. ಅದರ ಆದಾಯ ಪಂಚಾಯಿತಿಗೆ ಎಲ್ಲಿ ಬರುತ್ತದೆ? ಪಂಚಾಯಿತಿಗೆ ಅವರು 1 ಲಕ್ಷ ಕೊಟ್ಟರು; ನೀವು 1.25 ಲಕ್ಷ ಕೊಟ್ಟಿರಿ. ಅದು ಕರೆಂಟ್ ಚಾರ್ಜ್ ಏನು ಬರುತ್ತದೆ ಅದಕ್ಕೆ ಸಾಕಾಗುವುದಿಲ್ಲ. ಪಂಚಾಯಿತಿಗೆ ಏನು ಬರುತ್ತದೆಂದರೆ ಮೋರಿಗಳಲ್ಲಿ ಹೋಗುವ ಕಸ ಆ ಪಂಚಾಯಿತಿಗೆ ಸೇರುತ್ತದೆ. ಅಲ್ಲಿ ಏನಾದರೂ ಎರಡು ನಾಯಿಗಳು ಸತ್ತರೆ ಅದು ಪಂಚಾಯಿತಿಗೆ ಸೇರುತ್ತದೆ. ನಾಯಿಗಳು ಸತ್ತಿವೆಯೆಂದು ಗೊತ್ತಾದ ಮೇಲೆ ಅವುಗಳನ್ನು ತೆಗೆದುಕೊಂಡು ಹೋಗಿ ಗೊಬ್ಬರ ಮಾಡುವುದು. ವಿಕೇಂದ್ರೀಕರಣದಲ್ಲಿ ಪಂಚಾಯಿತಿಗೆ ಸತ್ತು ಹೋದ ನಾಯಿ ಸತ್ತು ಹೋದ ಎಮ್ಮೆ ಸೇರುತ್ತದೆ. ಅಲ್ಲಿರತಕ್ಕ ಬಂಡೆಗಳು ಡಿಪಾರ್ಟ್‌ಮೆಂಟ್‌ಗೆ ಸೇರುತ್ತದೆ. ಇಡೀ ರಾಜ್ಯದಲ್ಲಿ ಏನು ಬೇಕಾದರೂ ಆಗಲಿ, ಪ್ರಧಾನಿಯಾಗಲಿ, ಸಂತೋಷ; ರಾಷ್ಟ್ರಪತಿಯಾಗಲಿ ಸಂತೋಷ. ಆದರೆ ಪಂಚಾಯಿತಿ ಛೇರ್ಮನ್ ಆಗಬಾರದು. ಇಡೀ ರಾಜ್ಯದಲ್ಲಿ ಹೈಯೆಸ್ಟ್ ಬೈಗಳ ತಿನ್ನುವವನು ಪಂಚಾಯಿತಿಯ ಛೇರ್ಮನ್. ನಾವೆಲ್ಲಾ ಶಾಸಕರು ನಿಧಾನದಲ್ಲಿ ಬೈಸಿಕೊಳ್ಳುತ್ತೇವೆ. ಅವನಷ್ಟು ಬೈಗಳ ತಿನ್ನುವುದಿಲ್ಲ. ಬಹಳ ಪಾಪ ಮಾಡಿ ಈ ರಾಜ್ಯದಲ್ಲಿ ಹುಟ್ಟಿದವನು ಈ ಪಂಚಾಯಿತಿಯ ಛೇರ್ಮನ್‌ಯೆಂದು ನಾನು ತಿಳಿದುಕೊಂಡಿದ್ದೇನೆ. ಲೈಟು ಬಿಲ್ ಕಟ್ಟುವುದಕ್ಕಾಗುವುದಿಲ್ಲ. ಸುಮ್ಮನೆ ಸುಮ್ಮನೆ ವಿಕೇಂದ್ರಿಕರಣದ ವ್ಯವಸ್ಥೆಯ ಬಗ್ಗೆ ನಾವು ಮಾಡುತ್ತಿದ್ದೇವೆ. ನಮ್ಮ ಊರಿನಲ್ಲಿ ಒಬ್ಬ ಕುಬೇರ ಎಂದು ಹೆಸರು ಇಟ್ಟುಕೊಂಡಿದ್ದ. ಹೆಸರಿನಲ್ಲಿ ಏನೋ ಕುಬೇರ, ಬಹಳ ದುಡ್ಡು ಇಟ್ಟುಕೊಂಡಿದ್ದಾನೆ ಎಂದು ನೋಡಿದರೆ ಅವನಲ್ಲಿ ಬೀಡಿಗೆ ಕಾಸಿಲ್ಲ. ಹಾಗಾಯಿತು ಪಂಚಾಯಿತಿಯ ಪರಿಸ್ಥಿತಿ. ಬರಿ ಆರ್ಥಿಕ ವಿಕೇಂದ್ರಿಕರಣ ಭಾಷಣಗಳನ್ನು ಮಾಡುತ್ತೇವೆ. ಆದರೆ ಬದಲಾವಣೆಗಳು ಮಾತ್ರ ಏನೂ ಆಗಲಿಲ್ಲ. ನಾವು ಇಲ್ಲಿ ಅಧಿಕಾರಕ್ಕೋಸ್ಕರ ಶಾಸಕರಿಗೆ ಅಧಿಕಾರ ವಿಕೇಂದ್ರಿಕರಣದ ಮೂಲಕ ಸಮಾಜದಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ. ಮೀಸಲಾತಿ ಎನ್ನುವುದು ಅಸಮಾನತೆಯ ಜಾತಿ ಪದ್ಧತಿಯ ಕ್ರೈಟೇರಿಯಾ ಅಷ್ಟೆ. ಅಸಮಾನತೆಯ ಜಾತಿ ಪದ್ಧತಿ ಇರುವುದರಿಂದ ಒಂದು ಮೀಸಲಾತಿ ನಿಯಮವನ್ನು ಅಳವಡಿಸಿಕೊಂಡಿದ್ದೇವೆ. ಅದನ್ನೇ ಒಂದು ದೊಡ್ಡ ರಾಜಕೀಯ ಮಾಡುವುದು. ಆದರೆ ಆರ್ಥಿಕ ವಿಕೇಂದ್ರಿಕರಣ ಆಗದಿದ್ದರೆ ಯಾವುದೇ ಗ್ರಾಮಗಳ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ನಮ್ಮ ಭಾವನವರು ಬಂದಿದ್ದರು. ಅವರೆ ಒಂದು ಮಾತು ಹೇಳಿದರು. ಕೇರಳದಲ್ಲಿ ಯಾವ ಮಟ್ಟಕ್ಕೆ ಇದೆಯೆಂದರೆ ಮೂರ್‍ನಾಲ್ಕು ಗ್ರಾಮಗಳು ಇದ್ದರೆ, ಆ ನಾಲ್ಕು ಗ್ರಾಮಗಳಿಗೆ ಒಂದು ಪಂಚಾಯಿತಿ ಅಥವಾ ಮುನಿಸಿಪಾಲಿಟಿ ಟೈಪು ಇರುತ್ತದೆ. 13 ಸಾವಿರ ಜನಸಂಖ್ಯೆಗೆ ಒಬ್ಬ ಎಂ.ಎಲ್.ಎ. ಅವನ ಕೆಲಸ ಏನೆಂದರೆ ಆ ಪಂಚಾಯಿತಿಗೆ ಒಂದು ವರ್ಷಕ್ಕೆ ಎಷ್ಟು ಬೇಕೋ ಅಷ್ಟು ದುಡ್ಡು ಕೊಡುವುದು ಅಷ್ಟೆ. ಅಲ್ಲಿ ಎಂ.ಎಲ್.ಎ. ಆದವನು ರಾಜ್ಯಕ್ಕೆ ಬೇಕಾದ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಹೊಸ ಹೊಸ ಯೋಜನೆಗಳು ಅದರ ಬಗ್ಗೆ ಯೋಚನೆ ಮಾಡುತ್ತಾನೆ. ನಮ್ಮಲ್ಲಿ

ಎಂ.ಎಲ್.ಎ.ಆದವನು ಒಂದು ಊರಿಗೆ ಹೋದರೆ ನಮ್ಮ ಊರಿನಲ್ಲಿ ನಲ್ಲಿ ಇಲ್ಲ, ಬಚ್ಚಲು ಕಟ್ಟಿಕೊಂಡಿದೆಯೆಂದು ಹೇಳುತ್ತಾರೆ. ಇದನ್ನು ತಾವು ದಯವಿಟ್ಟು ಬಹಳ ಗಂಭೀರವಾಗಿ ಯೋಚನೆ ಮಾಡಬೇಕು. ನಾವೆಲ್ಲರೂ ಮಾತನಾಡುತ್ತಿರುತ್ತೇವೆ ಹಳ್ಳಿ ಹಳ್ಳಿ ಎಂದು. ಇನ್ನೊಂದು ಗಾದೆ ಮಾತು ಹೇಳುತ್ತಾರೆ. ಆ ಗಾದೆ ಬಹಳ ಚೆನ್ನಾಗಿರುತ್ತದೆ. ಗಾದೆ ಮಾತು ಏನೆಂದರೆ ಸೋಗಿದೇವರು ಬರಲಿ, ನಿಮಗೆ ದೇವರು ಬರುವುದು ಏಕೆಂದರೆ ನನ್ನ ಗಂಡನ್ನೇ ಕರೆದುಕೊಂಡು ತಿನ್ನೋಕೆ ಎಂದು. ಈಗ ಎಲ್ಲರಿಗೂ ದೇವರು ಬರುವುದು ಏತಕ್ಕೆಂದರೆ ಹಳ್ಳಿಯವರೆಲ್ಲಾ ಕೆರೆದುಕೊಂಡು ತಿನ್ನುವುದಕ್ಕೆ. ಆ ಮಟ್ಟಕ್ಕೆ ಹೋಗಿದೆ. ಅದು ಏನೋ ಯುವಕರಿಗೆ ಕ್ರೀಡಾ ಸಮುಚ್ಚಯ ಭವನ ಕಟ್ಟಿಸುವುದು. ಯುವಜನ ಸೇವೆ ಮತ್ತು ಕ್ರೀಡೆ ಇದಕ್ಕೆ ನಾವು ಬಹಳ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಕ್ರೀಡಾ ಕೂಟಗಳನ್ನು ನಡೆಸುತ್ತಿದ್ದೇವೆ. ಆದರೆ ಕ್ರೀಡಾ ರಂಗದ ಬಗ್ಗೆ ತಾವು ಬಹಳ ಗಂಭೀರವಾಗಿ ಆಲೋಚನೆ ಮಾಡಿ. ಕ್ರೀಡೆಯನ್ನು ಅಷ್ಟು ನಿಕೃಷ್ಟವಾಗಿ ತಿರಸ್ಕಾರ ಮಾಡಿದ್ದೇವೆ. ಒಂದು ಕ್ರೀಡೆಯ ಮೂಲಕ ಇಡೀ ಪ್ರಪಂಚದಲ್ಲಿಯೇ ಕ್ರೀಡಾ ರಂಗದ ಬಗ್ಗೆ ಹೇಳಿರತಕ್ಕ ಒಬ್ಬ ಮಹಾನ್ ವ್ಯಕ್ತಿ ಕುಬರ್ತಿ. ಯಾವ ಉದ್ದೇಶಕ್ಕೆ ಕ್ರೀಡೆ ಬೆಳೆಯಬೇಕೆಂಬುದನ್ನು ತಾವು ದಯವಿಟ್ಟು ಯೋಚನೆ ಮಾಡಿ. ವರ್ಲ್ಡ್ ವಾರ್‌ಗಳು ನಡೆದು ಸ್ಟ್ರಗಲ್ ಮಾಡಿದ ಕುಬರ್ತಿ. ಫ್ರಾನ್ಸ್‌ನವನು. ಗಾಂಧೀಜಿಯವರು ಏನು ಹೇಳಿದರು, ಬಸವಣ್ಣನವರು ಏನು ಹೇಳಿದರು, ಅಂಬೇಡ್ಕರ್ ಏನು ಹೇಳಿದರು ಆ ಎಲ್ಲಾ ವಿಚಾರಗಳನ್ನು ಕ್ರೀಡಾ ರಂಗದಲ್ಲಿ ತುಂಬಿ, ಅವನು ಬಂದು ಮಾತು ಹೇಳಿದ್ದಾನೆ. ಏತಕ್ಕೋಸ್ಕರ ಕ್ರೀಡಾ ರಂಗವನ್ನು ಪ್ರಪಂಚದಲ್ಲಿ ಅನುಷ್ಠಾನಕ್ಕೆ ತರುತ್ತಿದ್ದೇವೆಂದು ಹೇಳಿದರೆ ಇಡೀ ಪ್ರಪಂಚದ ಮಾನವ ಜನಾಂಗದ ಸಮಾನತೆಗೆ ಮಾನವ ಭ್ರಾತೃತ್ವಕ್ಕೆ ಮಾನವ ಜನಾಂಗಿ ಜ್ಞಾನಾಭಿವೃದ್ಧಿಗೆ ಮುಂದಿನ ಮಕ್ಕಳು ಆರೋಗ್ಯವಾಗಿ ಹುಟ್ಟಲಿ ಎಂದು ಹೇಳಿ ಪಠ್ಯ ಪುಸ್ತಕಗಳು ಎಷ್ಟು ಕಡ್ಡಾಯವೋ, ಕ್ರೀಡೆಯೂ ಅಷ್ಟೆ ಕಡ್ಡಾಯವಾಗಿರಬೇಕು ಎಂಬುದೇ ನನ್ನ ಆಸೆ. ನಾವೀಗ ಭಾರತದಲ್ಲಿ 90 ಕೋಟಿಗಿಂತ ಜಾಸ್ತಿ ಇದ್ದೇವೆ. ನಾವು ಮಿಲ್ಕಾಸಿಂಗ್ ಮತ್ತು ಪಿ.ಟಿ.ಉಷಾ ಬಿಟ್ಟರೆ ಇನ್ನೂ 4ನೇ ಪ್ಲೇಸಿಗೆ ನಾವು ಯಾರೂ ತಲುಪಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ :- ಹಿಟ್ಲರ್‌ನ ಪಬ್ಲಿಕ್ ಸ್ಕೂಲ್ ಮತ್ತು ಪ್ಲೇ ಗ್ರೌಂಡ್‌ನಲ್ಲಿ ಮಹಾನ್ ನಾಯಕರು ತಯಾರಾಗಿದ್ದಾರೆ. ಅವರ ಮಾತಿಗೆ ಪೂರಕವಾಗಿ ನಾನು ಇದನ್ನೆ ಹೇಳುತ್ತಿದ್ದೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಈಗ ನಾವು ಪಿ.ಟಿ.ಟೀಚರ್ಸ್‌ಗಳನ್ನು, ಸಿಪಿಎಡ್ ಮಾಡಿಕೊಂಡಿರುವವರಿಗೆ ಕೊಡುತ್ತಿದ್ದೇವೆ. ಪಂಚಾಯಿತಿನವರು ಶೇಕಡ 50 ಪರ್ಸೆಂಟ್ ಹಣ ಭರಿಸುವುದು; ಸರ್ಕಾರ 50 ಪರ್ಸೆಂಟ್ ಹಣ ಭರಿಸುವುದು. ಈ ರೀತಿ ಮಾಡಿ

ಕ್ರೀಡೆಯನ್ನು ಅಭಿವೃದ್ಧಿಗೊಳಿಸಬೇಕು. ಕ್ರೀಡೆಯ ಮೂಲಕ ಪೋಲೀಸ್ ಸ್ಟೇಷನ್‌ಗಳ ಸಂಖ್ಯೆ ಕಡಿಮೆಯಾಗುತ್ತದೆ. ಆಸ್ಪತ್ರೆಗಳ ಸಂಖ್ಯೆ ಕಡಿಮೆಯಾಗುತ್ತದೆ. ನ್ಯಾಯಾಲಯಗಳ ಸಂಖ್ಯೆ ಕಡಿಮೆಯಾಗುತ್ತದೆ. ಉತ್ತಮವಾದ ಸಮಾಜ ಸೃಷ್ಟಿಯಾಗುತ್ತದೆ. ಜಾತಿ ಪದ್ಧತಿ ನಿರ್ನಾಮವಾಗುತ್ತದೆ. ಧರ್ಮ ಧರ್ಮಗಳ ಘರ್ಷಣೆಯಲ್ಲಿ ಎರಡೂ ದೇಶಗಳಿಗೆ ಯುದ್ಧವಾಗುವ ಪರಿಸ್ಥಿತಿ ಇತ್ತು. ಅದು ಕೋರಿಯಾ ಇರಬೇಕು. ಸೌತ್ ಅಂಡ್ ನಾರ್ತ್ ಕೋರಿಯಾ. ಈಗ ಕ್ರೀಡೆಯಿಂದ ಎರಡೂ ದೇಶಗಳು ಒಂದಾಗಿವೆ. ಮ್ಯಾಚ್‌ಗೋಸ್ಕರ ಯುದ್ಧವನ್ನು ನಿಲ್ಲಿಸಿ ಒಂದುಗೂಡಿರತಕ್ಕ ಪರಿಸ್ಥಿತಿ ಬೇಕಾದಷ್ಟು ಆಗಿದೆ. ನಿಗ್ರೋ ಜನಾಂಗ ಪ್ರಪಂಚದಲ್ಲಿ ಗುಲಾಮಗಿರಿಯ ಒಂದು ವರ್ಗ. ಆ ನೀಗ್ರೋ ಜನಾಂಗ ಇಡೀ ಪ್ರಪಂಚದಲ್ಲಿಯೇ ಒಂದು ಸಮಾನತೆಯ ಸಮಾಜವನ್ನು ಸೃಷ್ಟಿ ಮಾಡಿ ಇವತ್ತು ಪ್ರಪಂಚದಲ್ಲಿಯೇ ಶ್ರೇಷ್ಠ ವ್ಯಕ್ತಿಗಳಾಗಿದ್ದಾರೆ. ಏಕೆಂದರೆ ಅವರನ್ನು ಎಷ್ಟೋಂದು ಗುಲಾಮರನ್ನಾಗಿ ಕಾಣುತ್ತಿದ್ದೆವು. ಆದರೆ ಅವರಿಗೆ ಇವತ್ತು ಕ್ರೀಡಾ ರಂಗದ ಮೂಲಕ ಸಮಾನತೆ ಬಂದಿದೆ. ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಪಠ್ಯ ಪುಸ್ತಕ ಎಷ್ಟು ಕಡ್ಡಾಯವೋ ಅಷ್ಟೆ ಕಡ್ಡಾಯವಾಗಬೇಕು ಕ್ರೀಡೆ. ನಮ್ಮಲ್ಲಿ ಪಿ.ಟಿ. ಟೀಚರ್ಸ್ ಅಂದರೆ ವಿಷಲ್ ಊದುವುದು ಹೀಗೆ ಮಾಡಿಸುವುದು ಹಾಗೆ ಮಾಡಿಸುವುದು ಆಮೇಲೆ ಮಕ್ಕಳನ್ನು ಮನೆಗೆ ಕಳುಹಿಸುವುದು. ಇದನ್ನು ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕು. ಜನ ಶಕ್ತಿಯುತವಾಗಿ, ಜನ ಆರೋಗ್ಯಯುತವಾಗಿ, ಜನ ಪ್ರಜ್ಞಾವಂತರಾಗಿದ್ದರೆ ಉತ್ತಮ ರಾಜ್ಯವನ್ನು ಕಟ್ಟಬಹುದು, ಉತ್ತಮವಾದ ವ್ಯವಸ್ಥೆಯನ್ನು ಸೃಷ್ಟಿ ಮಾಡಬಹುದು. ಆದ್ದರಿಂದ ತಾವು ದಯವಿಟ್ಟು ಇದನ್ನು ಬಹಳ ಗಂಭೀರವಾಗಿ ಯೋಚನೆ ಮಾಡಬೇಕು. ಒಂದು ಚಳುವಳಿಯ ರೂಪದಲ್ಲಿ ಇದನ್ನು ಮಾಡಬೇಕು. ತಾವು ಹಣಕಾಸು ವ್ಯವಸ್ಥೆ ಮಾಡುವುದರಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸುವುದರಲ್ಲಿ ವಿಫಲರಾಗಿದ್ದೀರಿ. ನಂತರ ಮಾನ್ಯ ಮುಖ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದರು. ಎಲ್ಲಾ ಟ್ಯಾಕ್ಸ್ ಅಧಿಕಾರಿಗಳು ಬಹಳ ಗಂಭೀರವಾಗಿ ಕೆಲಸ ಮಾಡಿದರೆ ಅವರಿಗೆ ಏನೋ ಇನ್‌ಸೆಂಟಿವ್ ಕೊಡುತ್ತೇನೆಂದು ಹೇಳಿದರು. ಟ್ಯಾಕ್ಸ್ ಆಫೀಸರ್ಸ್ ನಮಗೇ ಇನ್‌ಸೆಂಟೀವ್ಸ್ ಕೊಡಬಹುದು ಆ ಮಟ್ಟದಲ್ಲಿದ್ದಾರೆ. ಭ್ರಷ್ಟಾಚಾರದ ಬಗ್ಗೆ ಭಾಷಣ ಮಾಡುತ್ತೇವೆ. ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಬೇಕಾದರೆ ಬಹಳ ದೊಡ್ಡ ಜವಾಬ್ದಾರಿ ಎಲ್ಲರ ಮೇಲೂ ಇದೆ. ಕಾಯಿಲೆಗೆ ವಾಸಿಯಾಗದಿರತಕ್ಕ ಏಯ್ಡ್ಸ್‌ಗೆ ಔಷಧಿ ಕಂಡು ಹಿಡಿದಿದ್ದಾರೆ. ಅದೇನೂ ಬಹಳ ದೊಡ್ಡ ಸುದ್ದಿಯೇನೂ ಅಲ್ಲ. ನಮ್ಮ ಕೈಯಲ್ಲಿ ಆಗದೇ ಇರುವ ಕೆಲಸ ಯಾವುದೂ ಇಲ್ಲ. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಂಭೀರವಾಗಿ ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು :- ನೀವು ಅಧಿಕಾರಿಗಳನ್ನು ಕಂಬಕ್ಕೆ ಕಟ್ಟಿ ಹಾಕಬೇಕೆಂದು ಹೇಳಿದ್ದೀರಲ್ಲಾ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಹೌದು. ನಾನು ಎಂ.ಎಲ್.ಎ.ಗಳನ್ನೂ ಕಟ್ಟಿ ಹಾಕಿ, ಅಧಿಕಾರಿಗಳನ್ನೂ ಕಟ್ಟಿ ಹಾಕಿ ಎಂದು ಹೇಳಿದ್ದೇನೆ. ಬರೇ ಅಧಿಕಾರಿಗಳನ್ನು ಮಾತ್ರ ಕಟ್ಟಿ ಹಾಕಿ ಎಂದು ನಾನು ಹೇಳಿಲ್ಲ. ಯಾವನು ಕಳ್ಳತನ ಮಾಡುತ್ತಾನೆ, ಆ ಎಂ.ಎಲ್.ಎ.ರವರನ್ನೂ ಕಂಬಕ್ಕೆ ಕಟ್ಟಿ ಹಾಕಿ, ಯಾವ ಅಧಿಕಾರಿ ಕಳ್ಳತನ ಮಾಡುತ್ತಾನೆ, ಅವನನ್ನೂ ಕಂಬಕ್ಕೆ ಕಟ್ಟಿ ಹಾಕಿ ಎಂದು ನಾನಂತೂ ನನ್ನ ಕ್ಷೇತ್ರದಲ್ಲಿ ಬಹಿರಂಗವಾಗಿ ಹೇಳಿದ್ದೇನೆ.

ಶ್ರೀ ಜಿ.ಬಿ.ಶಿವಕುಮಾರ್ :- ಹಾಗೆ ಮಾಡಿದರೆ ಬೀದಿಯಲ್ಲಿ ಜನರೇ ಸಿಗದ ಹಾಗೆ ಆಗುತ್ತದೆ. ಎಲ್ಲರನ್ನೂ ಕಟ್ಟಿ ಹಾಕಿದರೆ 99 ಪರ್ಸೆಂಟ್ ಬೀದಿಯಲ್ಲಿ ಜನರೇ ಇಲ್ಲದ ಹಾಗೆ ಆಗುತ್ತದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಇಲ್ಲಿ ಸಿಗುವುದಿಲ್ಲ, ಹಳ್ಳಿಯಲ್ಲಿ ಸಿಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್ :- ಮಾನ್ಯ ಸದಸ್ಯರು ಹೇಳಿದಂತೆ ಭ್ರಷ್ಟಾಚಾರ ನಿರ್ಮೂಲನಕ್ಕೆ ಸಂಬಂಧಿಸಿದಂತೆ ಇತಿಹಾಸದಲ್ಲಿ ಒಂದು ಸಣ್ಣ ಕಥೆ ಇದೆ. ತಾವು ಕೇಳುವುದಾದರೆ ಹೇಳುತ್ತೇನೆ. ಪರ್ಷಿಯಾದ ರಾಜ ಫೆಡ್ರಿಕ್ ದಿ ಗ್ರೇಟ್‌ಗೆ ಒಂದು ಸಲ ಈ ಸಮಸ್ಯೆ ಬಂದು ಸಾರ್ವಜನಿಕವಾಗಿ ಸಂಗ್ರಹಿಸಿದ ಹಣ ಏಕೆ ಕಡಿಮೆಯಾಗುತ್ತದೆ ಎಂದು ಸಂದೇಹ ಬಂತು. ದೊರೆಯ ಅಸ್ಥಾನದಲ್ಲಿ ಸುಮಾರು 40 ಜನ ಆಸ್ಥಾನಿಕರು ಇದ್ದರಂತೆ. ಅಲ್ಲಿ ಒಬ್ಬ ದೊಡ್ಡ ಮುದುಕ ಚಕ್ರವರ್ತಿಯ ಕೈಗೆ ಕೊಡಿ ಎಂದು ದೊಡ್ಡ ಐಸ್ ಗಡ್ಡೆಯನ್ನು ಕೊಟ್ಟನಂತೆ. ಅದು 40 ಜನರ ಕೈಗೆ ಹಾದು ಕೊನೆಗೆ ಚಕ್ರವರ್ತಿಯ ಕೈಗೆ ಹೋಗುವಷ್ಟರಲ್ಲಿ ತುಂಬಾ ಚಿಕ್ಕದಾಗಿ ಹೋಗಿತ್ತು. ಫೆಡ್ರಿಕ್ ದಿ ಗ್ರೇಟ್‌ಗೆ ಮಾತ್ರ 'ಇದು ಏನು, ಹೇಗೆ ಎಂಬುದು ಅರ್ಥವಾಯಿತು. ಇಲ್ಲಿಯೂ ಎಲ್ಲಾ ಕಡೆಗಳನ್ನು ಹಾದು ಅದು ಕರಗಿಹೋಗುತ್ತದೆ.

ಶ್ರೀ ಚಂದ್ರಕಾಂತ .ಜಿ.ಬೆಲ್ಲದ್ :- ಇದಕ್ಕೆ ಮೊದಲು ಇಚ್ಛಾಶಕ್ತಿ ಇರಬೇಕು. ಇಚ್ಛಾಶಕ್ತಿ ಇದ್ದರೆ ಇದನ್ನು ಹತೋಟಿಗೆ ತರಬಹುದು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಈಗ ಹಾಲಿಗೆ ನೀರು ಹಾಕಿದರೆ ಕ್ಷೀರಮಾಪಕ ಇದೆ. ನನಗೆ ಜ್ವರ ಬಂದರೆ ಥರ್ಮಾಮೀಟರ್ ಇದ್ದರೆ ಎಷ್ಟು ಡಿಗ್ರಿ ಜ್ವರವಿದೆಯೆಂದು ತಿಳಿದುಕೊಳ್ಳಬಹುದು. ಆದರೆ ಈ ಲಂಚ ತೆಗೆದುಕೊಳ್ಳುವವರು, ದುಡ್ಡು ಹೊಡೆಯುವವರನ್ನು ಕಂಡು ಹಿಡಿಯುವ ಮಿಷಿನ್ ಕಂಡು ಹಿಡಿದಿದ್ದರೆ ಸುಲಭವಾಗಿ ಇಷ್ಟು ಹೊತ್ತಿಗೆ ಎಲ್ಲರನ್ನೂ ಹಿಡಿದು ಬಿಸಾಡಬಹುದಾಗಿತ್ತು. ನಾವು ಎಲ್ಲಾ ನದಿಗಳಿಗೂ ಮಹಿಳೆಯರ ಹೆಸರನ್ನೇ ಇಡುತ್ತೇವೆ. ಕಾವೇರಿ ನದಿ, ಗಂಗಾ ನದಿ, ಇತ್ಯಾದಿ. ಯಾವ

ಫೋಟೋಗಳನ್ನು ನೋಡಿದರೂ ಅದು ಲಕ್ಷ್ಮಿ, ಭೂತಾಯಿ ಎಂದು ಬರೀ ಮಹಿಳೆಯರು. ಆದರೆ ಅವರಿಗೆ ಉದ್ಯೋಗವನ್ನು ಮಾತ್ರ ಯಾವ ಮಟ್ಟಕ್ಕೆ ಸೃಷ್ಟಿ ಮಾಡಿದ್ದೀರಿ ಎಂದರೆ, ಯಾವುದೋ ಒಂದರಲ್ಲಿ 30 ಪರ್ಸೆಂಟ್ ಕೊಡುವುದು, ಹೀಗೆ ಮಾಡುವುದರಿಂದ ಏನು ಸಾಧ್ಯ? ಮಹಿಳೆಯರಿಗೆ ಸಮಾನವಾಗಿ ಪುರುಷರು ಎಂದರೆ ಎಲ್ಲಾ ಉದ್ಯೋಗಗಳಲ್ಲೂ ಅವರಿಗೆ ಪ್ರಾಶಸ್ತ್ಯ ಕೊಡಬೇಕು.

ಒಬ್ಬ ಮಾನ್ಯ ಸದಸ್ಯರು :- ಆಮೇಲೆ ನಾವು ಅಡುಗೆ ಮಾಡುವುದಕ್ಕೆ ಹೋಗಬೇಕಾಗುತ್ತದೆ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ :- ಭಾರತ ದೇಶದ ಸಂಸ್ಕೃತಿ ಪ್ರಕಾರ ಮಹಿಳೆ ಎಷ್ಟೇ ಉಚ್ಚ ಸ್ಥಾನದಲ್ಲಿ ಇದ್ದಾಗಲೂ ಕೂಡ ಗಂಡಸರಿಗೆ ಅಡುಗೆ ಮಾಡುವುದಕ್ಕೆ ಹಚ್ಚಿಲ್ಲ ಸ್ವಾಮಿ. ನಮಗೆ ಅಂತಹ ಇತಿಹಾಸ ಇದೆ. ಆ ಮಾತನ್ನು ಹೇಳಬಾರದು ಎಂದು ನಾನು ಹೇಳುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ವ್ಯವಸ್ಥೆ ಬದಲಾವಣೆಯಾದರೆ ನಾವು ಹೋಗಬೇಕಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಆದರೆ ಇಲ್ಲಿಯವರೆಗೆ ಆ ವ್ಯವಸ್ಥೆ ಬದಲಾಗಿಲ್ಲ. ಇವರು ಮಂತ್ರಿಯಾದ ಮೇಲೆ ಗಂಡಸರನ್ನು ಅಡುಗೆಗೆ ತೆಗೆದುಕೊಂಡಿದ್ದೀರೆಂದು ನಾನು ಕೇಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ :- ಮಾನ್ಯ ಖರ್ಗೆಯವರಿಗೆ ಹೇಳಬೇಕೆಂದರೆ ಅಡುಗೆ ವಿಚಾರದಲ್ಲಿ ನಮ್ಮ ಇತಿಹಾಸದಲ್ಲಿ ಹೆಸರು ಮಾಡಿದವರೆಲ್ಲರೂ ಪುರುಷರೇ. ನಳಪಾಕ ಎನ್ನುತ್ತೇವೆ. ನಳ ಬಹಳ ಪ್ರಸಿದ್ಧನಾಗಿದ್ದನಂತೆ. ಹಾಗೆಯೇ ಭೀಮಪಾಕ ಎಂದು ಹೇಳುತ್ತೇವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಈಗ ಪ್ರಪಂಚದಲ್ಲಿ ಬಯೋ ಟೆಕ್ನಾಲಜಿ ಇಂಟ್ರೊಡ್ಯೂಸ್ ಆಗುತ್ತಿದೆ. ಅದು ಇಂಟ್ರೊಡ್ಯೂಸ್ ಆದ ಮೇಲೆ ನಿಮಗೆ ಅಡುಗೆಯ ಕೆಲಸವೇ ಇರುವುದಿಲ್ಲ. ಆಗ ಯಾರೂ ಅಡುಗೇನೆ ಮಾಡುವುದಿಲ್ಲ.

ಶ್ರೀ ಜೆ.ಹೆಚ್.ಪಟೇಲ್ :- ಅಡುಗೆ ಮಾಡುವುದು ಬರೇ ಹೆಂಗಸರು ಎಂದು ತಿಳಿದುಕೊಂಡಿರುವುದು ನಮ್ಮ ದೇಶದಲ್ಲಿ ಬಹಳ ಕಡಿಮೆ ಜನ. ಈ ಅಡುಗೆ ಮಾಡುವವರ

ಸಂಖ್ಯೆ ಇಡೀ ಪ್ರಪಂಚದಲ್ಲಿ ಗಂಡಸರ ಸಂಖ್ಯೆ ಹೆಂಗಸರಿಗಿಂತ ಮೂರು ಪಟ್ಟು ಜಾಸ್ತಿ ಇದೆ. ಯಾವ ಹೋಟೆಲ್ ಹೋಗಿ, ಯಾವ ಏರ್‌ಪೋರ್ಟ್‌ಗೆ ಹೋಗಲಿ, ಅಡುಗೆ ಮಾಡುವ ಗಂಡಸರ ಸಂಖ್ಯೆ ಜಾಸ್ತಿ ಇದೆಯೇ ಹೊರತು ಹೆಂಗಸರು ಬರೀ ಮನೆಯಲ್ಲಿ ಮಕ್ಕಳಿಗೆ, ಗಂಡನಿಗೆ ಮಾಡಿ ಹಾಕಬಹುದು. ಇದರಲ್ಲೂ ಅವರು ಕಚೇರಿಗೆ ಹೋಗುವ ಮಹಿಳೆಯಾದರೆ ಕಷ್ಟವಾಗುತ್ತದೆ. ಕೆಲವು ಸಲ ಗಂಡನೇ ಅಡುಗೆ ಮಾಡಬೇಕಾಗುತ್ತದೆ. ಆದ್ದರಿಂದ ಈ ಹೆಣ್ಣು ಗಂಡಿನ ಸಮಾನತೆ ವಿಷಯದಲ್ಲಿ ಅಡುಗೆಯನ್ನು ತರಬಾರದು

ಶ್ರೀ ವಾಟಾಳ್ ನಾಗರಾಜ್ :- ಇತ್ತೀಚೆಗೆ ಗಂಡಂದಿರೇ ಜಾಸ್ತಿ ಅಡುಗೆ ಮಾಡುವವರು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಆದ್ದರಿಂದ ಮಹಿಳೆಯರಿಗೆ ಉದ್ಯೋಗ ಸೃಷ್ಟಿ ಮಾಡುವ ಬಗ್ಗೆ ನಾವೆಲ್ಲರೂ ಮಾತನಾಡುತ್ತೇವೆ. ಈಗ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಬೆಳೆಸಿ ನಾವು ಉದ್ಯೋಗವನ್ನು ಬಹಳ ಕಡಿಮೆ ಪ್ರಮಾಣದಲ್ಲಿ ಸೃಷ್ಟಿ ಮಾಡಿದ್ದೇವೆ. ಸಹಕಾರಿ ಕ್ಷೇತ್ರದಲ್ಲಿ ಸರ್ಕಾರ ಮನಸ್ಸು ಮಾಡಿ ಮಹಿಳೆಯರಿಗೆ ಸಣ್ಣ ಸಣ್ಣ ಉದ್ಯೋಗ ಮಾಡತಕ್ಕಂಥ ಒಂದು ವಿಚಾರದ ಬಗ್ಗೆ ಆಲೋಚನೆ ಮಾಡಿದರೆ ಒಳ್ಳೆಯದು. ಹಾಗೆ ಮಾಡಿದರೆ ಮಾತ್ರ ಮಹಿಳೆಯರ ಬಗ್ಗೆ ಮಾತನಾಡಿದ್ದಕ್ಕೆ ಏನಾದರೂ ಪ್ರಯೋಜನವಾಗುತ್ತದೆ ಎಂದು ಹೇಳುತ್ತಾ....

ಶ್ರೀ ಜಿ.ಬಿ.ಶಿವಕುಮಾರ್ :- ಯಾವುದೇ ಕ್ಷೇತ್ರವಾಗಿಲ, ಕೈಗಾರಿಕಾ ಕ್ಷೇತ್ರವಾಗಲಿ, ಕಚೇರಿಗಳಲ್ಲಾಗಲಿ ನನ್ನ ಪ್ರಾಮಾಣಿಕವಾದ ಅನಿಸಿಕೆಯೆಂದರೆ ಮಹಿಳೆಯರು ಯಾವುದೇ ಉದ್ಯಮದಲ್ಲಾಗಲೀ, ಪುರಪಷರಿಗಿಂತ ಹೆಚ್ಚು ಆಸಕ್ತಿಯಿಂದ, ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ ಎನ್ನುವುದು ನಿರ್ವಿವಾದ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಬರೇ ಆಸಕ್ತಿಯಿಂದ ಮಾಡುತ್ತಾರೆ ಎನ್ನುವ ಅನುಕಂಪವನ್ನು ಮಾತ್ರ ನಾವು ವ್ಯಕ್ತಪಡಿಸುತ್ತೇವೆ. ನಿಜವಾಗಿಯೂ ಅವರ ಬಗ್ಗೆ ನಾವು ಆಲೋಚನೆ ಮಾಡಬೇಕು. ಏಕೆಂದರೆ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರನ್ನು ಬಹಳ ದುರ್ಬಲವಾಗಿ ನೋಡತಕ್ಕಂಥ ಕೆಲಸ ಆಗಿದೆ.

ಶ್ರೀ ವಾಟಾಳ್ ನಾಗರಾಜ್ :- ಈಗ ಶಾಸನ ಸಭೆ 30 ಪರ್ಸೆಂಟ್ ಮಹಿಳೆಯರು ಬರಬೇಕೆಂದು ಇವರು ಶಿಫಾರಸ್ಸು ಮಾಡಿದ್ದಾರೆ. ಹಾಗೆಂತ ಇಲ್ಲಿ ನಿರ್ಣಯ ಮಾಡಿದ್ದಾರೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಶಿಫಾರಸ್ಸು ಮಾಡಿದ್ದಾರೆ, ಅದು ಇನ್ನೂ ಅನುಷ್ಠಾನಕ್ಕೆ

ಬಂದಿಲ್ಲ. ಇನ್ನು ಐದು ವರ್ಷ ಆದ ಮೇಲೆ ನೋಡೋಣ ಬಿಡಿ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ :- ಆ ಶಿಫಾರಸ್ಸು ಆದರೂ ಈ ಸರ್ಕಾರ ಬಂದ ಮೇಲೆ ಮಾಡಿದೆ ಮಹಿಳೆಯರ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ :- ಒಂದು ನಿರ್ಣಯವಂತೂ ಆಗಿದೆ. ಕೇಂದ್ರ ಸರ್ಕಾರ ಒಪ್ಪಿದೆ ಹೆಚ್ಚು ಕಡಿಮೆ ಇಲ್ಲಿ ಅವರೇ ಇರುತ್ತಾರೆ. ಇಲ್ಲಿ ಈ ಸಭೆಯಲ್ಲಿ ಸುಮಾರು 70 ಜನರು ಬರುತ್ತಾರೆ. ಈಗ ಇರುವ ಮೂರು ಜನರ ಹೊಡೆತವನ್ನೇ ತಡೆದುಕೊಳ್ಳುವುದಕ್ಕೇ ಆಗುತ್ತಿಲ್ಲ. ಇನ್ನು 70 ಜನ ಬಂದರೆ ಪರಿಸ್ಥಿತಿ ಏನು ಎಂಬ ಅಷ್ಟೇ ಯೋಚನೆ. ಅವರು ಬರಲಿ, ಬರುವುದಕ್ಕೆ ನಮ್ಮ ಅಭ್ಯಂತರ ಏನೂ ಇಲ್ಲ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ :- ಹೆಚ್ಚು ಸಂಖ್ಯೆಯಲ್ಲಿ ಇಲ್ಲಿ ಮಹಿಳೆಯರು ಬಂದರೆ ಆಗ ಮಾನ್ಯ ವಾಟಾಳ್ ನಾಗರಾಜ್ ಅವರ ಧ್ವನಿ ಕಡಿಮೆಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ನನ್ನ ಧ್ವನಿ ಏನೂ ಕಡಿಮೆಯಾಗುವುದಿಲ್ಲ. ಆ ಪ್ರಶ್ನೆ ಬೇರೆ ನೀವು ಬರುವುದು ಸಂತೋಷ ಎಂದು ಹೇಳಿದೆ, ಅಷ್ಟೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಆದ್ದರಿಂದ ಈಗ ಮಹಿಳೆಯರ ಬಗ್ಗೆ ಒಂದು ಸಹಕಾರಿ ಕ್ಷೇತ್ರದಲ್ಲಿ ಉದ್ಯೋಗವನ್ನು ಸೃಷ್ಟಿ ಮಾಡಬಹುದು. ಬೇಕಾದಷ್ಟು ಉದ್ಯೋಗ ಒದಗಿಸಬಹುದು. ಇವತ್ತು ಸಂಬಾರ ಪದಾರ್ಥಗಳನ್ನು ಸಹಕಾರ ಕ್ಷೇತ್ರದಲ್ಲಿ ಮಾಡಿಸಬಹುದು. ಗಂಧದ ಕಡ್ಡಿಯಲ್ಲಿ ತಯಾರಿಸಿ, ಅಲ್ಲಿ ಮಾರುಕಟ್ಟೆ ಸೃಷ್ಟಿ ಮಾಡಿದರೆ ಅನುಕೂಲವಾಗುತ್ತದೆ. ಜಿಲ್ಲಾ ಮಟ್ಟದಲ್ಲಿ ಎಂಟು-ಹತ್ತು ಲಕ್ಷ ಜನರು ಬರುತ್ತಾರೆ. ಅಲ್ಲಿ ಸಹಕಾರ ಕ್ಷೇತ್ರದಲ್ಲಿ ಗಂಧದ ಕಡ್ಡಿ ಉದ್ಯೋಗ, ಸಾಂಬಾರ ಪದಾರ್ಥಗಳು, ಬೇರೆ ಬೇರೆ ನೇಯ್ಗೆ ಕೆಲಸ ಇತ್ಯಾದಿ ಕೆಲಸಗಳನ್ನು ಮಾಡಿಸಬಹುದು. ಅಲ್ಲಿ ಅವರಿಗೆ ಟ್ರೈನಿಂಗ್ ಕೊಡುವುದನ್ನು ಮಾಡಬಹುದು. ಮಹಿಳೆಯರಿಗೆ ಒಂದು ಬಿಲ್ಡಿಂಗ್ ಕಟ್ಟುವುದು, ಆಮೇಲೆ ಮಹಿಳಾ ಸಂಘ ಎಂದು ಮಾಡುವುದು, ಮಹಿಳಾ ಸಂಘ ಎಂದರೆ ಯಾವುದಕ್ಕೂ ಪ್ರಯೋಜನವಿಲ್ಲದ ಏನೋ ಸಂಘಟನೆ ಮಾಡುವುದು. ಒಂದು ರಿಪೋರ್ಟನ್ನು ಸರ್ಕಾರಕ್ಕೆ ಕಳುಸಿಬಿಟ್ಟರೆ ಆಯಿತು. ಈ ರೀತಿ ಆಗಬಾರದು. ಆದರೆ ನಿಜವಾಗಿಯೂ ಉದ್ಯೋಗವನ್ನು ಸೃಷ್ಟಿ ಮಾಡತಕ್ಕಂಥ ಆಲೋಚನೆಯನ್ನು ತಾವು ದಯವಿಟ್ಟು ಗಂಭೀರವಾಗಿ ಮಾಡಿ ಮಹಿಳೆಯರಿಗೆ 30 ಪರ್ಸೆಂಟ್ ರಿಸರ್ವೇಶನ್ ಎಂದು ಮಾಡಿದ್ದೇವೆಂದು ತಾವು ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕೆಂದು ಮತ್ತೊಮ್ಮೆ ಹೇಳುತ್ತಿದ್ದೇನೆ. ತಾವು ಮೂರು-ನಾಲ್ಕು ವಿಷಯಗಳನ್ನು ಬಿಟ್ಟರೆ, ನೂರಕ್ಕೆ

90 ಪರ್ಸೆಂಟ್ ಹಳ್ಳಿಯ ಪರವಾಗಿ ಎಂದು ಹೇಳುವಂಥ ಮಾತು ಸುಳ್ಳಾಗಿದೆ. ಕೆಲವು ಕಾರ್ಯಕ್ರಮಗಳನ್ನು ಹೊಸದಾಗಿ ಅನುಷ್ಠಾನಕ್ಕೆ ತರುತ್ತಿದ್ದೀರಿ. ನಾನು ಕೆಲವು ಗಂಭೀರವಾದ ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಅದನ್ನು ತಾವು ಆಲೋಚನೆ ಮಾಡಬೇಕೆಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ; ನಮಸ್ಕಾರ.

ಉಪಾಧ್ಯಕ್ಷರು :- ಶರಣಪ್ಪನವರೇ, ನೀವು ಮಾತನಾಡುತ್ತೀರಾ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ನಾವು ಬೆಳಿಗ್ಗೆ 10 ಗಂಟೆಯಿಂದ ಇಲ್ಲಿ ಕುಳಿತುಕೊಂಡಿದ್ದೇವೆ, ನಾಳೆ ಒಂಭತ್ತೂವರೆ ಘಂಟೆಗೆ ಬೇಕಾದರೆ ಸೇರೋಣ.

ಶ್ರೀ ಸಿದ್ಧರಾಮಯ್ಯ :- ಅಲ್ಲಿ ಒಳಗಡೆ ಚರ್ಚೆಯಾಗುತ್ತಿದೆ. ಅವರು ಮಾತನಾಡಲಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಪಾಂಡವಪುರದ ಮಾಜಿ ಶಾಸಕರಾದ ಆರ್.ರಾಜಗೋಪಾಲ್ ಅವರು ನಿಧನರಾಗಿದ್ದಾರೆ. ಅವರ ಬಗ್ಗೆ ನಾನು ತಮಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಜಿ.ಬಿ.ಶಿವಕುಮಾರ್ :- ಈ ಸಭೆಯ ಮಾಜಿ ಶಾಸಕರಾಗಿದ್ದ ಶ್ರೀ ಕೆ.ಆರ್.ರಾಜಗೋಪಾಲ್ ಅವರು 78ನೇ ಇಸವಿಯಲ್ಲಿ ಇಲ್ಲಿಗೆ ಆಯ್ಕೆಯಾಗಿದ್ದರು. ಅವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಬೇಕು....

ಅಧ್ಯಕ್ಷರು :- ಅದನ್ನು ನಾಳೆಗೆ ಹಾಕಿಕೊಂಡಿದ್ದೇವೆ. ಈ ಸಭೆಯನ್ನು ಮುಂದಕ್ಕೆ ಹಾಕಿ ನಾಳೆ ಬೆಳಿಗ್ಗೆ ಒಂಭತ್ತೂವರೆ ಗಂಟೆಗೆ ಮತ್ತೆ ಸೇರುತ್ತದೆ.

(ಸದನವು 7 ಗಂಟೆ 30 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 29ನೇ ಮಾರ್ಚ್ ಮಾಹೆ 1995ರ ಬುಧವಾರದಂದು 9.30 ಗಂಟೆಗೆ ಸೇರಲು ನಿಶ್ಚಯಿಸಿತು)

⊕ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.